ಕಲಾವಿದ

ಪರಶುರಾಮಪ್ಪ ಚಿತ್ರಗಾರ ರವರ

ಕರಕುಶಲ ಕಲೆ ಮತ್ತು ಬದುಕಿನ ಅಧ್ಯಯನ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರು ಸಂಶೋಧನಾ ಸಂಪ್ರಬಂಧ



ನೋಂದಣೆ ಸಂಖ್ಯೆ : 180115030025

ಲಲಿತ ಕಲಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೯

ಕಲಾವಿದ ಪರಶುರಾಮಪ್ಪ ಚಿತ್ರಗಾರ

ಅವರ ಕರಕುಶಲ ಕಲೆ ಮತ್ತು ಬದುಕಿನ ಅಧ್ಯಯನ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದಕ್ಕೆ ಸಲ್ಲಿಸುತ್ತಿರುವ ಸಂಶೋಧನಾ ಸಂಪ್ರಬಂಧ)

ಸಂಶೋಧಕರು

(ಎಂ.ಫಿಲ್. ವಿಧ್ಯಾರ್ಥಿ)

ನೋಂದಣಿ ಸಂಖ್ಯೆ- ೧೮೦೧೧೫೦೩೦೦೨೫

ಲಲಿತಕಲಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೧೯

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

"ಮಾನವನ ಪ್ರಾಚೀನ ಇತಿಹಾಸವನ್ನು ನೋಡಿದಾಗ ಅತ್ಯಂತ ಕುತೂಹಲಕಾರಿ ಸಂಗತಿಗಳು ನಮಗೆ ತಿಳಿದು ಬರುತ್ತವೆ. ಮನುಷ್ಯ ನಿಸರ್ಗದ ಸಹಯೋಗದಲ್ಲಿ ಬದುಕ ತೊಡಗಿದಾಗ ಅನೇಕ ಭಾವನಾತ್ಮಕ ಪ್ರಕ್ರೀಯೆಗಳು ಹುಟ್ಟಿಕೊಂಡಿವೆ. ಅದೇ ಮಾನವನ ವಿದ್ಯೆ ಅಥವಾ ಜ್ಞಾನ ಸಂಪಾದನೆ ಎಂದು ತಿಳಿಯಬಹುದು. ಈ ಜ್ಞಾನ ಸಂಪಾದನೆಯ ಚಟುವಟಿಕೆಗಳನ್ನು ವಿದ್ವಾಂಸರು ಕಲೆ" ಎಂದು ಗುರುತಿಸಿದ್ದಾರೆ.

ಮನುಷ್ಯನ ಸೂಕ್ಷ್ಮ ಚಲನವಲನಗಳ ಅಧ್ಯಯನದ ಕ್ರಿಯೆಯನ್ನು ಕಲೆಯಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇಂದು ಮನುಷ್ಯನ ಜನ್ಮದ ರಹಸ್ಯ ಎಷ್ಟು ನಿಗೂಢವೂ ಕಲೆಯ ಉಗಮದ ರಹಸ್ಯವು ಅಷ್ಟೇ ನಿಗೂಢವಾಗಿ ಚಿಂತನೆಗೆ ಒಳಪಟ್ಟಿದೆ. ನಮ್ಮ ದೇಶದಲ್ಲಿ ಲಲಿತಕಲೆಗಳಿಗೆ ರಾಜ ಮಹರಾಜರು, ಶ್ರೀಮಂತರು ಉನ್ನತ ಸ್ಥಾನಮಾನ ಕೊಟ್ಟು ಚಿತ್ರ ಕಲಾವಿದರನ್ನು ಬೆಳೆಸಿಕೊಂಡು ಬಂದಿದ್ದಾರೆ. ಚಿತ್ರಕಲೆ ನಮ್ಮ ಸಂಸ್ಕೃತಿಯಲ್ಲಿ ಅಧಿಕ ಮನ್ನಣೆ ಪಡೆದು ವಿವಿಧ ಕಾಲಘಟ್ಟಗಳಲ್ಲಿ ಬೆಳೆಯುತ್ತಾ ಬಂದಿದೆ. ಚಿತ್ರಕಲೆಯು ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಇತಿಹಾಸವನ್ನು ಅವಲೋಕಿಸಿದಾಗ ಮೊಘಲ್, ರಜಪೂತ್, ಚಾಲುಕ್ಯ, ಹೊಯ್ಸಳ, ವಿಜಯನಗರ, ಮೈಸೂರು ಅರಸರಂತವರ ಕಾಲದಲ್ಲಿ ಅಷ್ಟೇ ಅಲ್ಲದೆ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯಲ್ಲಿ ಹೋರಾಟಕ್ಕೆ ಸಹಕರಿಸುತ್ತಾ ದಾಪುಗಾಲು ಹಾಕುತ್ತಾ ಈ ಕಲೆ ಬೆಳೆಯುತ್ತಾ ಅನೇಕ ಸಾಮ್ರಾಜ್ಯಗಳ ಕಾಲದಲ್ಲಿ ಮತ್ತು ವಿವಿಧ ಪ್ರದೇಶಗಳಲ್ಲಿ ಆಯಾ ಕಲಾವಿದರ ಮತ್ತು ಅಲ್ಲಿನ ಜನರ ಜೀವನ ಶೈಲಿಯನ್ನು ಹಾಗೂ ಶಿಕ್ಷಣವನ್ನು ಆಧಾರ ವಾಗಿಟ್ಟುಕೊಂಡು ಕಲೆಯು ಬೆಳೆದು ಬಂದಿದೆ."[೧]

೧. ಪ್ರಭಾಕರ ಕೆ.ಎಸ್., ಕಂಪ್ಲಿಯ ಕರಕುಶಲ ಕಲೆ(ಅ.ಪ್ರ), ಪು.೧೪

ಕಲೆಯ ಪ್ರಕಾರ ಅವುಗಳ ಗುಣಧರ್ಮಗಳು, ವೈವಿಧ್ಯತೆ ಸೊಬಗು ಇತ್ಯಾದಿ ಸಂಗತಿಗಳು ಜಾನಪದ ಕಲಾಪ್ರಕಾರಗಳ ಭವ್ಯತೆ ಅವುಗಳಲ್ಲಿನ ಸಾಂಸ್ಕೃತಿಕ ಶ್ರೀಮಂತಿಕೆಯ ಸ್ಪಷ್ಟ ದ್ಯೋತಕಗಳು ಇಂತಹ ಅನನ್ಯತೆಯಿಂದ ಕೂಡಿದ ಜಾನಪದ ಕಲೆಗಳಲ್ಲಿ ಕರಕುಶಲ ಕಲೆಯ ಸಹ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ. ಪಾರಂಪರಿಕವಾಗಿ ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿದ್ದ ಹಲವಾರು ಜನಪದ ಕಲೆಗಳು ಇಂದಿನ ಯಾಂತ್ರಿಕ ಬದುಕಿನ ನಡುವೆ ಮೂಲೆ ಸೇರಿವೆ ಹಾಗಾಗಿ ಕಂಪ್ಲಿಯಲ್ಲಿ ಇರುವಂತಹ ಕರಕುಶಲ ಕಲೆ ಮತ್ತು ಕಲಾವಿದರ ಕುರಿತು ಗಮನ ಸೆಳೆಯುವುದೇ ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಹೀಗಾಗಿ "ಕಂಪ್ಲಿಯ ಕರಕುಶಲ ಕಲೆಗಾರ ಶ್ರೀ ಪರಶುರಾಮಪ್ಪ ಚಿತ್ರಗಾರ ಅವರ ಕುರಿತು ಒಂದು ಅಧ್ಯಯನ" ನಡೆಸಲು ಇಚ್ಛಿಸಿದ್ದೇನೆ.

ಅಧ್ಯಯನದ ಉದ್ದೇಶ

ಶ್ರೀ ಪರಶುರಾಮಪ್ಪ ಕುರಿತು ಯಾಂತ್ರಿಕ ಬದುಕಿನ ನಡುವೆ ಗ್ರಾಮೀಣ ಕಲೆಗಳು ಮಾಯವಾಗುತ್ತಿರುವ ಇಂದಿನ ದಿನಗಳಲ್ಲಿ ಜನಸಾಮಾನ್ಯರಿಗೆ ಪರಿಚಯಿಸುವ ಸಲುವಾಗಿ ಮತ್ತು ಇವುಗಳ ಉಳಿಯುವಿಕೆಗಾಗಿ ಅಲ್ಲದೆ ಮುಂದಿನ ಪೀಳಿಗೆಗಾಗಿ ಈ ಕರಕುಶಲ ಕಲೆಗಳ ಬಗೆಗಿನ ತಿಳುವಳಿಕೆಯನ್ನು ನೀಡುವ ಸಲುವಾಗಿ ಎಂ.ಫಿಲ್. ಪದವಿಯ ಸಂಶೋಧನಾ ಸಂಪ್ರಬಂಧಕ್ಕೆ ಕರಕುಶಲ "ಕಲಾವಿದ ಶ್ರೀ ಪರಶುರಾಮಪ್ಪ ಚಿತ್ರಗಾರ" ಅವರ ಕುರಿತು ಒಂದು ಅಧ್ಯಯನ ಎಂಬ ವಿಷಯವನ್ನಾಧರಿಸಿ ಈ ಅಧ್ಯಯವನ್ನು ಕೈಗೆತ್ತಿಕೊಂಡಿದ್ದೇನೆ.

ಕರ್ನಾಟಕದ ಜನಪದ ಸಂಸ್ಕಾರ ಸಂಸ್ಕೃತಿಗಳನ್ನು ಕಲಾಕೃತಿ ಮೂಲಕ ಮನುಕುಲವೇ ತನ್ನತ್ತ ತಿರುಗಿ ನೋಡುವಂತೆ ಮಾಡಿದ್ದೇ ಕರಕುಶಲ ಕಲೆ. ಈ ಕಲೆಗೆ ಸಂಬಂಧಿಸಿದಂತೆ ಕ್ರಿ.ಶ. ೧೫೦೦ ರಿಂದ ಲಿಖಿತ ಪುರಾವೆಗಳು ದೊರೆಯುತ್ತವೆ. ಜೊತೆಗೆ ಈ ಕಲೆ ಪುರಾತನವಾದದ್ದು ವಿಜಯನಗರ ಸಾಮ್ರಾಜ್ಯದ ಸುವರ್ಣಕಾಲದಲ್ಲಿ ಕಂಪ್ಲಿಯ ಕರಕುಶಲಕಲೆ ವಿಕಸನಗೊಂಡಿತು. ಕುಶಲಕರ್ಮಿ ಪೂರ್ವಜರಿಗೆ ರಾಜ ಸನ್ನಿಧಿಯ ಚಿತ್ರಗಾರ ಎಂಬ ಮನ್ನಣೆ ಇತ್ತು. ವಿಜಯನಗರ ಪತನದ ನಂತರ ಈ ಕಲೆಗೆ ಹೈದರಾಬಾದ ನಿಜಾಮರು ಹಾಗೂ ದೇಸಾಯಿಗಳ ಪ್ರೋತ್ಸಾಹದಿಂದ ಹಿಂದೂ-ಮುಸ್ಲಿಂ ಶೈಲಿಯ ಸಾಮರಸ್ಯದಲ್ಲಿ ಹೊಸ ಆಯಾಮಗಳನ್ನು ಕರಕುಶಲಕಲೆ ಕಲಾವಿದರು ತಮ್ಮದೇ ಆದ ಸ್ಥಾನವನ್ನು ಪಡೆದಿದ್ದಾರೆ. ಇವರ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆಯದೇ ಇರುವುದು ಕಂಡುಬಂದಿದೆ. ಆದ್ದರಿಂದ ಇಲ್ಲಿನ ಪರಶುರಾಮಪ್ಪರ ಕಲಾವಿದರ ಕರಕುಶಲಕಲೆಯ ಕಲಾ ಬದುಕಿನ ಬಗ್ಗೆ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಕಂಪ್ಲಿಯಲ್ಲಿ ಸುಮಾರು ೩೦ ರಿಂದ ೪೦ ಚಿತ್ರಗಾರ ಕುಟುಂಬಗಳು ಕಲಾಕೃತಿ ರಚನೆಯಲ್ಲಿ ನಿರತವಾಗಿವೆ. ಇವರು ಸಾಂಪ್ರದಾಯಿಕ ದೇವರು ಮೂರ್ತಿಗಳಾದ ಗೌರಿ ಗಣೇಶ, ಉಯ್ಯಾಲೆ ಗೌರಿ, ಗೋಕುಲಾಷ್ಟಮಿ ಮೂರ್ತಿ, ಕಾಮರತಿ, ದ್ವಾರಪಾಲಕರು, ದೇವರವಾಹನಗಳು, ಲಕ್ಷ್ಮೀಮೂರ್ತಿ, ಶಿವಪಾರ್ವತಿ ಮೂರ್ತಿ, ಪಲ್ಲಕ್ಕಿ ಚೌಕಿಗಳು ಹಾಗೂ ಪ್ರಾಣಿ–ಪಕ್ಷಿಗಳು ಪ್ರತಿಕೃತಿಗಳನ್ನು ಅಮೋಘವಾಗಿ ತಯಾರಿಸುತ್ತಾರೆ, ಇಂತಹ ಹತ್ತು ಹಲವು ವಸ್ತುವಿಷಯಗಳಲ್ಲಿ ತಮ್ಮ ಕಲಾಕೃತಿ ರಚಿಸುವ ಸಂದರ್ಭದ ಪರಶುರಾಮಪ್ಪ ಕಲಾ ಸಂವೇದನಾಶೀಲ ಗುಣಗಳನ್ನು ಅಧ್ಯಯನಕ್ಕೆ ಒಳಪಡಿಸುವುದರ ಉದ್ದೇಶದಿಂದ ಸಂಶೋಧನೆಯ ಕಾರ್ಯವನ್ನು ನಡೆಸಿದೆ.

"ಕಲೆಗೆ ಯಾವುದೇ ವರ್ಣಭೇದ, ವಯಸ್ಸಿನ ಬೇಧ, ಲಿಂಗಭೇದವಿಲ್ಲ", ಇದು ಯಾರಿಗೆ ಬೇಕಾದರೂ ಒಲಿಯುತ್ತದೆ. ಅವರವರ ಆಸಕ್ತಿ ಅಭಿರುಚಿಗಳಿಗೆ ಅನುಗುಣವಾಗಿ ಅವರವರ ಮನೋಭಿಲಾಷೆಯಂತೆ ಹೊಮ್ಮುವುದು ಕರಕುಶಲ ಕಲೆ ಕೇವಲ ಪುರುಷರಿಗೆ ಮಾತ್ರ ಸೀಮಿತವಾಗಿಲ್ಲ ಅವರಷ್ಟೇ ಸರಿಸಮಾನರಾಗಿ ಮಹಿಳೆಯರು ಈ ಕಲೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅಳಿವಿನ ಅಂಚಿನಲ್ಲಿರುವ ಇಂತಹ ಕರಕುಶಲಕಲೆಗಳ ದಾಖಲೆ ಮಾಡುವುದು ತುಂಬಾ ಮುಖ್ಯ ಕಾರ್ಯವಾಗಿದೆ. ಅವುಗಳನ್ನು ಸಂಗ್ರಹಿಸಿ ಮುಂದಿನ ಸಮಾಜಕ್ಕೆ ಕಲೆ–ಕಲಾವಿದ ಮತ್ತು ಸಹೃದಯರ ವೈವಿಧ್ಯತೆಯನ್ನು ಅರಿತುಕೊಳ್ಳಲು ಸಹಕಾರಿಯಾಗುತ್ತದೆ ಎಂಬ ಉದ್ದೇಶದಿಂದ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಏಳು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡಿದ್ದು ಪ್ರತಿಯೊಂದು ಅಧ್ಯಾಯಗಳನ್ನು ಚರ್ಚಿಸುವ ವಿಷಯವನ್ನು ಕುರಿತಂತೆ ಅದರ ಸಂಕ್ಷಿಪ್ತ ಸ್ವರೂಪವನ್ನು ಇಲ್ಲಿ ಕೊಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ ಕುರಿತಾದ ವಿವರಣೆ ಇರುವುದು.

ಎರಡನೆಯ ಅಧ್ಯಾಯದಲ್ಲಿ ಕಲಾವಿದ "ಪರಶುರಾಮಪ್ಪ ಚಿತ್ರಗಾರ" ಅವರ ಸಾಂಸ್ಕೃತಿಕ ಪರಿಸರ ಮತ್ತು ಕೌಟುಂಬಿಕ ಜೀವನ ಕುರಿತು ವಿವರಣೆಗಳನ್ನು ಹೇಳಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಪರಶುರಾಮಪ್ಪ ಚಿತ್ರಗಾರ ಅವರ ಕರಕುಶಲ ಕಲೆಗಳ ವಸ್ತುವಿಷಯ ಮತ್ತು ವರ್ಗೀಕರಣ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ "ಕಲಾಕೃತಿಗಳ ರಚನೆಯ ವಿಧಾನ, ತಂತ್ರ, ಶೈಲಿ, ಪ್ರಭಾವ ಮತ್ತು ಪ್ರೇರಣೆಗಳ ಕುರಿತಾದ ವಿವರಣೆಗಳನ್ನು ಒಳಗೊಂಡಿರುತ್ತದೆ.

ಐದನೆಯ ಅಧ್ಯಾಯದಲ್ಲಿ "ಕಲಾವಿದ ಪರಶುರಾಮಪ್ಪ ಚಿತ್ರಗಾರ" ಅವರ ಸಾಧನೆಯ ಕುರಿತು ಪರಿಚಯಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಕಲಾವಿದ ಪರಶುರಾಮಪ್ಪ ಚಿತ್ರಗಾರ" ಅವರ ಪ್ರಸ್ತುತ ಸ್ಥಿತಿಗತಿ ಕುರಿತು ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಸಮಾರೋಪ ಹಂತವಾಗಿದ್ದು ಪ್ರಸ್ತುತ ಪ್ರತಿಯೊಂದು ಅಧ್ಯಾಯನಗಳ ಅಧ್ಯಯನದ ಫಲಿತಾಂಶದ ಕುರಿತಾದ ಸಮೀಕ್ಷಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಈ ಸಂಪ್ರಬಂಧದ ಅಧ್ಯಯನಕ್ಕಾಗಿ ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಇರುವಂತಹ ಕರಕುಶಲ ಕಲಾವಿದರಾದ ಶ್ರೀ ಪರಶುರಾಮಪ್ಪ ಚಿತ್ರಗಾರ ಕುರಿತು ಸಂಬಂಧಿಸಿದ್ದಾಗಿದೆ. ಈ ಅಧ್ಯಯನದಲ್ಲಿ ಮುಖ್ಯವಾಗಿ ಅವರ ಬದುಕು ಮತ್ತು ಕರಕುಶಲಕಲೆ ಬಗ್ಗೆ ವಿಶೇಷವಾಗಿ ಅಧ್ಯಯನ ಮಾಡಲಾಗಿದೆ. ಚಿತ್ರಗಾರ ಅವರ ಕರಕುಶಲಕಲೆಗಳು ಮತ್ತು ಅವರ ಜೀವನ ಸಾಧನೆಯನ್ನು ಅಧ್ಯಯನದ ವ್ಯಾಪ್ತಿಯನ್ನಾಗಿ ಸೀಮಿತಗೊಳಿಸಿಕೊಳ್ಳಲಾಗಿದೆ. ಇವರ ಕಲಾಕೃತಿಗಳು ಮತ್ತು ಸಾಧನೆ ತುಂಬಾ ವಿಸ್ತಾರವಾಗಿದೆ. ಆದರೆ ನಮ್ಮ ಸಂಶೋಧನೆಯ ಕಾಲ ಮಿತಿಯ ಚೌಕಟ್ಟಿನೊಳಗೆ ಸಾಧ್ಯವಾದಷ್ಟು ಕ್ಷೇತ್ರ ಕಾರ್ಯವನ್ನು ಮಾಡಿ ಈ ಸಂಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಇದುವರೆಗೆ ನಡೆದ ಅಧ್ಯಯನಗಳು

೧. ತರಂಗ ಮಾಸಿಕ ಪತ್ರಿಕೆ ೨೦೦೪ರಲ್ಲಿ "ಜಾನಪದ ಸಂವೇದನೆಯ ಕಲಾವಿದ ಪರಶುರಾಮಪ್ಪ" ಎಂದು ಪ್ರಕಟ.

೨. ಜೂನ್ ೨೦೦೫ರಲ್ಲಿ 'ಕಂಪ್ಲಿ' ಲೇಖನ ಕೃತಿಯಲ್ಲಿ ಕಂಪ್ಲಿ ಜನಪದ ಸಾಹಿತ್ಯ ಕಲೆ ಎಂಬ ಭಾಗದಲ್ಲಿ ಇವರನ್ನು ಉತ್ತಮ ಸ್ಥಳೀಯ ಕಲಾವಿದ ಎಂದು ಉಲ್ಲೇಖಿಸಲಾಗಿದೆ.

೩. ಕಲಾಮಂದಿರ ಕಲಾಶಾಲೆ ಬೆಂಗಳೂರು, ಫೆಬ್ರವರಿ ೨೦೧೧ರಲ್ಲಿ "ಚಿತ್ರಗಾರ ಪರಶು ರಾಮಪ್ಪ" ಎಂಬ ಕಿರು ಯೋಜನಾ ವರದಿ ಪುಸ್ತಕ ಪ್ರಕಟ.

೪. "ನಮ್ಮ ಜನಪದ" ಬಳ್ಳಾರಿ ಜಿಲ್ಲಾ ೧೫ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿನ ಕೃತಿಯಲ್ಲಿ "ಅಪರೂಪದ ಕಲಾವಿದ ಪರಶುರಾಮಪ್ಪ ಚಿತ್ರಗಾರ" ಎಂದು ಉಲ್ಲೇಖಿಸಲಾಗಿದೆ.

೫. ಕುವೆಂಪು ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ. ೨೦೧೨-೧೩ನೇ ಸಾಲಿನ 'ಕಂಪ್ಲಿಯ ಕರಕುಶಲ ಕಲೆಗಳು' ಒಂದು ಅಧ್ಯಾಯನ ಎಂಬ ಕಿರು ಪ್ರಬಂಧ ಮೂಲ ಸಂಶೋಧನಾ ಕೃತಿ.

ಅಧ್ಯಯನದ ವೈಧಾನಿಕತೆ

ಈ ಅಧ್ಯಯನಕ್ಕೆ ಎರಡು ರೀತಿಯ ವಿಧಾನವನ್ನು ಅನುಸರಿಸಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಅನುಷಂಗಿಕ ಆಕರ ಸಾಮಗ್ರಿ

೧. ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ ಇದರಲ್ಲಿ ಧ್ವನಿ ಮುದ್ರಣ, ಸಂದರ್ಶನ, ಛಾಯಾಚಿತ್ರಣ ಮಾಡುವದು ಮತ್ತು ವಿಶೇಷವಾಗಿ ಈ ಕರಕುಶಲ ಕಲಾವಿದರ ಮನೆಗೆ ಭೇಟಿ ಕೊಟ್ಟು ಅವರ ಕರಕುಶಲ ಕಲೆಗಳ ಬಗ್ಗೆ ಆ ಮನೆಯ ಎಲ್ಲಾ ಸದಸ್ಯರನ್ನು ಸಂದರ್ಶಿಸಿ ಕಲೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಲಾಗಿದೆ. ಕಲಾವಿದರು ಕಲೆಯ ಬಗ್ಗೆ ಪ್ರೇರಣೆ ಪಡೆದು ಕೆತ್ತನೆ ಮಾಡಿದ ರೀತಿ ಅವರ ತಂತ್ರಗಾರಿಕೆ, ಶೈಲಿಯನ್ನು ದಾಖಲೆ ಮಾಡಲಾಗಿದೆ. ಸಂದರ್ಶನದಲ್ಲಿ ಸರಳವಾಗಿ ಅಧ್ಯಯನಕ್ಕೆ ಸಂಬಂಧಪಟ್ಟ ಪ್ರಶ್ನೆ ಕೇಳುವ ವಿಧಾನದಿಂದ ಅವರ ಕಲಾಚಟುವಟಿಕೆಯ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

೨. ಅನುಷಂಗಿಕ ಆಕಾರ ಸಾಮಗ್ರಿ

ಈ ಸಂಶೋಧನ ಸಂಪ್ರಬಂಧಕ್ಕೆ ಸಂಬಂಧಿಸಿದ ಮುದ್ರಣಗೊಂಡ ಪುಸ್ತಕ, ದಿನಪತ್ರಿಕೆ, ಪ್ರಕಟಣೆಗಳು, ಲೇಖನಗಳು, ಕಿರುಪ್ರಬಂಧಗಳು ಇತರೆ ಸಾಹಿತ್ಯ ಕೃತಿಗಳು ಬೇರೆ ಬೇರೆಯ ವರಿಂದ ಪ್ರಕಟಗೊಂಡ ಮಾಹಿತಿ ಹಾಗೂ ಇನ್ನಿತರರ ಅಭಿಪ್ರಾಯಗಳು ಹೀಗೆ ಮುಂತಾದ ವಿವರಗಳನ್ನು ಅನುಷಂಗೀಕ ಆಕರ ಸಾಮಾಗ್ರಿಗಳನ್ನು ಈ ಸಂಶೋಧನಾ ಸಂಪ್ರಬಂಧದ ರಚನೆಯಲ್ಲಿ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಸಂದರ್ಶನ

ಬಳ್ಳಾರಿ ಜಿಲ್ಲೆ ಕಂಪ್ಲಿಯಲ್ಲಿರುವಂತಹ ಕಲಾವಿದ ಪರಶುರಾಮಪ್ಪ ಚಿತ್ರಗಾರರವರ ಕರಕುಶಲ ಮತ್ತು ಬದುಕಿನ ವಿಷಯವಾಗಿ ಆಯ್ಕೆಮಾಡಿಕೊಂಡು ಅವರ ಅಲ್ಲಿಯ ಈ

ಕರಕುಶಲ ಕಲೆಗಳನ್ನು ಮಾಡುವಂತಹ ಜನಪದ ಕಲಾವಿದರ ಮನೆಗಳಿಗೆ ಭೇಟಿ ಕೊಟ್ಟು ಅವರ ಕರಕುಶಲ ಕಲೆಗೆ ಸಂಬಂಧಿಸಿದ ವಿಷಯದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಸಂದರ್ಭದಲ್ಲಿ ಕಲೆ ಬಗ್ಗೆ ಚರ್ಚಿಸಿದ್ದಲ್ಲದೆ, ಧ್ವನಿ ಮುದ್ರಿತ ಮಾಹಿತಿಯನ್ನು ಸಂಗ್ರಹಿಸಿಡಲಾಗಿದೆ. ಸಂದರ್ಶನದಲ್ಲಿ ಅವರ ಮಾತುಗಳನ್ನು ಧ್ವನಿ ಮುದ್ರಿಸಿಕೊಂಡಂತೆ ಅವಶ್ಯಕವೆನಿಸಿದ ಚಿತ್ರಗಳನ್ನು ಛಾಯಾಚಿತ್ರಣದ ಮೂಲಕ ಸೆರೆಹಿಡಿಯಲಾಗಿದೆ. ಅಲ್ಲದೇ ಕೆಲವು ಚಿತ್ರಗಳನ್ನು ಅಲ್ಲಿಯ ಸ್ಥಳೀಯ ಕಲಾವಿದರಿಂದ ಪಡೆದು ಪ್ರತಿ ಮಾಡಿಸುವುದರ ಮೂಲಕ ಛಾಯಾಚಿತ್ರಗಳನ್ನು ಸಂಗ್ರಹಿಸಲಾಗಿದೆ.

ಸಂಗ್ರಹಿತ ವಿಷಯ ಪಟ್ಟಿಕೆಗಳನ್ನು ಸಿದ್ದಪಡಿಸುವಿಕೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಡೆದ ವಿವರಗಳನ್ನು ಅಭ್ಯಾಸಕ್ಕೆ-ಬರವಣಿಗೆಗೆ ಅನುಕೂಲವಾಗುವಂತೆ ಪಟ್ಟಿಕೆಗಳನ್ನು ಟಿಪ್ಪಣಿ ಮಾಡಿಕೊಂಡು ಸಂಪ್ರಬಂಧಕ್ಕೆ ಅವಶ್ಯಕವಾದ ವಿಷಯಕ್ಕೆ ಸಂಭದಿಸಿದ ಮಾಹಿತಿಯನ್ನು ಸಂಶೋಧನಾತ್ಮಕವಾಗಿ ಸಂಗ್ರಹಿಸಿಕೊಳ್ಳಲಾಗಿದೆ.

ಅಧ್ಯಾಯ : ಎರಡು

ಕಲಾವಿದ ಪರಶುರಾಮಪ್ಪ ಅವರ ಸಾಂಸ್ಕೃತಿಕ ಪರಿಸರ ಮತ್ತು ಕೌಟುಂಬಿಕ ಜೀವನ

ಅಧ್ಯಾಯ : ಎರಡು

ಕಲಾವಿದ ಪರಶುರಾಮಪ್ಪ ಅವರ ಸಾಂಸ್ಕೃತಿಕ ಪರಿಸರ ಮತ್ತು ಕೌಟುಂಬಿಕ ಜೀವನ

ಕಂಪ್ಲಿಯು ಹೊಸಪೇಟೆ ತಾಲ್ಲೂಕಿಗೆ ಸೇರಿದ ಒಂದು ಪಟ್ಟಣ ಪ್ರದೇಶ. ಹೊಸಪೇಟೆಯಿಂದ ನೈರುತ್ಯದಿಕ್ಕಿಗೆ ೩೩. ಕಿ.ಮೀ ದೂರದ ಗಂಗಾವತಿ ಮಾರ್ಗದಲ್ಲಿ ತುಂಗಭದ್ರಾನದಿಯ ದಂಡೆಯ ಮೇಲಿದೆ. ಕೃಷಿ ವ್ಯಾಪಾರದಿಂದ ಸಮೃದ್ಧವಾಗಿರುವ ಕಂಪ್ಲಿಯು ಹತ್ತಾರು ಅಕ್ಕಿ ಗಿರಣಿಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡು ವಿಸ್ಮಯವಾಗಿ ಬೆಳೆದಿದೆ. ಇದು ಪ್ರಾಚೀನ ಕಾಲದಲ್ಲಿ ನೊಳಂಬರ ನೊಳಂಬವಾಡಿ ಕ್ರಿಶ ೨೩೦೦ಕ್ಕೆ ಹಿಂದೆ ರಾಜಧಾನಿಯಾಗಿತ್ತು. ಕಂಪ್ಲಿ ಪಟ್ಟಣವು ಹಳೆ ಹೊಸ ಊರುಗಳನ್ನು ಸೇರಿಕೊಂಡಿವೆ. ಊರಿನಲ್ಲಿ ಕೋಟೆಗಳಂತಹ ಮತ್ತು ಅದರ ಆಸುಪಾಸಿನಲ್ಲಿ ಪ್ರಾಚೀನ ಸ್ಮಾರಕಗಳ ಕುರುಹುಗಳು ಅಲ್ಲಿನ ದೃಶ್ಯಕಲೆಯ ಮೆರಗನ್ನು ಹೆಚ್ಚಿಸುತ್ತಿವೆ.

ಕ್ರಿಶ ೧೦೬೨ರ ಹೂವಿನಹಡಗಲಿಯ ಪಾಂಡುರಂಗ ದೇವಾಲಯದ ಆವರಣದಲ್ಲಿರುವ ಶಾಸನದದಿಂದ ತಿಳಿದುಬರುವಂತೆ ಕಲ್ಯಾಣದಲ್ಲಿ ತ್ರೈಲೋಕ್ಯ ಮಲ್ಲದೇವನು(ಒಂದನೇಯ ಸೋಮೇಶ್ವರು ಆಳುತ್ತಿರುವಾಗ ಆತನ ಮಗ ವಿಜಯಾದಿತ್ಯನು ನೊಳಂಬವಾಡಿ ೩೨೦೦ ದಕ್ಷಿಣಭಾಗದ ಬಹುದೊಡ್ಡ ಪ್ರಾಂತ್ಯವಾಗಿದ್ದು ಇದು ಕರ್ನಾಟಕದ ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು, ಹಾಸನ, ಬಳ್ಳಾರಿ ಜಿಲ್ಲೆಗಳು ಆಂಧ್ರದ ಅನಂತಪುರ, ಚಿತ್ತೂರು ಜಿಲ್ಲೆಗಳು ತಮಿಳುನಾಡಿನ ಉತ್ತರ ಕರ್ನಾಟಕ ಮತ್ತು ಧರ್ಮಪುರಿ ಜಿಲ್ಲೆಗಳನ್ನು ಒಳಗೊಂಡ ವಿಶಾಲ ಪ್ರಾಂತವಾಗಿದೆ. ಈ ಪ್ರಾಂತ್ಯಕ್ಕೆ ಕಂಪ್ಲಿ ರಾಜಧಾನಿ ಕಲ್ಯಾಣ ಚಾಲುಕ್ಯರ ನಂತರ ಈ ಪ್ರದೇಶ ಹೊಯ್ಸಳರ ವಶಕ್ಕೆ ಸೇರಿತು. ಹೊಯ್ಸಳ ವಿಷ್ಣುವರ್ಧನನು ಕಂಪ್ಲಿ ಇತಿಹಾಸದ ಪುನರಚನೆಗೆ ಪ್ರಮುಖವಾಗಿ ಶಿಲಾಶಾಸನಗಳು, ಶಿಲ್ಪಗಳು, ಕಾವ್ಯಗಳು, ಕೈಫಿಯತ್ತುಗಳು

ದೊರೆಯುತ್ತವೆ. ಅದೇ ರೀತಿ ಕಂಪ್ಲಿಯ ಪ್ರಾಚೀನ ದೇವಾಲಯ ಶಿಲ್ಪಗಳು ಮೌಖಿಕ ಪರಂಪರೆಯ ಮಾಹಿತಿಗಳು ಸಹಾಯಕಾರಿಯಾಗಿವೆ. ಈ ಎಲ್ಲಾ ದೃಶ್ಯಕಲೆಯ ಆಕರಗಳ ವ್ಯವಸ್ಥಿತ ಅಧ್ಯಯನ ಹಾಗೂ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ನಿರೂಪಿಸಬಹುದಾದ ಕಂಪ್ಲಿಯ ದೃಶ್ಯಕಲಾ ಇತಿಹಾಸವನ್ನು ಸಂಶೋಧನಾತ್ಮಕವಾಗಿ ತಿಳಿದುಕೊಳ್ಳಬಹುದು.

ಕಂಪ್ಲಿಯ ಸ್ಥಳನಾಮ

"ಕಂಪಲಿ, ಕಂಪ್ಲಿ ಎನ್ನುವ ಹೆಸರು ಬಂದ ಬಗೆಗೆ ಮುಖ್ಯವಾಗಿ ಮೂರು ರೀತಿಯ ನಂಬಿಕೆಗಳಿವೆ. ತಾಲ್ಲೂಕಾ ಕಂಪಲಿ ಕೈಫಿಯತ್ತಿನ ಉಲ್ಲೇಖದ ಪ್ರಕಾರ ತುಂಗಭದ್ರಾ ನದಿ ತೀರದ ಸ್ಥಳ ತ್ರೇತಾಯುಗದಲ್ಲಿ ಕೂರ್ಮಕ್ಷೇತ್ರವಾಗಿದ್ದು, ಇಲ್ಲಿ ಕಪಿಲನೆಂಬ ಮುನಿಯೋರ್ವನು ಆಶ್ರಮವನ್ನು ಕಟ್ಟಿಕೊಂಡು ತಪಗೈದನೆಂದು, ಮುನಿಯ ಹೆಸರಿನಿಂದಾಗಿ ಈ ಸ್ಥಳ ಕಪಿಲ "ಕಂಪಿಲ" ವೆಂದಾಯಿತೆನ್ನುವುದು ಒಂದು ನಂಬಿಕೆ. ಸ್ಥಳೀಯ ಹೇಳಿಕೆಗಳ ಪ್ರಕಾರ ಈ ಸ್ಥಳದ ವೀರನೊಬ್ಬನು ಕೆಂಪು ಹುಲಿಯನ್ನು ಕೊಂದಿದ್ದರಿಂದ ಕೆಂಪು ಹುಲಿರಾಯನೆಂದು ಕರೆಯಲ್ಪಟ್ಟನು. ಕಾಲಕ್ರಮೇಣ ಇವನು ಕಂಪಿಲರಾಯನೆಂದು ಇವನು ಆಳ್ವಿಕೆ ನಡೆಸಿದ ಸ್ಥಳ "ಕಂಪಲಿ" ಎಂದು ಕರೆಯಲ್ಪಟ್ಟಿತೆನ್ನವುದು ಎರಡನೆಯ ನಂಬಿಕೆ. ಭಟ್ಟರಹಳ್ಳಿ ಕೈಫಿಯತ್ತು ಗಳಲ್ಲಿ ಕುಮಾರರಾಮನ ತಂದೆಯನ್ನು ಕಂಪಲಿರಾಯನನ್ನು ಹೆಬ್ಬುಲಿ ಕಂಪಿಲರಾಯನೆಂದು ಕರೆಯಲಾಗಿರುವುದು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಸ್ಥಳೀಯ ಹೇಳಿಕೆ ಪ್ರಕಾರ ಕೆಂಪು ಹುಲಿರಾಯ ಚಾರಿತ್ರಿಕ ವ್ಯಕ್ತಿ ಕಂಪಿಲರಾಯ ಆಗಿರಬಹುದಾದ ಸಾಧ್ಯತೆ ಇಲ್ಲದಿಲ್ಲ ವಾಗಿದೆ. ಕಂಪ್ಲಿಯ ಸೋಮೇಶ್ವರ ದೇವಾಲಯದ ಉತ್ತರದ ಹೊರಭಿತ್ತಿಯಲ್ಲಿ ಹುಲಿಯೊಡನೆ ವೀರನೊಬ್ಬನ ಶಿಲ್ಪವಿರುವುದು ಇಲ್ಲಿ ಕುತೂಹಲದಾಯಕ. ಮೂರನೆಯದಾಗಿ ದರೋಜಿ ಗ್ರಾಮದ ಕೈಫಿಯತ್ತಿನ ಉಲ್ಲೇಖದಂತೆ ಬೇಡ ಕುಲದ ಕಂಪ್ಲಿರಾಯ ಕುಮ್ಮಟವೆಂಬೊ ಗ್ರಾಮದಲ್ಲಿ ಕಿರಾತಕನಾಗಿದ್ದನು, ಅವನು ಒಂದು ದಿನ ಬೇಟೆಗಾಗಿ ಕೊರ್ಮ್ಯಕ್ಷೇತ್ರಕ್ಕೆ ಬಂದನು. ಈ ಕಂಪ್ಲಿ ಹುಟ್ಟಿದ ಸ್ಥಳ ಗಡ್ಡೆ ಬೆಳೆದ ರೂಪವಾಗಿತ್ತು."[೧] ಇಲ್ಲಿ ಒಂದು ನಾಯಿ(ಮೂಲದಲ್ಲಿ ಇಲ್ಲಿಯ ಹೆಸರು ನಾಶವಾಗಿದೆ. ಪ್ರಾಯಶಃ ಮೊಲವಿರಬೇಕು)ಕಡಿದಾಡುತ್ತಿದ್ದವು. ಸ್ಥಳದ ಮಹತ್ವ ಅರಿತ ಕಂಪ್ಲಿರಾಯ ಈ ಗಡ್ಡೆ ಕಡಿದು ಒಂದು ಗ್ರಾಮ ಹುಟ್ಟಿಸಿ ತನ್ನ ಹೆಸರಿನಲ್ಲಿ ಕಂಪ್ಲಿಯೆಂಬ ಹೆಸರಿಟ್ಟನೆಂಬುದಾಗಿ ಇತಿಹಾಸ ಅಧ್ಯಯನದಿಂದ ತಿಳಿದುಬರುತ್ತದೆ.

---

೧. ಪ್ರಭಾಕರ ಕೆ.ಎಸ್., ಕಂಪ್ಲಿಯ ಕರಕುಶಲ ಕಲೆ(ಅ.ಪ್ರ), ಪು.೬-೭

ಕಂಪ್ಲಿಯ ಕಲೆ ಮತ್ತು ಸಂಸ್ಕೃತಿ

"ಕಪಿಲರಾಯ ಆಳಿದಂತಹ ಕಂಪ್ಲಿಯಲ್ಲಿ ಕಲೆಯ ಸ್ಥಾನಮಾನಗಳು ಬಹುವಿಸ್ತಾರವಾಗಿ ಕಂಡುಬರುತ್ತವೆ. ಈ ನಗರದಲ್ಲಿ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ಆಚರಣೆಯಲ್ಲಿ ಇಲ್ಲಿಯ ಕಲೆ ಬಹುಮುಖ್ಯವಾದ ಹೆಸರಾಗಿರುವುದನ್ನು ಕಾಣಬಹುದು. ಇದಕ್ಕೆ ನಿದರ್ಶನ ಎಂಬಂತೆ ಚೈತ್ರಮಾಸದಲ್ಲಿ ಬರುವ ಬಸವ ಜಯಂತಿ ಆಚರಣೆಯು ಕಲಾತ್ಮಕತೆಯಿಂದ ಕೂಡಿರುತ್ತದೆ. ಶ್ರೀ ಕನ್ನಿಕಾಪರಮೇಶ್ವರಿ ಮತ್ತು ಶ್ರೀ ನಿಮಿಶಾಂಭ ದೇವಿಯ ಜಯಂತಿ ಪ್ರಯುಕ್ತ ಕಲೆಯಿಂದ ಅಲಂಕರಣಗೊಂಡ ಮೆರವಣಿಗೆ ಕಂಪ್ಲಿಯ ಸಂಪ್ರದಾಯವಾಗಿದೆ. ವೈಶಾಖ ಮಾಸದಲ್ಲಿ ಕಾರಹುಣ್ಣಿಮೆಯ ದಿನದಂದು ಎತ್ತುಗಳ ಕೋಡುಗಳಿಗೆ ಬಣ್ಣದಿಂದ ಅಲಂಕರಿಸುವುದು, ಅಲ್ಲದೇ ಜೇಷ್ಠ ಮಾಸದಲ್ಲಿ ಮಣ್ಣಿನಿಂದ ಮಾಡಿದ ಮಣ್ಣೆತ್ತುಗಳನ್ನು ಪೂಜಿಸುವುದು ವಾಡಿಕೆಯಾಗಿದೆ. ಶ್ರಾವಣ ಮಾಸದಲ್ಲಿ ಆಚರಿಸುವ ನಾಗರ ಪಂಚಮಿ ದಿನದಂದು ಹುತ್ತದ ಮಣ್ಣು ಅಥವಾ ಜೇಡಿಮಣ್ಣಿನಿಂದ ಮಾಡಿದ ನಾಗಪ್ಪಗಳನ್ನು ಪೂಜಿಸುವುದು ಒಂದು ಆಚರಣೆಯಾಗಿದೆ. ಈ ಒಂದು ಹಬ್ಬದಲ್ಲಿ ಅಲ್ಲಿನ ಸ್ಥಳೀಯ ಜನಪದ ದೃಶ್ಯಕಲಾವಿದರು ನಾಗಪ್ಪ ಮತ್ತು ಮಣ್ಣೆತ್ತುಗಳನ್ನು ನಿರ್ಮಿಸಿ ಅವುಗಳಿಗೆ ವೈವಿಧ್ಯಮಯವಾದ ವರ್ಣಗಾರಿಕೆಯನ್ನು ಮಾಡುವುಸಸಸಸಸದನ್ನು ಸಂಶೋಧನಾತ್ಮಕವಾಗಿ ಅಧ್ಯಯನ ನಡೆಸಲಾಗಿದೆ."[೨]

ಅಲ್ಲದೇ ಸ್ಥಳೀಯ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಶ್ರಾವಣ ಮಾಸದಲ್ಲಿ ದೇವರುಗಳ ಜೋಡಣೆ ಪುಷ್ಪದೊಂದಿಗೆ ಅಲಂಕಾರ ಮಾಡಿ ಊರ ಬೀದಿಯಲ್ಲಿ ಮೆರವಣಿಗೆ ಮಾಡುವದು ಸಂಪ್ರದಾಯವಾಗಿದೆ.

ಶ್ರೀ ಕೃಷ್ಣ ಜನ್ಮಾಷ್ಟಮಿಯಂದು ಮಣ್ಣಿನಿಂದ ಮಾಡಿದ ಶ್ರೀಕೃಷ್ಣನ ವಿಗ್ರಹವನ್ನು ಪೂಜೆ ಮಾಡುವುದು, ಬಾದ್ರಪದ ಮಾಸದಲ್ಲಿ ಶ್ರೀ ಗಣೇಶ ಚತುರ್ಥಿ ಹಬ್ಬದಂದು ಪೂಜಿಸುವ ಗಣಪತಿ ಮೂರ್ತಿಗಳನ್ನು ನಾನಾ ರೂಪದಲ್ಲಿ ತಯಾರಿಸುತ್ತಾರೆ. ಇಲ್ಲಿ ಗಣೇಶ ಮತ್ತು ಕೃಷ್ಣನ ಮೂರ್ತಿಗಳನ್ನು ಪರಸ್ಥಳದಿಂದಲೂ ಆಗಮಿಸಿ ಮೂರ್ತಿಗಳನ್ನು ತೆಗೆದುಕೊಂಡು ಹೊಗುತ್ತಾರೆ. ಅಲ್ಲದೇ ಈ ಗಣೇಶ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಣೆ ಮಾಡುತ್ತಾರೆ. ಇತಂಹ ಮೂರ್ತಿಗಳನ್ನು ಅಲ್ಲಿನ ಕುಂಬಾರ ಮನೆತನ ಹಾಗೂ ಇತರರು ಕೊಡ ಹಬ್ಬದ ಆಚರಣೆಗಾಗಿ ಕಲಾತ್ಮಕ ಮೂರ್ತಿಯನ್ನು ಪ್ರಾಚೀನದಿಂದಲು ನಿರ್ಮಿಸಿಕೊಂಡು

---

೨. ಪ್ರಭಾಕರ ಕೆ.ಎಸ್., ಕಂಪ್ಲಿಯ ಕರಕುಶಲ ಕಲೆ(ಅ.ಪ್ರ), ಪು.೭–೮

ಬಂದಿರುವುದು ಕಂಪ್ಲಿ ಪರಿಸರದಲ್ಲಿ ಲಲಿತಕಲೆಯ ನೀರಂತರ ಬೆಳವಣಿಗೆಯನ್ನು ಸಂಶೋಧನಾತ್ಮಕವಾಗಿ ಜನಪದರಲ್ಲಿ ಕಂಡುಬಂದಿರುತ್ತದೆ.

ಕಂಪ್ಲಿಯ ಪ್ರದೇಶದ ಚಾರಿತ್ರಿಕ ಹಿನ್ನೆಲೆ

ಕಂಪ್ಲಿ-ಹಂಪಿ-ಆನೆಗುಂದಿಗಳನ್ನೊಳಗೊಂಡ ಈ ಪ್ರದೇಶ ಮಹಾಕಾವ್ಯಗಳ ಕಾಲದಿಂದಲೂ ಪ್ರಸಿದ್ಧವಾಗಿದೆ. ರಾಮಾಯಣದ ವಾನನರ ಕಿಷ್ಕಿಂದಾ ರಾಜ್ಯ ಈ ಪ್ರದೇಶದಲ್ಲಿತ್ತೆಂದು ನಂಬಲಾಗಿದೆ. ಕಂಪ್ಲಿಯ ಸುತ್ತಲೂ ವಾಲಿಕಾಷ್ಟ (ವೆಂಕಟಾಪೂರ) ತಾರಪರ್ವತ, ವಾಲಿಖಿಲ್ಲಾ, ಚಂಚಲಕೋಟೆ, ಅಂಜನಾದ್ರಿ, ಭಂಡಾರ (ಆನೆಗುಂದಿ) ಮುಂತಾದ ರಾಮಾಯಣದಲ್ಲಿ ಉಲ್ಲೇಖಿತ ಸ್ಥಳಗಳಿವೆ. ಕಂಪ್ಲಿಯಿಂದ ನದಿ ಆಚೆ ಬದಿಯಲ್ಲಿ ಅಯೋಧ್ಯಾ ಎಂಬ ಹಾಗೂ ಆನೆಗುಂದಿ ಬಳಿ ರಾಮಾಪುರ ಎಂಬ ಪ್ರಾಚೀನ ಹಳ್ಳಿಗಳಿರುವುದು ಗಮನಾರ್ಹ. ಇತಿಹಾಸ ಆರಂಭ ಕಾಲದಲ್ಲಿ ಭಾರತವನ್ನಾಳಿದ ನಂದ ಮೌರ್ಯ ಮನೆತನಗಳ ಪ್ರಭುತ್ವ ಕಂಪ್ಲಿ ಪ್ರದೇಶದ ಮೇಲೆ ಸ್ಥಾಪಿತವಾಗಿತ್ತು. ಆ ಕಾಲದಲ್ಲಿ ಕುಂತಳವೆಂದು ಕರೆಯಲ್ಪಟ್ಟ ಈ ಪ್ರದೇಶಕ್ಕೆ ನಂದರು ಅಧಿಪತಿಗಳಾಗಿದ್ದರೆಂದು ಕ್ರಿ.ಶ ೧೦ನೇ ಶತಮಾನದ ಕನ್ನಡ ಶಾಸನಗಳು ತಿಳಿಸುತ್ತವೆ. ಮೌರ್ಯರ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶ ವಿಶೇಷ ಮಹತ್ವ ಪಡೆದಿರಬೇಕು ಏಕೆಂದರೆ ಕಂಪ್ಲಿ ಸುತ್ತಲಿನ ಉದೆಗೋಳ, ನಿಟ್ಟೂರು(ಸಿರಗುಪ್ಪ ತಾಲ್ಲೂಕು ಬಳ್ಳಾರಿ ಜಿಲ್ಲೆ) ಮಸ್ಕಿ, ಲಿಂಗಸೂರು ತಾಲ್ಲೂಕು ರಾಯಚೂರು ಜಿಲ್ಲೆ ಮತ್ತು ಕೊಪ್ಪಳಗಳಲ್ಲಿ ಅಶೋಕ ಸಾಮ್ರಾಟನ ಏಳು ಲಘು ಶಾಸನಗಳು ಕಂಡುಬಂದಿರುವುದು, ಬಹುಮಟ್ಟಿಗೆ ಅವು ಅಶೋಕನ ಹೆಸರನ್ನು ಉಲ್ಲೇಖಿಸಿರುವುದನ್ನು ಗಮನಿಸಬಹುದು. ಮೌರ್ಯ ಸಾಮ್ರಾಜ್ಯದ ಪತನದ ನಂತರ ಅಧಿಕಾರಕ್ಕೆ ಬಂದ ಶಾತವಾಹನರ ಮೂಲ ನೆಲೆ ಶಾತವನಿಹರಕ್ಕ ಎಂದು ಕರೆಯ ಲ್ಪಟ್ಟಿದ್ದ ಕಂಪ್ಲಿ ಬಳ್ಳಾರಿ ಪ್ರದೇಶವೇ ಮ್ಯಾಕಡೋಣಿ ಮತ್ತು ಹಿರೇಹಡಗಲಿ ಶಾಸನಗಳನ್ನು ಉಲ್ಲೇಖಿಸಿ ಡಾ. ಸುಕ್ತಂಕರ ಅಭಿಪ್ರಾಯಪಟ್ಟಿದ್ದಾರೆ.

"ಹಂಪಿಯ ಇತ್ತೀಚಿನ ಉತ್ಖನನದಲ್ಲಿ ಕ್ರಿ.ಶ ೨ನೇ ಶತಮಾನಕ್ಕೆ ಸೇರಿದ ಬ್ರಾಹ್ಮೀ ಶಾಸನ ಮತ್ತು ಕೆಲವು ಶಿಲ್ಪ ಪಟ್ಟಿಕೆಗಳು ದೊರೆತಿವೆ. ಇವುಗಳಿಂದ ಈ ಪ್ರದೇಶ ಕ್ರಮವಾಗಿ ಕನ್ನಡ ನಾಡನ್ನಾಳಿದ ಕದಂಬ, ಗಂಗ, ಬದಾಮಿ ಚಾಲುಕ್ಯ ಮತ್ತು ರಾಷ್ಟ್ರಕೂಟರು ಪ್ರಭುತ್ವಕ್ಕೆ ಒಳಪಟ್ಟಿತ್ತು. ರಾಷ್ಟ್ರಕೂಟರ ಮಾಂಡಲಿಕರಾದ ನೊಳಂಬ ಪಲ್ಲವರು ಮುಂದೆ ಕಲ್ಯಾಣ ಚಾಲುಕ್ಯ ಸಾರ್ವಭೌಮತ್ವದಡಿಯಲ್ಲಿ ಕಂಪ್ಲಿಗೆ ಆಗಮಿಸಿ ಆಡಳಿತ ಪ್ರಾರಂಭಿಸುವರೊಂದಿಗೆ ಕಂಪ್ಲಿಯ ಅಧೀಕೃತ ರಾಜಕೀಯ ಚರಿತ್ರೆ ಪ್ರಾರಂಭವಾಗುತ್ತದೆ."[೩]

---

೩. ಪ್ರಭಾಕರ ಕೆ.ಎಸ್., ಕಂಪ್ಲಿಯ ಕರಕುಶಲ ಕಲೆ(ಅ.ಪ್ರ), ಪು.೯

ನೊಳಂಬ ಪಲ್ಲವರ ಆಳ್ವಿಕೆ

"ಕ್ರಿ.ಶ. ೯೭೩ರಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗೊಳಿಸಿದ ಕಲ್ಯಾಣದ ಚಾಲುಕ್ಯರು ಅಧಿಕಾರಕ್ಕೆ ಬರಲು ನೊಳಂಬವಾಡಿಯ ಮೇಲೂ ಅವರ ಸಾರ್ವಭೌಮತ್ವ ಸ್ಥಾಪಿತವಾಯಿತು. ರಾಷ್ಟ್ರಕೂಟರ ಸಾಮಂತರಾಗಿದ್ದ ನೂಳಂಬ ಪಲ್ಲವರು ಚಾಲುಕ್ಯರ ಸರ್ವಭೌಮತ್ವವನ್ನು ಒಪ್ಪಿಕೊಂಡು ನೊಳಂಬವಾಡಿಯ ಹಲವಾರು ಪ್ರದೇಶವನ್ನು ನೂತನ ರಾಜಧಾನಿ ಕಂಪ್ಲಿಯಿಂದ ಆಳುತ್ತಾರೆ."[೪]

ಹೊಯ್ಸಳರ ಕಾಲದಲ್ಲಿ

"ಕಂಪ್ಲಿಯನ್ನೊಳಗೊಂಡಂತೆ ಸುತ್ತಲಿನ ಪ್ರದೇಶವು ನೊಳಂಬವಾಡಿ ಕ್ರಿ.ಶ. ೧೧೫೬ ರವರೆಗೂ ಕಲ್ಯಾಣ ಚಾಲುಕ್ಯರ ನಿಯಂತ್ರಣದಲ್ಲಿತ್ತು. ಕ್ರಿ.ಶ. ೧೨೦೦ರಲ್ಲಿ ಚಾಲುಕ್ಯ ಮನೆತನ ಅವನತಿಗೊಳ್ಳಲು ಅವರ ಸಾಮಂತರಾಗಿದ್ದ ಹೊಯ್ಸಳರು ಪ್ರಬಲರಾದರು. ಸಹಜವಾಗಿ ಕಂಪ್ಲಿ ಪ್ರದೇಶ ಅವರ ಅಧೀನಕ್ಕೆ ಒಳಗಾಯಿತು. ಚಾಲುಕ್ಯ ೬ನೇ ವಿಕ್ರಮಾದಿತ್ಯನ ಕಾಲದಲ್ಲಿ ಹೊಯ್ಸಳ ವಿಷ್ಣುವರ್ಧನನು ಬಳ್ಳಾರಿ ಮತ್ತು ಕುಮ್‌ಟಾಗಳನ್ನು ಹಿಡಿದಿದ್ದನು. ಪ್ರಾಯಶಃ ಅವನು ಕಂಪ್ಲಿ ಹತ್ತಿರವೆ ತುಂಗಭಧ್ರಾ ನದಿಯನ್ನು ದಾಟುತ್ತಿರುವಂತೆ ತೋರುತ್ತದೆ. ಹೊಯ್ಸಳ ೨ನೇ ವೀರಬಲ್ಲಾಳನ ಕ್ರಿ.ಶ. ೧೨೧೨ ಓರುವಾಯಿ ಶಾಸನವು ಕಂಪ್ಲಿ ಮತ್ತು ನೆರೆಯ ಕುರುಗೋಡುಗಳನ್ನು ಉಲ್ಲೇಖಿಸುತ್ತದೆ."[೫]

ಕ್ರಿ.ಶ.೧೯೯೧ ಅಧಿಕಾರಕ್ಕೆ ಬಂದ ೨ನೇ ಬಲ್ಲಾಳನು ಕುಮುಟಾದವರೊಡನೆ ಸೆಣೆಸಿದ ನೆಂದು ೧೩೨೦ರಲ್ಲಿ ಕಂಪ್ಲಿ ಅರಸನನ್ನು ಸೋಲಿಸಿ ದೊರೆವಾಡಿ (ದರೋಜಿ) ಕಂಪಲಿಗಳನ್ನು ಕೈವಶ ಮಾಡಿಕೊಂಡನೆಂದು ವಸುಂದರಾ ಪಿಲಿಯೋಜಾ ಅಭಿಪ್ರಾಯ ಪಟ್ಟಿದ್ದಾರೆ. ಕ್ರಿ.ಶ. ೧೩೪೩ರಲ್ಲಿ ೪ನೇ ಬಲ್ಲಾಳನು ಹಂಪಿಯ ಹೊಸ ಪಟ್ಟಣದಲ್ಲಿ ಪಟ್ಟಾಭಿಷಿಕ ನಾಗುತ್ತಾನೆ. ಆದರೆ ಕ್ರಿ.ಶ. ೧೩೪೬ರಲ್ಲಿ ಅವನು ಮರಣ ಹೊಂದಲು ಕಂಪ್ಲಿ ಪ್ರದೇಶ ಸಹಿತ ಎಲ್ಲೆಡೆ ಹೊಯ್ಸಳರ ಆಳ್ವಿಕೆ ಕೊನೆಗೊಂಡಿತು.

"ತುಂಗಭದ್ರಾ ನದಿಯ ಬಲದಂಡೆಯಲ್ಲಿರುವ ಕಂಪ್ಲಿ ಒಂದು ಚಾರಿತ್ರಿಕ ಪಟ್ಟಣ ಹಾಗೂ ಹೊಸಪೇಟೆ ತಾಲ್ಲೂಕಿನ ಮೊದಲ ತಾಲ್ಲೂಕು ಕೇಂದ್ರ ಪ್ರಾಚೀನ ಮತ್ತು ಮಧ್ಯಕಾಲೀನ ಶಾಸನಗಳಲ್ಲಿ ಕಂಪ್ಲಿಯ ಉಲ್ಲೇಖವುಂಟು ೮ನೇ ಶತಮಾನದಲ್ಲೇ ಪ್ರಾಮುಖ್ಯತೆ

೪. ಪ್ರಭಾಕರ ಕೆ.ಎಸ್., ಕಂಪ್ಲಿಯ ಕರಕುಶಲ ಕಲೆ(ಅ.ಪ್ರ), ಪು.೯

೫. ಅದೇ, ಪು.೧೦

ಪಡೆದಿದ್ದ ಕಂಪ್ಲಿಯ ಮೇಲೆ ಕ್ರಿ.ಶ ೭೫೦ರಲ್ಲಿ ಗಂಗರು ದಾಳಿ ಮಾಡಿದ್ದರು. ಹೀಗೆ ರಾಷ್ಟ್ರಕೂಟರ ಕಾಲದಲ್ಲೇ ಅಸ್ತಿತ್ವದಲ್ಲಿದ್ದ ಈ ಪಟ್ಟಣ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮತ್ತಷ್ಟು ಬೆಳೆಯಿತು. ಸಾಮಂತರಾದ ನೊಳಂಬ ಪಲ್ಲವರ ರಾಜಧಾನಿಯೂ ಆಗಿತ್ತು. ಚೋಳರು ಕಂಪಲಿ ಪಟ್ಟಣವನ್ನು ಬೆಂಕಿಯಿಂದ ಸುಟ್ಟರೆಂದು ಚರಿತ್ರೆಯಿಂದ ತಿಳಿದುಬರುತ್ತದೆ. ನಂತರದ ಶತಮಾನಗಳಲ್ಲಿ ಕುಮ್ಮಟರಾಜ್ಯದ ಭಾಗವಾಗಿದ್ದ ಕಂಪ್ಲಿಯು, ಕಂಪಿಲರಾಯ ಮತ್ತು ಕುಮಾರರಾಮ ಹೆಸರುಗಳೊಡನೆ ಸಾಂಸ್ಕೃತಿಕವಾಗಿ ಗುರುತಿಸಿಕೊಂಡು ಕುಮ್ಮಟರಾಜ್ಯದ ಮುಖ್ಯಪಟ್ಟಣಗಳಲ್ಲಿ ಒಂದಾಗಿತ್ತು."[೬] ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ಇದು ಉತ್ತರದಿಕ್ಕಿನ ಹೆಬ್ಬಾಗಿಲು ಆಗಿತ್ತು ಕ್ರಿ.ಶ. ೧೫೬೫ರ ನಂತರ ಕಂಪ್ಲಿಯು ಸಹ ಅರಾಜಕತೆಗೆ ಒಳಗಾಯಿತು. ಮುಂದೆ ಉಳಿದ ಬ್ರಿಟೀಷ್ ಆಡಳಿತ ಕಾಲದಲ್ಲಿ ತಾಲ್ಲೂಕು ಕೇಂದ್ರವಾಯಿತು. ಈಗ ವ್ಯಾಪಾರ ಹಾಗೂ ಕೃಷಿ ಆಧಾರಿತ ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿದ್ದೆ.

ಸಾಂಸ್ಕೃತಿಕ ಪರಿಸರ

"ಚಿತ್ತಾರ ಬಿಡಿಸುವ ಚಿತ್ರಗಾರರ ತಂದೆ ಮೈಲಾರಪ್ಪ ತಾಯಿ ಕಾಳಮ್ಮ ಇವರಿಗೆ ೪ ಜನ ಮಕ್ಕಳಲ್ಲಿ ೩ ಜನ ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು ಇದ್ದು; ಇವರಲ್ಲಿ ೨ನೇ ಮಗನಾಗಿ ೨೫.೦೨.೧೯೪೪ ರಲ್ಲಿ ದೈವ ಕೊಡುಗೆಯಾಗಿ ಕಲಾವಿದ ಪರಶುರಾಮಪ್ಪನವರು ಜನಿಸಿದರು.

ಇವರು ಮೂಲತಃ (ಪರಶುರಾಮಪ್ಪ) ಜನನವಾಗಿದ್ದು ಗಂಗಾವತಿ ಎಂಬ ನಗರದಲ್ಲಿ ಇವರು ಚಿಕ್ಕವರಗಿದ್ದಾಗಲೇ ಮನೆಯಲ್ಲಿ ಕಷ್ಟ ಜೀವನವನ್ನು ಸಾಗಿಸುತ್ತಿದ್ದರು. ಹಾಗಾಗಿ ಇವರು ಕಲಾ ಜೀವನವನ್ನು ಸಾಗಿಸಲು ಕಂಪ್ಲಿ ಎಂಬ ಗ್ರಾಮ (ಪಟ್ಟಣ) ವನ್ನು ಅರಸಿ ಬಂದ ಇವರಿಗೆ ಬಾಲ್ಯದಲ್ಲಿ ನಾಲ್ಕನೇ ತರಗತಿ ಓದುತ್ತಿರುವಾಗ ಕಲೆಯ ಬಗ್ಗೆ ತುಂಬಾ ಆಸಕ್ತಿ ಹೊಂದಿದ್ದು, ಇವರು ಇವರ ಸೋದರ ಮಾವರಾದ ಶ್ರೀ ರಾಮಣ್ಣ ಚಿತ್ರಗಾರ ಹತ್ತಿರ ಕಲಾಭ್ಯಾಸವನ್ನು ಆರಂಭಿಸಿದರು."[೭]

ಕರಕುಶಲ ಕಲೆಯ ತರಬೇತಿ

"ಇವರು ೪ನೇ ತರಗತಿ ಓದುತ್ತಿರುವಾಗಲೇ ಕಲೆಯಲ್ಲಿ ತುಂಬಾ ಆಸಕ್ತಿ ಇದ್ದ ಕಾರಣ ಇವರ ಸೋದರ ಮಾವನಾದ ರಾಮಣ್ಣ ಚಿತ್ರಗಾರ ಮನೆಗೆ ಕರೆತಂದರು. ಸ್ವತಃ ಮೂರ್ತಿಗಳ ತಯಾರಿ ಮಾಡುವಾಗ ತಮ್ಮ ಗಮನವನ್ನು ಹರಸಿ ಅವರು ಹೇಳಿದ ಚಿಕ್ಕಪುಟ್ಟ

೬. ಪ್ರಭಾಕರ ಕೆ.ಎಸ್., ಕಂಪ್ಲಿಯ ಕರಕುಶಲ ಕಲೆ(ಅ.ಪ್ರ), ಪು.೧೧

೭. ರಾಮಚಂದ್ರಪ್ಪ ಚಿತ್ರಗಾರ, ಜನಪದ ಕಲಾವಿದ ಪರಶುರಾಮಪ್ಪ ಚಿತ್ರಗಾರ(ಅ.ಪ್ರ), ಪು.೨-೩

ಕೆಲಸಗಳನ್ನು ಶ್ರದ್ಧೆಯಿಂದ ಮಾಡುತ್ತಿದ್ದರು. ಈ ಸಾಂಸ್ಕೃತಿಕ ಪರಿಸರದಲ್ಲಿ ಬೆಳೆಯುತ್ತಿದ್ದ ಪರಶುರಾಮಪ್ಪನವರು ಮತ್ತಷ್ಟು ಆಸಕ್ತಿ ಬೆಳೆದು, ಇಲ್ಲಿ ಕೆಲಸ ಮಾಡಲು ಆರಂಭಿಸಿದರು." ಇವರ ಆಸಕ್ತಿ ಕಂಡ ರಾಮಣ್ಣನವರು ಮೂರ್ತಿ ತಯಾರಿಕೆ ಹೇಗೆ ಮಾಡಬೇಕು ಎಂದು ಮಾರ್ಗದರ್ಶನ ಮಾಡಿದರು. ಪಾಲನೆ ಪೋಷಣೆ ಮಾಡಿದ ಗುರುಗಳು ಹೇಳಿದಂತೆ ಮೆಚ್ಚುಗೆಯ ಕಲಾ ನೈಪುಣ್ಯತೆಯನ್ನು ಕಲಿತರು. ಮುಂದೆ ಇವರೆ(ಪರಶುರಾಮಪ್ಪ) ಕಲಾತಯಾರಿಕೆಯ ಪೂರ್ಣ ಹೊಣೆಯನ್ನು ಹೊತ್ತರು.

ಹೀಗೆ ನಿರಂತರ ದುಡಿಮೆಯಿಂದ ಸುತ್ತಲೂ ಹಳ್ಳಿಗಳಲ್ಲಿ ಕರಕುಶಲ ಕಲೆ ರಚಿಸುವುದರಲ್ಲಿ ರಾಮಣ್ಣ ಸಿದ್ಧಹಸ್ತರಾದರು. ಚಿತ್ರಗಳನ್ನು ಮದುವೆ ಸಮಾರಂಭಗಳಿಗೆ, ಮದುಮಕ್ಕಳು ಕೂಡುವ ಸಾಸಿಕಟ್ಟೆ ಹಾಗೂ ಬಾಗಿಲೂ ಚೌಕಟ್ಟಗಳಿಗೆ ಅಲಂಕರಿಸುತ್ತಾ ಒಂದು ವಿಶೇಷತೆಯನ್ನು ಕಂಡುಕೊಂಡರು.

ಇವರ ನೈಪುಣ್ಯತೆಯನ್ನು ನೋಡಿ ಕಲಾ ಗುರುವಾದ ರಾಮಣ್ಣನವರೇ ಪರಶುರಾಮಪ್ಪ ನವರಿಗೆ ನೀನು ಕರಕುಶಲತೆಯುಲ್ಲಿ ಬಹಳ ನಿಪುಣನಾಗಿದ್ದಿಯಾ ಹೀಗೆ ನಿನ್ನ ಕಲಾಜೀವನ ವನ್ನು ಜನರಿಗಾಗಿ, ಜನರ ಪ್ರೀತಿಯಾಗಿ ಅಲ್ಲದೇ ಕಲೆಯ ಗೌರವವನ್ನು ಹೆಚ್ಚಿಸಲು ಮತ್ತು ಗುರುವಿನ ತಕ್ಕ ಶಿಷ್ಯನೆಂಬ ಕೀರ್ತಿಯನ್ನು ತೆಗೆದುಕೊಂಡು ಬಾ ಎಂದು ಮಾತು ಹೇಳಿ ಅವರಿಗೆ ದೃಶ್ಯಕಲಾಕ್ಷೇತ್ರ ಪ್ರವೇಶ ಮಾಡಿಸಿದರು.

"ಶ್ರೀಯುತ ರಾಮಣ್ಣ ಚಿತ್ರಗಾರ ೧೯೭೭ರಲ್ಲಿ ನಿಧನರಾದ ನಂತರ ಚಿಕ್ಕ ವಯಸ್ಸಿನಲ್ಲಿಯೇ ಗ್ರಾಮ್ಮ ಗ್ರಾಮಗಳಿಗೆ ಹೋಗಿ ಗ್ರಾಮ ದೇವತೆಯ ಮೈಬಣ್ಣ ಅಲಂಕಾರ ಮಾಡುವುದರಲ್ಲಿ ಸಿದ್ದ ಹಸ್ತರಾಗಿದ್ದರು. ಸುತ್ತಲೂ ಹಳ್ಳಿಗಳಲ್ಲಿ ಚಿತ್ರಗಾರ ಪರಶುರಾಮಪ್ಪನೆಂದರೆ ಅಚ್ಚು ಮೆಚ್ಚಿನ ಕಲಾವಿರಾಗಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಬಳ್ಳಾರಿ ತಾಲ್ಲೂಕಿನಲ್ಲಿ ಬಂಡಿಹಟ್ಟಿ, ಸಿರಗುಪ್ಪ, ಕುರಗೋಡು, ಬಾವಾನಹಟ್ಟಿ, ಕಪ್ಪುಗಲ್ಲು, ರಾರಾವಿ, ಹಳ್ಳಿನೆಲ್ಗಡಿ, ಸುರಪುರ, ಜಾಲಿಬೆಂಚಿ, ಎಮ್ಮಿಗನೂರು, ಸಂಡೂರು, ತಾಲ್ಲೂಕು ವಡ್ಡು, ಹೆಚ್. ವಿರಾಪುರ, (ಆಂಧ್ರ) ಗಡೇಗಲ್ಲು, ಕೋಳೂರು ಎಳ್‌ಬಿಂಚಿ, ಕಲ್ಲಿಕೆರೆ, ಮುದ್ದಾಪುರ ಹವಾಳಿಗೆ (ಆಂಧ್ರ) ತಾಲ್ಲೂಕು ದೊಡ್ಡ ಅನಂತಪುರ, ಕೊಂಬೇಗೇರಿ (ಸಿಂದನೂರು ತಾಲ್ಲೂಕು) ಚನ್ನಳ್ಳಿ, ಕುಡಿತಿನಿ, ತೋರಣಗಲ್ಲು, ಕರ್ನೂಲ್ ಜಿಲ್ಲೆಯ ರಾಮಸಾಗರ, ಅರಿವಾಣಂ (ಪಾವಗಢ ತಾಲೂಕು) ಹೊಸಕೋಟೆ, ಕಾರಟಗಿ ಹೀಗೆ ರಾಜ್ಯ ಮತ್ತು ಹೊರರಾಜ್ಯದಲ್ಲಿ ಇರುವ ಕಲೆ ಸುಪ್ರಸಿದ್ದವಾಗಿದೆ. ಇದಕ್ಕೆ ಸಾಕ್ಷಿ ಇವರು ರಚಿಸಿದ ಕಲಾ ಮೂರ್ತಿಗಳನ್ನು ಈಗಲೂ ವಿವಿಧ ಪ್ರದೇಶದಲ್ಲಿ ಸಂಗ್ರಹಗೊಂಡಿರುವದನ್ನು ಸಂಶೋಧನಾತ್ಮಕವಾಗಿ ಅಧ್ಯಯನ ನಡೆಸಲಾಗಿದೆ."[೮]

---

೮. ಶರಣಪ್ಪ ಪಲ್ಲೇದ, ಚಿತ್ರಗಾರ ಪರಶುರಾಮಪ್ಪರ ಅಧ್ಯಯನ(ಅ.ಪ್ರ), ಪು.೬-೭

ವಂಶವೃಕ್ಷ

ಶ್ರೀ ಮೈಲಾರಪ್ಪ ಚಿತ್ರಗಾರ
ಶ್ರೀಮತಿ ಕಾಳಮ್ಮ

ಶ್ರೀ ಪರಶುರಾಮಪ್ಪ ಚಿತ್ರಗಾರ
ಕಲಾವಿದರು ೭೫ ವರ್ಷ
ಪತ್ನಿ ಶ್ರೀಮತಿ ಸುಮಿತ್ರಮ್ಮ

ಶ್ರೀ ರಾಮಕೃಷ್ಣಪ್ಪ ಚಿತ್ರಗಾರ
೬೮ ವರ್ಷ(ತಮ್ಮ)
ಪತ್ನಿ ಶ್ರೀಮತಿ ಕಮಲಮ್ಮ

ರಾಮಕ್ಕ
೬೧ವರ್ಷ(ತಂಗಿ)
ಪತಿ ಮಲ್ಲಪ್ಪ

ರಮೇಶ
೪೭ ವರ್ಷ
ಪತ್ನಿ ಶ್ರೀಮತಿ ಲಕ್ಷ್ಮೀ

ರಾಮಚಂದ್ರ
೪೩ ವರ್ಷ
ಪತ್ನಿ ಶ್ರೀಮತಿ ಸಂಗೀತಾ

ರವಿಕುಮಾರ
೪೦ ವರ್ಷ
ಪತ್ನಿ ಶ್ರೀಮತಿ ಸ್ವಪ್ನಾ

ರಾಜಾರಾಮ
೩೭ ವರ್ಷ
ಪತ್ನಿ ಶ್ರೀಮತಿ ಶೃತಿ


ರಾಮಕ್ಕ (ತಂಗಿ)

ಕುಮಾರ (ಮಗ)

ರಾಮಕೃಷ್ಣ (ತಮ್ಮ)

ರಾಘವೇಂದ್ರ
೪೨ ವರ್ಷ
ಪತ್ನಿ ಶೈಲಜಾ

ವಿಶ್ವನಾಥ (ಮಗ)
ಪತ್ನಿ ಶಾರದಾ



ಪರಶುರಾಮಪ್ಪನವರು ಮತ್ತು ಪರಿವಾರ

ಅಧ್ಯಾಯ : ಮೂರು

ಕಲಾವಿದ ಪರಶುರಾಮಪ್ಪ ಅವರ ಕಲಾಕೃತಿಗಳ ವಸ್ತು ವಿಷಯ

ಅಧ್ಯಾಯ : ಮೂರು

ಕಲಾವಿದ ಪರಶುರಾಮಪ್ಪ ಅವರ ಕಲಾಕೃತಿಗಳ ವಸ್ತು ವಿಷಯ

"ಮಾನವನ ಮೂಲ ಸ್ವರೂಪದೊಂದಿಗೆ ಪಶುಗಳೊಂದಿಗೆ ಇದ್ದಾಗ ಆಹಾರ, ಜೀವನಶೈಲಿ ಇವುಗಳೆಲ್ಲವೂ ಪ್ರಾಣಿಗಳಂತೆಯೇ ಇದ್ದವು. ಬೇಟೆಯಾಡಿ ಬದುಕುವ ಸ್ಥಿತಿಯಲ್ಲಿ ಕೆಲವೊಂದು ಸಾರಿ ಸಾಂಘಿಕವಾಗಿ ಸೇರಿಕೊಂಡು ಬೇಟೆಯಾಡುವ ಉದ್ದೇಶವಿದ್ದಾಗ ಒಬ್ಬರಿಗೊಬ್ಬರು ಸಂದೇಶ ರವಾನಿಸಲು ಸನ್ನೆಯನ್ನು ಬಿಟ್ಟು ಬೇರಾವುದೇ ಭಾಷೆಯ ಬೆಳವಣಿಗೆಯಾಗಿರಲಿಲ್ಲ. ಇಂತಹ ಸಂದರ್ಭದಲ್ಲಿ ಅನಿವಾರ್ಯವಾಗಿ ಗೀಚುವಿಕೆಯ ಮೂಲಕ ಕಲ್ಲು ಬಂಡೆಗಳ ಮೇಲೆ ಪ್ರಾಣಿ-ಪಕ್ಷಿಗಳ ಚಿತ್ರಗಳನ್ನು ಚಿತ್ರಿಸಿ ಬೇಟೆಯ ಸ್ವರೂಪವನ್ನು ರೇಖಾಕೃತಿಗಳಲ್ಲಿ ಗೀಚುತ್ತಾ ಸಾಗಿದ ನಂತರ, ಸಮಯಾವಕಾಶದಲ್ಲಿ ತಾನು ಗೀಚಿದ ರೇಖೆಗಳನ್ನು ಅವಲೋಕಿಸಿದಾಗ ಅದನ್ನು ನೋಡಿ ಸಂತೋಷಪಟ್ಟು ನಂತರ ಅದೇ ಕಾರ್ಯವನ್ನು ಪದೇ ಪದೇ ಮಾಡುತ್ತಾ ನಿಖರವಾದಂತಹ ಆಕಾರ, ಸ್ವರೂಪಗಳನ್ನು ಭಾವಪೂರ್ವಕ ರೇಖಾ ಸ್ವರೂಪಗಳನ್ನು ಮಾಡುತ್ತಾ ಸಾಗಿದೆ. ಅಂದಿನಿಂದ ಭಾವನೆಗಳನ್ನು ಮತ್ತು ಸಂದೇಶಗಳನ್ನೊಳಗೊಂಡ ರೇಖಾಕೃತಿಗಳನ್ನು ರಚಿಸುವ ಅಭ್ಯಾಸವನ್ನು ರೂಢಿಸಿಕೊಂಡ, ಹೀಗೆ ಕಲೆಯ ಅಭಿವೃದ್ಧಿ ಆದಂತೆ ಮಾನವನ ವೈಚಾರಿಕ ಕಲ್ಪನಾ ಸಾಮರ್ಥ್ಯ ವೃದ್ಧಿಯಾಯಿತು. ಕಲೆಯಲ್ಲಿಯೇ ಬೆಳವಣಿಗೆ ನಾಗರಿಕತೆಯನ್ನು ಸುಧಾರಿಸುವಂತೆ ಮಾಡಿದ."[೧]

"ಕಲೆಗೆ ರಾಜ ಮಹಾರಾಜರುಗಳ ಕಾಲದಲ್ಲಿ ಅಪಾರ ಪ್ರೋತ್ಸಾಹ ದೊರಕಿತು. ಚಿತ್ರಕಲೆ, ಶಿಲ್ಪಕಲೆಗಳು ಮತ್ತು ನಮ್ಮ ಸಂಸ್ಕೃತಿ ಜೀವನ ಪರಂಪರೆಗಳನ್ನು ಮುಂದುವರೆಸುವ ಪ್ರತೀಕಗಳಾಗಿ ಗುಡಿ-ಗೋಪುರಗಳು, ಕೋಟೆ-ಕೊತ್ತಲಗಳ ಸ್ವರೂಪದಲ್ಲಿ ವಿಶ್ವವಿಖ್ಯಾತವಾಗಿವೆ. ಇಂದು ಕಲೆಯನ್ನು ಹೊರತು ಪಡಿಸಿ ಜೀವನವು ಅಸಾಧ್ಯದ ಮಾತಾಗಿದೆ."[೨]

೧. ಪ್ರಭಾಕರ ಕೆ.ಎಸ್., ಕಂಪ್ಲಿಯ ಕರಕುಶಲ ಕಲೆ(ಅ.ಪ್ರ), ಪು.೧೨

೨. ಅದೇ, ಪು.೧೩

[illegible]

[illegible]

[illegible]

[illegible]

ಒಂದೇ ರೀತಿಯ ಕುಶಲ ವಸ್ತುಗಳನ್ನು ತಯಾರಿಸುವ ಒಂದು ಜನಾಂಗ ಅಥವಾ ಸಮುದಾಯ ಕ್ರಮೇಣ ಒಂದು ಪ್ರತ್ಯೇಕ ಜಾತಿ ಎನಿಸಿತು. ಉದಾಹರಣೆಗೆ ನೇಯ್ಗೆ ಮಾಡುತ್ತಿದ್ದವರನ್ನು 'ನೇಕಾರ' ರೆಂದು, ಶ್ರೀಗಂಧ ಮೊದಲಾದ ಉತ್ತಮ ಮರಗಳನ್ನು ಬಳಸಿ ವಿವಿಧ ವಿಗ್ರಹಗಳನ್ನು ಮಾಡುವವರನ್ನು 'ಗುಡಿಗಾರ'ರೆಂದು, ಮಡಿಕೆ-ಕುಡಿಕೆಗಳನ್ನು ಮಾಡುವವರನ್ನು 'ಕುಂಬಾರ'ರೆಂದು, ಬೆತ್ತದಿಂದ ಬುಟ್ಟಿ ಚಾಪೆಗಳನ್ನು ಹೆಣೆಯುವರನ್ನು 'ಮೇದಾರ'ರೆಂದು, ಚಿನ್ನ-ಬೆಳ್ಳಿಯಿಂದ ಆಭರಣಗಳನ್ನು ಮಾಡುವವರನ್ನು 'ಅಕ್ಕಸಾಲಿಗ'ರೆಂದು, ಚರ್ಮದ ಕೆಲಸ ಮಾಡುವವರನ್ನು 'ಚಮ್ಮಾರ'ರೆಂದು, ಹೀಗೆ ಅವರವರ ವೃತ್ತಿ ವಿಶೇಷಗಳ ಮೇಲೆ ಅವರ ಜಾತಿಯನ್ನು ಗುರುತಿಸುವ ಪ್ರಕ್ರಿಯೆ ನಂತರ ಬೆಳೆದುಬಂದಿತು. ಇದೇ ರೀತಿಯಾಗಿ ದೇವಾಲಯದ ಮೂರ್ತಿಗಳಿಗೆ ಬಣ್ಣವನ್ನು ಹಾಕುವವರನ್ನು 'ಬಣಗಾರ' ರು ಎಂದು ಕರೆಯುವದು ಸರ್ವೇಸಾಮಾನ್ಯ. ಬಳ್ಳಾರಿ ಜಿಲ್ಲೆ ಕಂಪ್ಲಿಯಲ್ಲಿ ಈ ಬಣಗಾರ ಜನಾಂಗದಲ್ಲಿ ಹಲವಾರು ರೀತಿಯ ಕರಕುಶಲ ಕಲೆಗಳು ಜೀವಂತವಾಗಿದ್ದು, ಈ ಎಲ್ಲಾ ಕರಕುಶಲ ಕಲೆಗಳು ಮುಂದಿನ ತಲೆಮಾರಿಗೆ ದೃಶ್ಯಕಲೆಯ ಅಧ್ಯಯನಪೂರಕವಾಗಿ ಬಳಸಿ ಕೊಳ್ಳಲು ಸಹ ಅಧ್ಯಯನಕ್ಕೆ ಯೋಗ್ಯವಾಗಿವೆ.

ಮಾನವನು ಇನ್ನುಳಿದ ಜೀವರಾಶಿಯಿಂದ ಅಥವಾ ಪ್ರಾಣಿವರ್ಗಕ್ಕಿಂತ ಭಿನ್ನವಾಗಿ ನಿಂತುಕೊಳ್ಳುವುದು ಕೂಡ ಈ ಕಾರಣಕ್ಕಾಗಿಯೇ ಎಂದು ಹೇಳಬಹುದು. ಈ ಶಕ್ತಿಗಳು ಮಾನವನ ಬುದ್ಧಿ, ಸೃಜನಶೀಲತೆಗಳು ಮಾನವನ ಜನ್ಮಜಾತ ವ್ಯವಸ್ಥೆಗಳಾಗಿವೆ. ಅವನ ಬದುಕಿನ ಪ್ರತಿಯೊಂದು ಚಟುವಟಿಕೆಯ ಹಿಂದೆಯೂ ಈ ಜನ್ಮಜಾತ ವ್ಯವಸ್ಥೆಯ ಕ್ರಿಯಾಶೀಲ ತೊಡಗುವಿಕೆ ಇರುತ್ತದೆ. ಹಾಗಾಗಿ ಮಾನವನ ವಿಕಾಸದ ಪ್ರತೀ ಹಂತದಲ್ಲಿಯೂ ಅವನ ಬದುಕಿನ ಅವಿಭಾಜ್ಯ ಅಂಶವಾಗಿಯೇ ಬೆಳೆಯುತ್ತಾ ಬಂದಿರುವ ಕರಕುಶಲ ಕಲೆಗಳು ಕೂಡ ಈ ವ್ಯವಸ್ಥೆಯ ಪರಿಣಾಮಗಳೇ ಆಗುತ್ತವೆ."[೩]

ಕರಕುಶಲ ಕಲೆಗಳು ಶುದ್ಧ ನೆಲೆಯಿಂದ ಜನ್ಮ ತಾಳಿದಂತವುಗಳು. ಅವು ಬದುಕಿನ ಉಪಯೋಗಿ ನೆಲೆಯಿಂದ ಹುಟ್ಟಿಕೊಂಡಂತಹ ಉಪಯೋಗಿ ವಸ್ತುಗಳು ಹಾಗಾಗಿ ನಾವು ಅವುಗಳಲ್ಲಿ ಕಲಾತ್ಮಕ ಅಂಶಗಳನ್ನು ಹುಡುಕಿ ಕಲೆಗಳ ಪ್ರಾಶಸ್ತ್ಯ ನೀಡಿದ್ದೇವೆ. ಮಾನವನ ಕರಕೌಶಲ್ಯವೂ ಸೇರಿ, ತನಗೆ, ತನ್ನ ಕುಟುಂಬಕ್ಕೆ, ಜನಾಂಗಕ್ಕೆ, ಉಪಯೋಗಕ್ಕೆ ಬೇಕಾದ ವಸ್ತು, ಉಪಕರಣ, ಪರಿಕರ, ಸಾಧನ ಸಲಕರಣೆಗಳನ್ನು ತಯಾರಿಸಿದ ವಸ್ತುಗಳು ತನ್ನ ಬದುಕಿನ ಭಾಗವಾಗಿ ದಾಖಲಾಗಿರುವುದು ದೃಶ್ಯಕಲಾ ಕ್ಷೇತ್ರದ ಮೌಲ್ಯವನ್ನು ಹೆಚ್ಚಿಸುತ್ತದೆ.

---

೩. ಪ್ರಭಾಕರ ಕೆ.ಎಸ್., ಕಂಪ್ಲಿಯ ಕರಕುಶಲ ಕಲೆ(ಅ.ಪ್ರ), ಪು.೧೪

ಆ ತಯಾರಿಕೆಯಲ್ಲಿ ಅವನ ಸೌಂದರ್ಯ ಪ್ರಜ್ಞೆಯು ಮಿಳಿತಗೊಂಡು ವಸ್ತುವಿಗೊಂದು ರೂಪ, ಆಕಾರ, ವಿನ್ಯಾಸಗಳು ಸಿದ್ಧವಾದವು. ಹೀಗೆ ರೂಪಗೊಂಡ ವಸ್ತುಗಳಲ್ಲಿ ಅವು ಪ್ರತಿಯೊಂದು ಹೊಸ ಪ್ರಯೋಗಗಳಾಗಿ ಮೈಸೆಳೆದಿರಬಹುದು. ಒಂದೇ ಉದ್ದೇಶಕ್ಕೆ ರೂಪು ಗೊಂಡು ವಸ್ತು ಒಂದೇ ಕೌಶಲ್ಯದಿಂದ ಹುಟ್ಟಿಕೊಂಡಿದ್ದರೂ ಅವು ನೂರಾರು ತರ ಒಂದರಂತೆ ಇನ್ನೊಂದು ಇರಲಾರದು. ಏಕೆಂದರೆ ಅವುಗಳ ರಚನೆಯ ಹಿಂದಿನ ಮನಸ್ಸು ಕಾಲ ಬೇರೆ ಬೇರೆಯಾಗಿವೆ. ವ್ಯಕ್ತಿನಿಷ್ಠ ಕಲ್ಪನೆ ಮತ್ತು ಯುಗಧರ್ಮದ ಪ್ರಭಾವ ಅವುಗಳನ್ನು ವೈವಿಧ್ಯಪೂರ್ಣವಾಗಿಸಿದವು. ಹೀಗೆ ಉಪಯೋಗದ ನೆಲೆಯಿಂದ ಹುಟ್ಟಿಕೊಂಡ ವಸ್ತುವಿನ ಆಯಾ ಪ್ರದೇಶದ ಭೌತಿಕ ಸಂಸ್ಕೃತಿಯ ಕೈಗನ್ನಡಿಗಳು ಅವುಗಳನ್ನು ಸಿದ್ಧಪಡಿಸಿದ ವ್ಯಕ್ತಿಗೆ ಆ ವಸ್ತು ಅವನ ಕೌಶಲ್ಯದ ಕಲ್ಪನೆಯ ಕೂಸು ಅದಕ್ಕೆ ತಾನು ಬಾಳಿ, ಬದುಕಿದ ಪರಿಸರದ ಹತ್ತು ಹಲವು ವಿಷಯಗಳನ್ನು ಸಾಮಾಗ್ರಿಯಾಗಿ, ಆಕೃತಿಯಾಗಿ ರೂಪಿಸುತ್ತಾನೆ. ತನ್ನ ಸುತ್ತಲಿನ ಸಮಾಜದ ಸಂಸ್ಕೃತಿಕ ಪರಿಸರದ ಅಂತರ ಚೇತನವನ್ನು ಗ್ರಹಿಸಿ ತನ್ನ ಕೌಶಲ್ಯದಿಂದ ಕಲ್ಪನಾಶಕ್ತಿಯಿಂದ ವಸ್ತುವಿಗೆ ವಿನ್ಯಾಸವನ್ನು ಕೊಡುತ್ತಾನೆ. ಅದ್ದರಿಂದ ಕರಕುಶಲ ಕಲೆಗಳು ಸಮಕಾಲೀನ ಸಮಾಜದ ಸಾಂಸ್ಕೃತಿಕ ಪ್ರತಿನಿಧಿಗಳು. ಮಾನವನು ಸ್ವೀಕರಿಸಿದ ಆಹಾರ, ಸೇವಿಸಿದ ಗಾಳಿ, ಕುಡಿದ ನೀರು ಎಲ್ಲವೂ ಸೃಷ್ಟಿ ಕ್ರಿಯೆಯಲ್ಲಿ ಪೂರಕವಾಗಿ ದುಡಿಯುತ್ತವೆ. ಹಾಗೆಯೇ ಸಮಾಜದ ಉಪಯೋಗಕ್ಕಾಗಿ ಸೃಷ್ಟಿಯಾಗುವ ವಸ್ತುವೊಂದು ಆ ಸಾಮಾಜಿಕ ಪರಿಸರದ ಸಕಲ ಸಂಸ್ಕೃತಿಕ ವಿಷಯಗಳನ್ನು ತನ್ನೊಳಗೆ ಅಳವಡಿಸಿಕೊಳ್ಳುತ್ತದೆ.

ಮಾನವ ರೂಪಿಸಿದ ವಸ್ತುಗಳು ಅವನ ಬದುಕಿನ ಯಾವುದೋ ಒಂದು ಅಗತ್ಯದ ಪೂರೈಕೆಗಾಗಿ ಆಗಿದ್ದಿರಬಹುದು. ಕೆಲವೊಮ್ಮೆ ಹಲವು ಅಗತ್ಯಗಳಿಗಾಗಿ ಬಳಕೆಯಾಗುತ್ತಿರುವುದನ್ನು ಕಾಣಬಹುದು. ಎಂದರೆ ಅವುಗಳ ಬಳಕೆ ಸಂಗ್ರಹಣೆಯ ಮನರಂಜನೆಯ ಉದ್ದೇಶಕ್ಕಾಗಿಯೋ ಆಗಿರಬಹುದು. ಹಾಗಾಗಿ ಒಂದು ವಸ್ತುವಿಗೆ ಬಹು ಉಪಯೋಗಿ ಸಾಧ್ಯತೆಗಳಿರುವಾಗ ಅದು ಯಾವ ಉದ್ದೇಶಕ್ಕಾಗಿ ಸೃಷ್ಟಿಯಾಯಿತು ಎಂಬುದನ್ನು ಅನೇಕ ಕರಕುಶಲಕಲೆಗಳಲ್ಲಿ ಹೇಳಲಾಗುವುದಿಲ್ಲ ಸಮುದಾಯದಲ್ಲಿ ಬಳಕೆಯಲ್ಲಿದ್ದ ವಸ್ತುವೊಂದು ಯಾವ ಉದ್ದೇಶಕ್ಕಾಗಿ ಬಳಕೆಯಾಗುತ್ತಿತ್ತೋ ಅದೇ ಉದ್ದೇಶಕ್ಕಾಗಿ ಮುಂದಿನ ತಲೆಮಾರು ಬಳಸುತ್ತದೆ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ನಂತರದ ತಲೆಮಾರು ಅಂತಹ ಸಂದರ್ಭಗಳಲ್ಲಿ ಹೊಸ ಕರಕುಶಲವಸ್ತುಗಳನ್ನು ಸೃಷ್ಟಿಸಿ ಬಳಕೆಗೆ ರೂಢಿಸಬಹುದು, ಆಗ ಹಿಂದಿನ ತಲೆಮಾರು ಬಳಸಿದ ಬಹುಪಯೋಗಿ ಕರಕುಶಲವಸ್ತುವಿನ ಪ್ರಾಥಮಿಕ ಉದ್ದೇಶ ಕೈತಪ್ಪಿ ಅನುಷಂಗಿಕ

ಅಗತ್ಯಗಳಿಗಾಗಿ ಉಪಯೋಗವಾಗಬಹುದು. ಹೀಗೆ ಕಾಲ ಸರಿದಂತೆ ತಲೆಮಾರುಗಳಿಂದ ತಲೆಮಾರಿಗೆ ಕರಕುಶಲ ವಸ್ತುಗಳ ಸೃಷ್ಟಿ ಮರೆಮಾಚುತ್ತಲಿದೆ.

ಸಂಶೋಧನಾ ಅಧ್ಯಯನಕ್ಕಾಗಿ ಅನುಕೂಲವಾಗುವ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ವರ್ಗೀಕರಣ ಮಾಡಿಕೊಂಡು ವಿಸ್ತಾರವಾಗಿ ಉದಾಹರಣೆಗಳೊಂದಿಗೆ ಈ ಮುಂದೆ ವಿವರಿಸಲಾಗಿದೆ.

I. ಮರದ ಕೆತ್ತನೆ

೧. ದೇವಾನು-ದೇವತೆಗಳ ಶಿಲ್ಪಗಳು

೧. ನಂದೀಶ್ವರ ಮೂರ್ತಿ

೨. ಗ್ರಾಮ ದೇವತೆಯ ಮೂರ್ತಿಗಳು

೩. ಶಿವಪಾರ್ವತಿಮೂರ್ತಿ

೨. ಪಲ್ಲಕ್ಕಿಗಳು

೧. ಮೋಹರಂ ಪೆಟ್ಟಿಗೆ

೩. ಗೊಂಬೆ ಶಿಲ್ಪಗಳು

II. ಮಣ್ಣಿನ ಮೂರ್ತಿಗಳು

೧. ಮುಖವಾಡಗಳು

೨. ಪ್ರಾಣಿಗಳ ಮುಖವಾಡಗಳು

III.. ಅಲಂಕಾರಿಕ ವಸ್ತುಗಳು

೧. ಛತ್ರಿ

೨. ಚಾಮರಗಳು

IV. ಭಿತ್ತಿ ಚಿತ್ರಗಳು

೧. ಸಾಸಿವೆ ಕಟ್ಟೆ

೨. ಕಾಮಧೇನು ಕಲ್ಪವೃಕ್ಷ

ಈ ಮೇಲಿನ ವರ್ಗೀಕರಣದ ಪ್ರಕಾರ ಒಂದೊಂದಾಗಿ ಈ ಮುಂದೆ ವಿವರಿಸಲಾಗಿದೆ.

I. ಮರದ ಕೆತ್ತನೆ

ಕಾಡು ಬಂಡೆಗಳ ನಡುವೆ ಬೆಳೆಯುವ ಒಂದು ವಿಶಿಷ್ಟ ಜಾತಿಯ ಹತ್ತಿ ಮರದ ಕಟಿಗೆಯನ್ನು ಅದರ ಶ್ರೇಷ್ಠತೆಗೆ ಅನುಗುಣವಾಗಿ ಗುರುತಿಸಿ ಸಾಮಗ್ರಿಯಾಗಿ ತರುತ್ತಾರೆ, ನಂತರ ಕಟ್ಟಿಗೆಯನ್ನು ಹಂತ ಹಂತವಾಗಿ ಕೆತ್ತಿ ರೂಪ ಕೊಟ್ಟಾಗ ಸುಂದರವಾಗಿ ಅಲ್ಲದೆ ಪೂಜಿಸುವ ದೈವಿಸ್ವರೂಪವನ್ನು ಕೊಡುವ ಕಲೆ ಇವರದೂ ಮರದ ತುಂಡಿನಲ್ಲಿ ಅನೇಕ ಮೂರ್ತಿಗಳನ್ನು ತಯಾರಿಸಿದ್ದಾರೆ, ಅಲ್ಲದೇ ತಯಾರಿಸುವ ಕಾಯಕದಲ್ಲಿ ಮುಂದುವರೆದಿದ್ದಾರೆ. ಶ್ರೀ ಬೀರಪ್ಪ ದೇವರು, ಗ್ರಾಮದೇವತೆಯರ ಮೂರ್ತಿಗಳು, ಶ್ರೀ ನಂದೀಶ್ವರ ಮೂರ್ತಿ, ಶ್ರೀ ಗರಡಿಕೃಷ್ಣಮೂರ್ತಿ, ಶ್ರೀ ಗಜಗೌರಿಮೂರ್ತಿ, ಋಷಿ ಮುನಿಗಳ ಮೂರ್ತಿಗಳು, ಪಲ್ಲಕ್ಕಿ, ಕೆತ್ತನೆ, ಚೌರಿಬೀಸುವ ಹೆಣ್ಣುಗೊಂಬೆಗಳು, ಆರತಿಗೊಂಬೆಗಳು, ಹಕ್ಕಿಪಿಕ್ಕಿ ಜನಾಂಗದವರ ದುರಗು-ಮುರ್ಗಿ ದೇವರ ಮೂರ್ತಿ, ದ್ವಾರಪಾಲಕರ ಮೂರ್ತಿ, ಕುದುರಿ, ಆನೆ, ಹುಲಿ, ಸಿಂಹ, ನಂದಿವಾಹನ ಇವುಗಳಲ್ಲದೆ ರಥಕ್ಕೆ ಅಲಂಕರಿಸುವ ದೇವರ ಕಾಥಾಸರಣಿಯಲ್ಲಿ ಬರುವ ಸನ್ನಿವೇಶ, ಮೂರ್ತಿಯ ಕೆತ್ತನೆಗಳು ಸ್ಥಳ-ಪರಸ್ಥಳದಲ್ಲೂ ಸಿಗುತ್ತವೆ. ಅಲ್ಲದೆ ಬಿದಿರು ಬಂಬೂ ತೆಗೆದುಕೊಂಡು ಸೀಳಿ ಕಡ್ಡಿಗಳನ್ನು ಮಾಡಿ ಅವುಗಳನ್ನು ದಾರದಿಂದ ಕಟ್ಟಿ ಛತ್ರಿಯನ್ನು ತಯಾರಿಸುತ್ತಾರೆ.

೧. ಮರದ ಕೆತ್ತನೆಯ ಕಲಾಕೃತಿಗಳ ವಿವರಣೆಗಳು

೧. ಶ್ರೀ ನಂದೀಶ್ವರ ಮೂರ್ತಿ: ದೈವಪೂರ್ವಕವಾದ ಶ್ರೀ ನಂದೀಶ್ವರ ಮೂರ್ತಿಯು ಅದ್ಭುತವಾದ ಮೈವಳಿಕೆಯಿಂದ ಕೆತ್ತಿದ್ದು, ಮೂರ್ತಿಯ ಮೈಬಣ್ಣ ಬಂಗಾರದ ವರ್ಣದಿಂದ ಲೇಪನಮಾಡಿದ್ದಾರೆ, ಪಂಚೆಯು ಕೆಂಪು ಬಣ್ಣದಿಂದ ಕೂಡಿದೆ. ಸೊಂಟಕ್ಕೆ ಹಸಿರು ಬಣ್ಣದ ವಸ್ತ್ರವನ್ನು ಧರಿಸಿದ್ದು ಹಲವಾರು ವಿನ್ಯಾಸದ ವೇಷಭೂಷಣ ಮತ್ತು ಆಭರಣಗಳನ್ನು ಕಲಾಕೃತಿಯಲ್ಲಿ ಆಕರ್ಷಮಯವಾಗಿ ಕೆತ್ತಿದ್ದಾರೆ.

೨. ಗ್ರಾಮ ದೇವತೆಯ ಮೂರ್ತಿಗಳಾದ ಶ್ರೀ ಮಹಿಷಾಸುರ ಮರ್ದಿನಿ: ಗ್ರಾಮೀಣ ಜನರ ನಂಬಿಕೆಯಂತೆ ಊರಿನಲ್ಲಿರುವ ಹೆಣ್ಣು ದೈವಶಕ್ತಿಗಳಲ್ಲಿ ಶ್ರೀ ಮಹಿಷಾಸುರ ಮರ್ದಿನಿ ದೇವತೆಯ ಕೈಯಲ್ಲಿ ಖಡ್ಗ, ಮೊತ್ತೊಂದು ಕೈಯಲ್ಲಿ ತ್ರಿಶೂಲ ಹಿಡಿದು ರುದ್ರಾವತಾರ ತಾಳಿದ್ದಾಳೆ. ದೇವಿಯ ಜೊತೆಗೆ ಕೋಣವನ್ನು ಸಂಹಾರ ಮಾಡುತ್ತಿರುವ ಮೂರ್ತಿಶಿಲ್ಪದಲ್ಲಿ ಕಂಡುಬರುತ್ತದೆ.

೩. ಶಿವ-ಪಾರ್ವತಿ ಮೂರ್ತಿ: ದೈವಪೂರ್ವಕವಾದ ಶಿವನ ಎಡಬದಿಯಲ್ಲಿ ಪಾರ್ವತಿ, ಬಲ ಬದಿಯಲ್ಲಿ ಗಣೇಶನ ಮೂರ್ತಿಯು ಮುಂಭಾಗದಲ್ಲಿ ನಂದಿಯನ್ನು ಅದ್ಭುತವಾಗಿ ಕೆತ್ತಿದ್ದಾರೆ.

[illegible]

ಶಿವನ ಮೈಗೆ ತಿಳಿನೀಲಿ ವರ್ಣ, ಪಂಚೆಯು ಕೆಂಪು ಬಣ್ಣದಿಂದ ಕೂಡಿದ್ದು ಕೊರಳಲ್ಲಿ ಹಾವು ತಲೆಯ ಮೇಲೆ ಗಂಗೆ ಹಾಗೂ ಹಲವಾರು ವಿನ್ಯಾಸದ ವೇಷಭೂಷಣಗಳನ್ನು ಕೆತ್ತಿದ್ದಾರೆ. ಪಾರ್ವತಿ ದೇವಿಯ ಮೂರ್ತಿಯ ಮೈಬಣ್ಣ ಹಸಿರು ಮತ್ತು ಕೆಂಪು ಬಣ್ಣದ ವಸ್ತ್ರವನ್ನು ಧರಿಸಿದ್ದಾರೆ. ಗಣೇಶನು ಹಳದಿ ಬಣ್ಣದ ಪಂಚೆ ಧರಿಸಿದ್ದು ಹಾಗೂ ವೇಷ ಭೂಷಣ ಮತ್ತು ಆಭರಣಗಳೊಂದಿಗೆ ಕಲಾಕೃತಿಯಲ್ಲಿ ಆಕರ್ಷಮಯವಾಗಿ ಕೆತ್ತಿದ್ದಾರೆ.

೨. ಪಲ್ಲಕ್ಕಿಗಳು

ಹಿಂದಿನ ಕಾಲದಿಂದಲೂ ದೇವಸ್ಥಾನಗಳಲ್ಲಿ ಹಾಗೂ ಉತ್ಸವಗಳಲ್ಲಿ ಜಾತ್ರೆಗಳಲ್ಲಿ ಪಲ್ಲಕ್ಕಿ ಸೇವೆ ಮಾಡುವದು ವಿಶೇಷ. ಅದರಲ್ಲಿ ಉತ್ಸವಮೂರ್ತಿ, ದೇವರಮೂರ್ತಿ ಇಟ್ಟು ಮೆರವಣಿಗೆ ಮಾಡುವದು ವಿಶೇಷ. ಪಲ್ಲಕ್ಕಿಗೆ ಹೊದಿಸಲು ಹಾಕುವ ವಸ್ತ್ರಕ್ಕೆ ಪಲ್ಲಕ್ಕಿ 'ಪಟ್ಟ' ಎನ್ನುತ್ತಾರೆ. ಇದನ್ನು ವೆಲವೆಟ್ ಬಟ್ಟೆ ಹಾಗೂ ಬಣ್ಣ-ಬಣ್ಣದ ರೇಷ್ಮೆ ಎಳೆಗಳಲ್ಲಿ ಮುತ್ತುಗಳನ್ನು ಬಳಸಿ ಅತೀ ಸುಂದರವಾಗಿ ಕಲಾತ್ಮಕವಾಗಿ ಕೆಂಪು, ನೀಲಿ, ಹಸಿರು ಬಣ್ಣಗಳಿಂದ ಆಕರ್ಷಕವಾಗಿ ತಯಾರಿಸುತ್ತಾರೆ.

೧. ಮೋಹರಂ ಪೆಟ್ಟಿಗೆ: ಮುಸ್ಲಿಂ ಧರ್ಮದ ಪ್ರಕಾರ ಮೋಹರಂ ಪೆಟ್ಟಿಗೆ ಎಂದರೆ 'ದೇವರ ಪೆಟ್ಟಿಗೆ'. ಈ ಪೆಟ್ಟಿಗೆಯು ಗೋರಿ ಆಕಾರದಲ್ಲಿ ಇರುತ್ತದೆ. ಇದಕ್ಕೆ ನಾಲ್ಕು ಹುಲಿ, ನಾಲ್ಕು ಗಿಳಿ ಮೇಲೆ ಮೂರು ಕಳಸ, ಒಂದು ಚಂದ್ರನ ಚಿತ್ರವಿದೆ. ಈ ಪೆಟ್ಟಿಗೆಯ ಕೆಳಗಿನ ಭಾಗದ ಮುಂಭಾಗದಲ್ಲಿ ಮೂರು ಅಥವಾ ಐದು ಖಾನೆಗಳಿದ್ದು, ಒಳಗೆ ದೇವರ ಚಿತ್ರ, ಮೇಲೆ ಹೊತ್ತಿಗೆ ಇರುವದು. ಒಂದು ಬದಿಯಲ್ಲಿ ಹುಲಿ, ಮತ್ತೊಂದು ಬದಿಯಲ್ಲಿ ಕುದುರೆಯ ಮೇಲೆ ಹಸ್ತ ಈ ಪ್ರಕಾರ ಪೆಟ್ಟಿಗೆಯ ಮೇಲೆ ಚಿತ್ರಗಳನ್ನು ರಚಿಸಲಾಗಿದೆ ಮತ್ತು ಇದಕ್ಕೆ ಬಣ್ಣಗಳು ಬಿಳಿ, ಹಳದಿ, ಕೆಂಪು, ತಿಳಿ ನೀಲಿ ಬಳಸಿದ್ದಾರೆ.

೩. ಗೊಂಬೆ ಶಿಲ್ಪಗಳು

ಇಲ್ಲಿನ ಕಲಾವಿದರು ಎಲ್ಲಾ ಭಾಗಗಳಲ್ಲಿಯೂ ಬಹಳ ನಿಪುಣತೆಯನ್ನು ಹೊಂದಿದ ವರಾಗಿದ್ದಾರೆ ಎಂದೇ ಹೇಳಬಹುದು. ಗೊಂಬೆಗಳ ತಯಾರಿಕೆ ಮತ್ತು ಬಣ್ಣಗಾರಿಕೆಯಲ್ಲಿ ಕಲಾವಿದರು ಭಕ್ತಿ, ಶ್ರದ್ಧೆಯನ್ನು ಆಚರಣೆ ಮತ್ತು ಒಳ್ಳೆಯ ಮನಸ್ಸನ್ನು ಇಟ್ಟುಕೊಳ್ಳಬಹುದು. ಅದರಲ್ಲಿ ಗೊಂಬೆಗಳನ್ನು ತಯಾರಿಸಲು ಮೊದಲು ಶ್ರದ್ಧೆ, ಭಕ್ತಿಯನ್ನು ಅನುಸರಿಸುತ್ತಿದ್ದರು. ಮೊದಲು ಸ್ನಾನ ಮಾಡಿ, ದೇವರ ಪೂಜೆ ಮಾಡಿ ಮಡಿಯಿಂದ ದೇವರ ಮೂರ್ತಿಗಳನ್ನು ಮಾಡಲು ಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ. ಇಂತಹ ಪದ್ಧತಿ ಪೂರ್ವದಿಂದಲೂ ಇವರ ಮನೆತನದಲ್ಲಿ ನಡೆದುಕೊಂಡು ಬಂದಂತಹ ಆಚರಣೆಯೂ ಒಂದಾಗಿದೆ.

ಇವರು ಬೇಡಿಕೆಗೆ ತಕ್ಕಂತೆ ಸುಂದರ ಕಟ್ಟಿಗೆ ಮೂರ್ತಿಗಳನ್ನು ತಯಾರಿಸುವ ನಿಪುಣ ಕಲಾವಿದರೆನ್ನಲು, ಈ ಕೆಳಗಿನ ಮೂರ್ತಿಗಳೇ ಸಾಕ್ಷಿಯಾಗಿವೆ. ಕುರುಬರ ಆರಾಧ್ಯ ದೈವವಾದ ಶ್ರೀ ಬೀರಪ್ಪ ದೇವರ ಮೂರ್ತಿಗಳನ್ನು ಶ್ರೇಷ್ಠವಾದ ಹತ್ತಿ ಕಟ್ಟಿಗೆಯ ಬೊಡ್ಡೆಯನ್ನು ಬೇಕಾದ ಆಕೃತಿಗೆ ತಕ್ಕ ಪ್ರಮಾಣಕ್ಕೆ ಕೊರೆದುಕೊಂಡು ಅದರಲ್ಲಿ ದೇವರ ಮೂರ್ತಿ ಕೆತ್ತನೆ ಮಾಡುತ್ತಾರೆ. ಮೂರ್ತಿ ರಚನೆಯಾದ ನಂತರ ಅದರ ಮೇಲೆ ಬಟ್ಟೆಯನ್ನು ಹಚ್ಚಿ ವರ್ಣಾಲಂಕಾರವನ್ನು ಮಾಡುತ್ತಾರೆ.

ಮೊದಲು ಬೇಡಿಕೆಯಂತೆ ದೇವರ ಮೂರ್ತಿಗಳನ್ನು ಶ್ರೇಷ್ಠವಾದ ಹತ್ತಿ ಕಟ್ಟಿಗೆಯನ್ನು ತೆಗೆದುಕೊಂಡು ಪ್ರಮಾಣವನ್ನು ಗುರುತು ಮಾಡಿಕೊಂಡು, ಇದಕ್ಕೆ ಹುಣಸೇ ಬೀಜಗಳನ್ನು ಪುಡಿ ಮಾಡಿ ನೀರಿನಲ್ಲಿ ಮಿಶ್ರಣ ಮಾಡಿ ಕುದಿಸಿ ನೀರನ್ನು ತಯಾರಿಸಿ ಆಕೃತಿ ಬರುವಂತೆ ಹಚ್ಚಿ ಮೊಳೆಗಳಿಂದ ತೂತು ಮಾಡಿ ಒಣಗಿಸಿ, (ಅದರೊಳಗೆ ಗಾಳಿ ಹೋಗಿ ಒಣಗಲು ತೂತುಗಳನ್ನು ಹಾಕುತ್ತಾರೆ) ಪುನಃ ಅದರ ಮೇಲೆ ನೀರು ಹಚ್ಚಿ ಮತ್ತೆ ಒಣಗಿಸಿ ಗಂಜಿ ಬಟ್ಟೆಯನ್ನು ತುಂಡು ಮಾಡಿ ಸರಿ ಹಚ್ಚಿ ಕಟ್ಟಿಗೆಯ ಮೂರ್ತಿಯ ಮೇಲೆ ಸಮನಾಗಿ ಕಾಣುವಂತೆ ಸರಿಯನ್ನು ಹಚ್ಚಲಾಗುತ್ತದೆ. (ತಟ್ಟಿನ ಚೀಲವನ್ನು ಬಾಚಿಯಿಂದ ಸಣ್ಣದಾಗಿ ಕುಟ್ಟಿ ಸರಿಯಾಗಿ ನಾದಿ ಕಿವು(ಪತ್ವ)ವನ್ನು ತಯಾರಿಸುವುದು.)

ನಂತರದಲ್ಲಿ ವಿಭೂತಿಯನ್ನು ಪುಡಿ ಮಾಡಿಕೊಂಡು ಹುಣಸೆ ಪುಡಿಯೊಂದಿಗೆ ಮಿಶ್ರಣ ಮಾಡಿಕೊಂಡು ಬಟ್ಟೆ ಕಟ್ಟಿ ಸೋಸಿ ಬಂದ ಸಿದ್ಧವನ್ನು ಹಚ್ಚಿ ಒಣಗಿದ ಮೇಲೆ ಒದ್ದೆ ಬಟ್ಟೆಗೆ ನುಣುಪಾದ ಕಲ್ಲನ್ನು ತೆಗೆದುಕೊಂಡು ಮಿಂಚುವ ಹಾಗೆ ತಿಕ್ಕುವುದು. ಇದಾದ ನಂತರ ಕ್ರಮವಾಗಿ ತೈಲ ವರ್ಣ ಹಚ್ಚಿ ಅಲಂಕಾರ ಮಾಡಲಾಗುತ್ತದೆ.

ಈ ರೀತಿಯಾಗಿ ಹಲವಾರು ಸುಂದರ ದೇವರ ಮೂರ್ತಿಗಳನ್ನು ತಯಾರಿಸುತ್ತಾರೆ. ಅವುಗಳು ಬೀರಪ್ಪ ದೇವರು, ಗ್ರಾಮ ದೇವತೆಯ ಮೂರ್ತಿಗಳು, ಪಲ್ಲಕ್ಕಿ ಕೆತ್ತನೆ, ಶ್ರೀ ಗಾರುಡಿ ಕೃಷ್ಣಮೂರ್ತಿ, ನಂದೀಶ್ವರ ಮೂರ್ತಿ, ಗಜಗೌರಿ ಮೂರ್ತಿ, ಋಷಿಮುನಿಗಳ ಮೂರ್ತಿಗಳು, ದ್ವಾರಪಾಲಕರ ಮೂರ್ತಿಗಳು, ಚೌರಿ ಬೀಸುವ ಹೆಣ್ಣು ಗೊಂಬೆಗಳು, ಅರಳೆ ಗೊಂಬೆಗಳು, ದುರುಗು-ಮುರ್ಗಿ ದೇವರ ಮೂರ್ತಿಗಳು, ಆನೆ, ಹುಲಿ, ಸಿಂಹ, ನಂದಿವಾಹನ ಅಷ್ಟೇ ಅಲ್ಲದೇ ತೇರಿಗೆ ಅಲಂಕರಿಸುವ ಕಥಾಸರಣಿಯಲ್ಲಿ ದೇವರು, ಅರಳಿ ಕಟ್ಟಿಗೆ ಮೂರ್ತಿಗಳು, ದೇವಸ್ಥಾನಗಳಲ್ಲಿ ಐತಿಹಾಸಿಕ ಸ್ಥಳಗಳಲ್ಲಿಯೂ ನೋಡಲು ಸಿಗುತ್ತವೆ. ಕಲಾವಿದರು ತಾವು ತಯಾರಿಸಿದ ಮೂರ್ತಿಗಳ ಬಿಡಿಭಾಗಗಳನ್ನು ತೆಗದುಕೊಂಡು ದೇವಸ್ಥಾನದ ವ್ಯವಸ್ಥಾಪಕರ ಇಚ್ಛೆಯಂತೆ ಗೊಂಬೆಗಳನ್ನು ಜೋಡಿಸಿ, ಕೈಕಾಲು,

ಮುಖಗಳನ್ನು ಜೋಡಿಸಿ, ವಸ್ತುಗಳಿಂದ ಅಲಂಕಾರ ಮಾಡಿ, ರಟ್ಟಿನಲ್ಲಿ ತಯಾರಿಸಿದ ಕಿರೀಟ, ಕೈಪಟ್ಟಿಗಳನ್ನು ಕಟ್ಟಿ ಮೂರ್ತಿಗಳನ್ನು ಅಲಂಕಾರ ಮಾಡುವುದು ವಿಶೇಷವಾಗಿದೆ.

ಗೊಂಬೆಗಳ ವೇಷ-ಭೂಷಣಗಳು: ದಸರಾ ಹಬ್ಬದಲ್ಲಿ ಸ್ಥಳೀಯ ದೇವಸ್ಥಾನಗಳಲ್ಲಿ ಹತ್ತು ದಿನಗಳು ನಾನಾರೂಪದ ದೇವರುಗಳ ರೂಪವನ್ನು ಬಿಡಿಭಾಗಗಳಿಂದ ಜೋಡಿಸಿ ವಸ್ತ್ರ ವಿನ್ಯಾಸಗಳನ್ನು ಮಾಡಿ ರೂಪಗಳನ್ನು ನೀಡಿ ಅಲಂಕಾರಗೊಳಿಸುತ್ತಾರೆ. ಇದನ್ನು ವೀಕ್ಷಿಸಲು ಸುತ್ತಮುತ್ತಲಿನ ಜನರು ಬರುವುದು ಒಂದು ವಾಡಿಕೆಯಾಗಿದೆ. ಅಲ್ಲದೆ ಋತುಮತಿಯಾದ ಹೆಣ್ಣು ಮಕ್ಕಳಿಗೆ ವಿವಿಧ ವೇಷ ಭೂಷಣಗಳಿಂದ ಅಲಂಕಾರಗೊಳಿಸುವ ಕಲೆಯಲ್ಲಿ ಜಾಣ್ಮೆಯುಳ್ಳವರಾಗಿದ್ದಾರೆ.

ಮುಖವಾಡಗಳು: ಮೊದಲು ಮಣ್ಣಿನಿಂದ ಮುಖವರ್ಣಿಕೆಗೆ ಬೇಕಾದ ಆಕಾರ ವನ್ನು ಮಾಡಿಕೊಂಡು ಅದರ ಮೇಲೆ ಹಾಳೆ, ಬಟ್ಟೆ ತುಂಡುಗಳನ್ನು ಒಂದರ ಮೇಲೆ ಒಂದರಂತೆ ಅಂಟಿನಿಂದ ಹಚ್ಚುತ್ತಾ ಸ್ವಲ್ಪ ದಪ್ಪವಾಗುವವರೆಗೆ ಹಚ್ಚಿ ಅದು ಒಣಗಲು ಬಿಟ್ಟು ನಂತರ ಮುಖವಾಡದಿಂದ ಮಣ್ಣನ್ನು ತೆಗೆದು ಒಣಗಲು ಬಿಟ್ಟು, ಅದು ಸಂಪೂರ್ಣವಾಗಿ ಒಣಗಿದ ನಂತರ ಅದರ ಮೇಲೆ ಬೇಕಾದ ಬಣ್ಣಗಳನ್ನು ಲೇಪನ ಮಾಡುವರು.

ಹುಲಿಯ ಮುಖ, ಸಿಂಹದ ಮುಖ, ಜಿಂಕೆ, ಆಕಳು, ಕುದುರೆ, ಆನೆಯ ಮುಖ, ಜಾತ್ರೆಯಲ್ಲಿ ಕುಣಿಯುವ ಗಂಡು-ಹೆಣ್ಣು ಗೊಂಬೆಗಳು ಮೊದಲಾದ ರೀತಿಯ ಮುಖವಾಡಗಳನ್ನು ಇಲ್ಲಿ ತಯಾರಿಸಲಾಗುತ್ತದೆ. ಕಾಗದ, ಕಾಗದದ ರಟ್ಟು, ಲೋಹ, ಹೊಟ್ಟು, ಬಟ್ಟೆ, ಪ್ಲಾಸ್ಟರ್, ಅರಗು, ಮೇಣ ಮುಂತಾದವುಗಳಿಂದ ಮುಖವಾಡಗಳನ್ನು ರಚಿಸುತ್ತಾರೆ. ಪೂರ್ಣಮುಖ, ಅರ್ಧಮುಖ, ಚಲಿಸುವ ಮುಖ ಮೊದಲಾದ ರೀತಿಯ ಮುಖವಾಡಗಳನ್ನು ತಯಾರಿಸುತ್ತಾರೆ. ದೇವಿಯ ಮುಖವಾಡದ ಹಿಂಭಾಗದಲ್ಲಿ ಮುಖ ತೋರುವಂತೆಯೂ ನೋಡಲು ಎರಡು ರಂಧ್ರಗಳಿರುವಂತೆಯೂ ಮಾಡಿರುತ್ತಾರೆ. ಹಳದಿ, ಕೆಂಪು, ಹಸಿರು ಬಣ್ಣಗಳಿಂದ ಚಿತ್ತಾರಗಳನ್ನು ಬಿಡಿಸುತ್ತಾರೆ.

ಮುಖವಾಡದ ನೃತ್ಯಗಳಲ್ಲಿ ಸೋಮನ ಕುಣಿತ ವಿಶಿಷ್ಟವಾದುದ್ದು. ಈ ಕುಣಿತಕ್ಕೆ ಬಳಸುವ ಕಟ್ಟಿಗೆಯ ಮುಖವಾಡಗಳಿಗೆ ಲೇಪಿಸುವ ವರ್ಣಗಳು ಅಪೂರ್ವವಾದವು. ಕೆಂಚರಾಯ ಮತ್ತು ಕರಿರಾಯ ಎರಡು ಸೋಮ ದೇವರುಗಳ ಮೈಗಾವಲು ಬಂಟರು. ತಮಟೆ, ಡೋಲು ಮುಂತಾದ ವಾದ್ಯಗಳ ಗತ್ತಿಗೆ ತಕ್ಕಂತೆ ಸೋಮ ದೇವರುಗಳು ಹೆಜ್ಜೆ ಹಾಕುತ್ತಾ ಕುಣಿಯುತ್ತವೆ. ಸೋಮನ ಮುಖವಾಡಗಳನ್ನು ಕಲಾವಿದರು ಹಗುರವಾದ ಮರದಿಂದ ರಚನೆ ಮಾಡಿ ಅವುಗಳಿಗೆ ಬಣ್ಣವನ್ನು ಹಾಕುತ್ತಾರೆ. ಮುಂಭಾಗದಲ್ಲಿ ದೊಡ್ಡ

ದೊಡ್ಡ ಕಣ್ಣುಗಳು, ಮೂಗು, ಮೀಸೆ, ಕೋರೆ ಹಲ್ಲುಗಳು, ಹೊರಚಾಚಿದ ನಾಲಿಗೆ, ನೀಳವಾದ ಕಿವಿಗಳು ಕರ್ಣಕುಂಡಗಳ ಮತ್ತು ಮುರಿ ಆಭರಣಗಳು ಇರುತ್ತವೆ. ಹಣೆಯಲ್ಲಿ ಗಂಧದ ತಿಲಕ ಮತ್ತು ಬೊಟ್ಟು ಇಟ್ಟಿರುತ್ತಾರೆ. ತಲೆಯ ಮೇಲೆ ಚಾಚಿದ ಚಿತ್ತಾರದ ಕಿರೀಟವಿರುತ್ತದೆ. ಹಿಂಭಾಗ ತೆರೆದಿರುತ್ತದೆ. ನೃತ್ಯಗಾರ ತನ್ನ ತಲೆಯನ್ನು ಈ ಮುಖವಾಡದಲ್ಲಿ ಇರಿಸುವಷ್ಟು ಟೊಳ್ಳಾದ ಜಾಗವಿರುತ್ತದೆ. ಮುಂಭಾಗದಲ್ಲಿ ಒಳಭಾಗದಿಂದ ನೋಡಲು ಅನುಕೂಲವಾಗುವಂತೆ ಎರಡು ರಂಧ್ರಗಳನ್ನು ಮಾಡಿರುತ್ತಾರೆ. ಅವು ಮುಖವಾಡದ ಕಣ್ಣಿನ ಭಾಗಗಳು, ನೃತ್ಯಗಾರರು ಈ ರಂಧ್ರಗಳ ಮೂಲಕ ನೋಡಲು ಅನುಕೂಲವಾಗುವಂತೆ ಮಾಡಲಾಗಿರುತ್ತದೆ.

II. ಮಣ್ಣಿನ ಮೂರ್ತಿಗಳ ತಯಾರಿಕೆ

ಜೇಡಿ ಮಣ್ಣಿನ ತರಹನಾದ ಕೆಂಪು ಮಣ್ಣನ್ನು ಒಂದು ಕಡೆ ಗುಂಪೆ ಹಾಕಿ ನೀರು ಸಿಂಪಡಿಸಿ ಮೇಲೆ ಹತ್ತಿಯನ್ನು ಹಾಕಿ ಕುಟ್ಟಿ ಹದಮಾಡಿದಾಗ ಮೂರ್ತಿಗಳನ್ನು ತಯಾರಿಸಲು ಮಣ್ಣು ಸಿದ್ಧವಾಗುತ್ತದೆ. ಇದರಿಂದ ಅನೇಕ ದೇವರ ಮೂರ್ತಿಗಳನ್ನು ತಯಾರಿಸಿರುವುದುಂಟು. ಗಣೇಶ ಚತುರ್ಥಿಯಂದು ಕೂಡಿಸುವ ಗಣಪತಿಯ ಮೂರ್ತಿಗಳನ್ನು ಸುಂದರವಾಗಿ ನಾನಾತರಹದ ರೂಪಗಳಲ್ಲಿ, ಚಿಕ್ಕ ಗಾತ್ರದಿಂದ ಹಿಡಿದು ದೊಡ್ಡ ಗಾತ್ರದ ವರೆಗೆ ತಯಾರಿಸು ತ್ತಾರೆ. ಕನ್ನಡ ತಾಯಿ ಶ್ರೀ ಭುವನೇಶ್ವರಿ ಮೂರ್ತಿ, ಶ್ರೀ ಗಜಗೌರಿ ಮೂರ್ತಿ, ಗೋಕುಲಾಷ್ಟಮಿ ಶ್ರೀಕೃಷ್ಣ , ಮಣ್ಣೆತ್ತಿನ ಅಮಾವಾಸ್ಯೆಗೆ ಪೂಜಿಸುವ ಮಣ್ಣೆತ್ತುಗಳು, ನಾಗರಪಂಚಮಿಯಲ್ಲಿ ಪೂಜಿಸುವ ನಾಗಪ್ಪಗಳನ್ನು ಅಲ್ಲದೆ ಇನ್ನೂ ಮುಂತಾದ ಮೂರ್ತಿಗಳನ್ನು ತಯಾರಿಸುವುದರಲ್ಲಿ ಇವರು ಸಿದ್ದಹಸ್ತರು. ಮೊಹರಂ ನಲ್ಲಿ ಹರಕೆ ಹೊತ್ತ ಭಕ್ತರ ಮೈಮೇಲೆ ಹುಲಿಯ ಬರಹ–ಎದೆಯ ಮೇಲೆ ಗಿಳಿಯ ಚಿತ್ರಗಳು ಚಿತ್ತಾಕರ್ಷಕವಾಗಿರುತ್ತವೆ. ಮದುವೆ ಶುಭ ಕಾರ್ಯದಲ್ಲಿ ಮಾಂಗಲ್ಯ ಧಾರಣೆ ಮಾಡುವ(ಹಸೆಮಣಿ ಮೇಲೆ ಮದು ಮಕ್ಕಳು ಕೂಡುವ) ಸ್ಥಳದ ಗೋಡೆಗೆ ಸಂಪ್ರದಾಯದಂತೆ ಸಾಸಿವೆಕಟ್ಟಿಯ ಚಿತ್ರದ ಮೇಲ್ಭಾಗದಲ್ಲಿ ಶಿವನ ಚಿತ್ರ ಪಕ್ಕದಲ್ಲಿ ನಂದಿಯ ಚಿತ್ರಗಳು ಅದರ ಕೆಳಗಡೆ ಒಂದು ಕಡೆ ಭಾಸಿಂಗ ಮತ್ತೊಂದು ಕಡೆ ಸೊಗಸಿನ ಚಿತ್ರ ಮೂರನೇ ಹಂತದಲ್ಲಿ ಶುಭ ಕಾರ್ಯಕ್ಕೆ ಬೇಕಾಗುವ ಐದಗಿತ್ತಿಯರ ಚಿತ್ರ ಚಿತ್ರಿಸಿ ಹಳ್ಳಿಯ ಮನೆ ಮನೆಗಳನ್ನು ಅಂದಗೊಳಿಸುವುದನ್ನು ಕಾಣಬಹುದು.

ಮತ್ತೊಂದು ವಿಶೇಷವೆಂದರೆ ಪುರಾಣದಲ್ಲಿ ಉಲ್ಲೇಖವಾಗಿರುವಂತೆ ಸರ್ವದೇವತೆಗಳ ಆಲಯವಾಗಿರುವ ಕಾಮಧೇನುವಿನ ಚಿತ್ರವನ್ನು ಚಿತ್ರಿಸುವುದೇ ಒಂದು ಸುಂದರ ಕಲೆಯಾಗಿದೆ. ಇಂತಹ ಚಿತ್ರಗಳನ್ನು ಪುಡಿ ಬಣ್ಣದಿಂದ ಮತ್ತು ತೈಲವರ್ಣಗಳಿಂದ ಗೋಡೆಯ ಮೇಲೆ,

ಚೌಕಟ್ಟುಗಳ ಮೇಲೆ ಅವುಗಳನ್ನು ಅಲಂಕರಿಸುವುದು ಈ ಭಾಗದ ಸುತ್ತ ಮುತ್ತಲಿನ ಪರಿಸರದಲ್ಲಿ ಪ್ರಸಿದ್ಧಿ ಪಡೆದ ಕಲೆಯಾಗಿದೆ.

ಊರು ಹಾಗೂ ಪರ ಊರಿನ ದೇವಸ್ಥಾನಗಳ ವರ್ಣಾಲಂಕಾರ ಮತ್ತು ಗೋಪುರ ಗಳನ್ನು ವರ್ಣವಿನ್ಯಾಸದಲ್ಲಿ ಅಂದವಾಗಿ ಕಾಣುವಂತೆ ಚಿತ್ರಗಳಿಂದ ಅಲ್ಲದೆ ದೇವಸ್ಥಾನದ ದ್ವಾರಬಾಗಿಲುಗಳಿಗೆ ವಿವಿಧ ಬಣ್ಣಗಳಿಂದ ಸುಳಿವುಗಳನ್ನು ಗರ್ಭಗುಡಿಯ ಅಕ್ಕ ಪಕ್ಕದ ಗೋಡೆಗೆ ದ್ವಾರಪಾಲಕರ ಚಿತ್ರಗಳನ್ನು ಚಿತ್ರಿಸಿದ ಕಲೆಯನ್ನು ಇಂದಿಗೂ ಹಲವು ಕಡೆ ನೋಡಲು ಸಿಗುತ್ತವೆ. ಗಣೇಶ ಮೂರ್ತಿ, ಗಜಗೌರಿಮೂರ್ತಿ, ಗ್ರಾಮ ದೇವತೆ ಮೂರ್ತಿ, ಬೀರಪ್ಪದೇವರ ಮತ್ತು ಕುದುರೆಗಳಿಗೆ ಇವರು ಕುಂಚದಿಂದ ಮೂಡಿಸುವ ಸೂಕ್ಷ್ಮ ಹಾಗೂ ಸುಂದರ ಚಿತ್ರಗಳು ಇಂದಿಗೂ ಜನಮನ ಸೂರೆಗೊಂಡು, ರಾಜ್ಯ ಹಾಗೂ ನೆರೆ ರಾಜ್ಯದಲ್ಲಿಯು ಸಹ ಪ್ರಸಿದ್ಧಿ ಪಡೆದಿರುವ ಸಂಪ್ರದಾಯಿಕ ಕಲೆಯಾಗಿದೆ.

ಮಣ್ಣೆತಿನ ಅಮವಾಸ್ಯೆಗೆ ಪೂಜಿಸುವ ಮಣ್ಣೆತ್ತುಗಳು ತಯಾರಿಸುವಲ್ಲಿ ಇವರು ಪರಿಪೂರ್ಣ ಹೊಂದಿದ್ದಾರೆ. ಸಾಂಪ್ರದಾಯಿಕ ಕಾರಹುಣ್ಣಿಮೆ ರೈತರಿಗೆ ವಿಶೇಷವಾದ ದಿನವಾಗಿದ್ದು, ಇವರು ಎತ್ತನ್ನು ಅತಿ ಸುಂದರವಾಗಿ ಅಲಂಕರಿಸುತ್ತಾರೆ. ಎತ್ತಿನ ಕೊಂಬಿಗೆ ತೈಲವರ್ಣದ ಬಣ್ಣವನ್ನು ಬಳಸಿ ವಿನ್ಯಾಸ, ಪಕ್ಷಿಗಳು, ಪ್ರಾಣಿ ಮತ್ತು ಹೂ, ಬಳ್ಳಿಗಳನ್ನು ಚಿತ್ರಿಸುತ್ತಾರೆ. ಮಣ್ಣೆತ್ತುಗಳ ಆಕಾರವು ದೊಡ್ಡ ಪ್ರಮಾಣ ಮತ್ತು ಸಣ್ಣ ಪ್ರಮಾಣದಲ್ಲಿ ತಯಾರಿಸುತ್ತಾರೆ. ಈ ಮಣ್ಣೆತ್ತುಗಳ ಮೂರ್ತಿಗಳನ್ನು ಹೆಚ್ಚಾಗಿ ಹಿರಿಯ ಕಲಾವಿದರೆ ಮಾಡು ತ್ತಾರೆ. ಈ ಮೂರ್ತಿಗಳನ್ನು ಬಣ್ಣ ಬಣ್ಣದ ಕಾಗದಗಳಿಂದ ಅಲಂಕರಿಸಿ, ಊರಿನಲ್ಲಿ ಮೆರವಣಿಗೆ ಮಾಡಿ ಸಾಯಂಕಾಲದಲ್ಲಿ ಆ ಮಣ್ಣೆತ್ತುಗಳನ್ನು ತಂದು ಮನೆಯ ಜಗಲಿ ಮೇಲೆ ಇಟ್ಟು ಪೂಜೆಮಾಡುತ್ತಾರೆ. ಈ ಮೂರ್ತಿ ಶಿಲ್ಪಗಳನ್ನು ಮಾರಾಟವು ಸಹ ಕಲಾವಿದರು ಮಾಡುತ್ತಾರೆ.

೧. ಗಣೇಶ ಮೂರ್ತಿಗಳು

ಭಾರತೀಯ ಸಾಂಪ್ರದಾಯಿಕ ಅನೇಕ ಹಬ್ಬಗಳಲ್ಲಿ ಪ್ರಸಿದ್ಧವಾದದ್ದು ಗಣೇಶನ ಹಬ್ಬವು ಒಂದಾಗಿದೆ. ಗಣೇಶನ ಮೂರ್ತಿಗಳು ಗಣೇಶನ ಚತುರ್ಥಿಯಂದು ಕೂಡಿಸುತ್ತಾರೆ. ಈ ಕಲಾವಿದರು ಗಣೇಶನ ಮೂರ್ತಿಯನ್ನು ಮಣ್ಣಿನಲ್ಲಿ ತಯಾರಿಸುತ್ತಾರೆ. ಅವರಿಗೆ ಬೇಕಾದ ರೀತಿಯಲ್ಲಿ ಆಕೃತಿಗಳನ್ನು ಮಾಡಿಕೊಳ್ಳುತ್ತಾರೆ. ಅದರಲ್ಲಿ ಬಾಲ ಗಣೇಶ, ಕಾರ್ತಿಕ ಗಣೇಶ, ಶಿವ ಗಣೇಶ, ಸಿಂಹಾಸನದ ಮೇಲೆ ಕುಳಿತ ಗಣೇಶ ಇನ್ನು ಹಲವಾರು ರೀತಿಯ ಗಣೇಶನ ಮೂರ್ತಿಗಳನ್ನು ನೋಡಬಹುದು. ಮೂರ್ತಿಗಳನ್ನು ತಯಾರಿಸಿಕೊಂಡು ನೈಸರ್ಗಿಕ

ವರ್ಣಗಳನ್ನು ಬಳಸುತ್ತಾರೆ ಮತ್ತು ಆಭರಣಗಳ ಮೇಲೆ ಬಂಗಾರದ ಲೇಪನವನ್ನು ಸಹ ಬಳಸುತ್ತಾರೆ.

೨. ಮುಖವಾಡದ (ಬತಾನೆ) ಮೂರ್ತಿಗಳು: ಮುಖವಾಡ ತಯಾರಿಕೆಯಲ್ಲಿ ಮೊದಲಿಗೆ ಮಣ್ಣಿನಿಂದ ಮೂರ್ತಿಗಳನ್ನು ಮಾಡಿ ಅದರ ಮೇಲೆ ಹಾಳೆ ಮತ್ತು ಬಟ್ಟೆಗಳನ್ನು(ಅರಬಿ) ಹಚ್ಚುತ್ತಾ ಕೊನೆಗೆ ಒಂದು ಬತಾನೆ ತಯಾರಿಸುತ್ತಾರೆ. ಅವುಗಳು ಹುಲಿಯ ಮುಖ, ಸಿಂಹಮುಖ, ಜಿಂಕೆ, ಆಕಳು, ಕುದುರೆ, ಆನೆಯ ಮುಖವಾಡ ಜಾತ್ರೆಯಲ್ಲಿ ಕುಣಿಯುವ ಗಂಡು ಹೆಣ್ಣು ಗೊಂಬೆಗಳು, ಶ್ರೀ ಕಲಬುರ್ಗಿ ಶರಣಬಸವೇಶ್ವರ ದಿಂಬುಗಳು ಹೀಗೆ ಅನೇಕ ಮುಖವಾಡ ಗಳನ್ನು ತಯಾರಿಸಿದ್ದಾರೆ.

೩. ಎತ್ತುಗಳ ಮುಖವಾಡ: ಎತ್ತಿನ ಮುಖವಾಡಗಳು ಮೊದಲು ಮಣ್ಣಿನಲ್ಲಿ ಆಕೃತಿಗಳನ್ನು ತಯಾರಿಸಿಕೊಂಡು ನಂತರ ಅದರ ಮೇಲೆ ಬಟ್ಟೆಯ ತುಂಡುಗಳಿಂದ ಲೇಪನಗಳನ್ನು ಮಾಡುತ್ತಾರೆ. ಅದು ಒಣಗಿದ ನಂತರ ಅದಕ್ಕೆ ಬೇಕಾದ ವರ್ಣಗಳನ್ನು ಸುಂದರವಾಗಿ ಬಳಸಿಕೊಳ್ಳುತ್ತಾರೆ. ಇದರಲ್ಲಿ ಹಲವು ಪ್ರಾಣಿಯ ಮೂರ್ತಿಗಳನ್ನು ನೋಡಬಹುದು. ಅವು ಜಿಂಕೆ, ಹುಲಿ, ಆಕಳು ಇನ್ನು ಹಲವು ರೀತಿಯ ಮೂರ್ತಿಗಳನ್ನು ನೋಡಬಹುದು. ಪ್ರಮುಖವಾಗಿ ಕೆಂಪು, ಹಳದಿ, ಹಸಿರು, ಬಿಳಿ ವರ್ಣಗಳನ್ನು ಉಪಯೋಗಿಸುತ್ತಾರೆ.

III. ಅಂಲಕಾರಿಕ ವಸ್ತು

೧. ಛತ್ರಿ–ಚಾಮರ: ಬಿದಿರಿನಿಂದ ತಯಾರಿಸಿದ ಛತ್ರಿಗೆ ಬಟ್ಟೆಯ ಹೊದಿಕೆಯನ್ನು ಮನೆಯಲ್ಲಿಯೇ ಕತ್ತರಿಸಿ ಮೊದಲೇ ತಯಾರಿಸಿಕೊಂಡು ದಾರದಿಂದ ಹೆಣೆದು ಅದರ ಕೆಳಗೆ ರೇಷ್ಮೆಗಳಿಂದ ಗೊಂಡೆಗಳನ್ನು ಕಟ್ಟಿದ್ದನ್ನು ಸುತ್ತಲೂ ದಾರದಿಂದ ಹೊಲೆದು ಛತ್ರಿಗಳನ್ನು ತಯಾರಿಸುವ ಕಲೆಯನ್ನು ಕುಟುಂಬ ವರ್ಗದವರು ಹೊಂದಿದ್ದಾರೆ. ದೇವಸ್ಥಾನಗಳ ಶುಭ ಸಮಾರಂಭಗಳಲ್ಲಿ ಇವರು ರಚಿಸಿದ ಛತ್ರಿ–ಚಾಮರಗಳನ್ನು ಬಳಸುತ್ತಾರೆ.

ಗ್ರಾಮೀಣ ಜನ ಬಹಳ ಹಿಂದಿನ ಕಾಲದಿಂದಲೂ ಉತ್ಸವ, ಜಾತ್ರೆಯ ಸಮಾರಂಭಗಳಲ್ಲಿ ದೊಡ್ಡ ದೊಡ್ಡ ಪ್ರಮಾಣದ ದೇವಸ್ಥಾನಗಳಲ್ಲಿ ಸರ್ವೆ ಸಾಮಾನ್ಯವಾಗಿ ರಥಗಳಲ್ಲಿ ಮತ್ತು ದೇವಾಲಯಗಳಲ್ಲಿ ಭೂಚಕ್ರಗಳನ್ನು ಬಳಸುತ್ತಾರೆ. ಉತ್ಸವಗಳಲ್ಲಿ ಇದು ಒಂದು ಮುಖ್ಯವಾದ ಆರ್ಕಷಣೆಯ ವಸ್ತುವಾಗಿರುತ್ತದೆ. ಮಕ್‌ಮಲ್ (ವೈಲ್‌ವೇಟ್) ಬಟ್ಟೆಯ ವಸ್ತ್ರಗಳನ್ನು ಬಣ್ಣ ಬಣ್ಣಗಳಿಂದ ಅಲಂಕಾರಿಕವಾಗಿ ಬಳಸುತ್ತಾರೆ. ಇದರಲ್ಲಿ ಮುತ್ತು ಮತ್ತು ರೇಷ್ಮೆಯ ಎಳೆಗಳನ್ನು ಬಳಸಿಕೊಂಡು ಛತ್ರಿಗಳನ್ನು ತಯಾರಿಸುತ್ತಾರೆ. ಇದು ಸುಮಾರು ೭ ರಿಂದ ೮ ಮೀಟರನ

ಉದ್ದದ ಬಿದಿರಿನಲ್ಲಿ ಅಳವಡಿಸಿರುತ್ತಾರೆ. ಇದರ ಅಗಲ ೨೫ ರಿಂದ ೩೦ ಮೀಟರದಲ್ಲಿರುತ್ತದೆ. ಇದು ನೋಡಲು ಸುಂದರ ಮತ್ತು ವೈಶಿಷ್ಟತೆಗಳಿಂದ ಕಾಣುತ್ತದೆ.

೨. ಪುಷ್ಪ(ಹೂವಿನ)ಅಲಂಕಾರ: ಶ್ರೀಯುತ ಪರಶುರಾಮಪ್ಪನವರು ಶ್ರಾವಣ ಮಾಸದಲ್ಲಿ ಸ್ಥಳಿಯ ದೇವಸ್ಥಾನಗಳಿಂದ ಗಂಗೆ ಪೂಜೆಗೆ ಹೊರಡುವ ಉಚ್ಚಾಯಗಳನ್ನು ಹೂವಿನಿಂದ ಅಲಂಕಾರಗೊಳಿಸುವುದು ಇವರ ಒಂದು ವಿಶೇಷ ಕೌಶಲ್ಯವಾಗಿದೆ. ಸ್ಥಳಿಯ ಶ್ರೀನಗರೇಶ್ವರ ದೇವಸ್ಥಾನದ ವಾಸವಿ ಜಯಂತಿ ಪ್ರಯುಕ್ತ ಶ್ರೀ ಕನ್ನಿಕಾ ಪರಮೇಶ್ವರಿಯ ಆನೆಯ ಮೇಲೆ ಅಂಬಾರಿ ಒಳಗೆ ದೇವಿಯ ಮೂರ್ತಿ ಕೂಡಿಸಿ ನಾನಾತರಹದ ಹೂವಿನಿಂದ ಸುಂದರವಾಗಿ ಅಲಂಕಾರ ಮಾಡಿರುವುದು ಅಲ್ಲಿದ್ದ ಜನರ ಕಣ್ಮನಗಳನ್ನು ಸೆಳೆಯುವಂತೆ ಮಾಡಿತ್ತು. ಅಲ್ಲದೇ ಪಂಚಪೀಠಾಧಿಪತಿಗಳ ಹಾಗೂ ಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವ ತಯಾರಿಸಿ ಅದಕ್ಕೆ ವಿವಿಧ ಹೂಗಳಿಂದ ಅಲಂಕರಿಸಿ ಸಿದ್ದಗೊಳಿಸಿದ್ದು ಅಲ್ಲಿ ನೆರೆದಿದ್ದ ಜನಸ್ತೋಮ ಹಾಗೂ ಶ್ರೀ ಗಳಿಗೂ ಆಕರ್ಷಿತವಾಗಿತ್ತು.

೩. ಮುಖವಾಡಗಳ ಮುಖವರ್ಣಿಕೆ: ಮೊದಲ ಮಣ್ಣಿನಿಂದ ಮುಖವರ್ಣಿಕೆಗೆ ಬೇಕಾದ ಆಕಾರವನ್ನು ಮಣ್ಣಿನಿಂದ ಮಾಡಿಕೊಂಡು ಅದರ ಮೇಲೆ ಹಾಳೆ, ಬಟ್ಟೆ ತುಂಡುಗಳನ್ನು ಒಂದಾದ ಮೇಲೆ ಒಂದರಂತೆ ಅಂಟಿನಿಂದ ಹಚ್ಚುತ್ತಾ ಸ್ವಲ್ಪ ದಪ್ಪಗಾಗುವವರೆಗೆ ಹಚ್ಚಿ ಅದು ಒಣಗಲು ಬಿಟ್ಟು ಮುಖವಾಡದಿಂದ ಮಣ್ಣನ್ನು ತೆಗೆದು ಒಣಗಲು ಬಿಟ್ಟು ಅದು ಸಂಪೂರ್ಣವಾಗಿ ಒಣಗಿದ ನಂತರ ಅದರ ಮೇಲೆ ಬೇಕಾದ ಬಣ್ಣಗಳನ್ನು ಲೇಪನ ಮಾಡುವರು.

ಹುಲಿಯ ಮುಖ, ಸಿಂಹದ ಮುಖ, ಜಿಂಕೆ, ಆಕಳು, ಕುದುರೆ, ಆನೆಯ ಮುಖ, ಜಾತ್ರೆಯಲ್ಲಿ ಕುಣಿಯುವ ಗಂಡು-ಹೆಣ್ಣು ಗೊಂಬೆಗಳು ಮೊದಲಾದ ರೀತಿಯ ಮುಖವಾಡಗಳನ್ನು ಇಲ್ಲಿ ತಯಾರಿಸಲಾಗುತ್ತದೆ.

ಕಾಗದ ಮರ, ಕಾಗದದ ರಟ್ಟು, ಲೋಹದ ಮರ, ಹೊಟ್ಟು, ಬಟ್ಟೆ, ಪ್ಲಾಸ್ಟರ್, ಅರಗು, ಮೇಣ ಮುಂತಾದವುಗಳಿಂದ ಮುಖವಾಡಗಳನ್ನು ರಚಿಸುತ್ತಾರೆ. ಪೂರ್ಣಮುಖ, ಅರ್ಧಮುಖ, ಚಲಿಸುವ ಮುಖ ಮೊದಲಾದ ರೀತಿಯ ಮುಖವಾಡಗಳನ್ನು ತಯಾರಿಸುತ್ತಾರೆ.

ದೇವಿಯ ಮುಖವಾಡದ ಹಿಂಭಾಗದಲ್ಲಿ ಮುಖ ಕೂರುವಂತೆಯೂ ನೋಡಲು ಎರಡು ರಂಧ್ರಗಳಿರುವಂತೆಯೂ ಮಾಡಿರುತ್ತಾರೆ. ಹಳದಿ, ಕೆಂಪು, ಹಸಿರು ಬಣ್ಣಗಳಿಂದ ಚಿತ್ತಾರಗಳನ್ನು ಬಿಡಿಸುತ್ತಾರೆ.

ಮುಖವಾಡದ ನೃತ್ಯಗಳಲ್ಲಿ ಸೋಮನ ಕುಣಿತ ವಿಶಿಷ್ಟವಾದುದು. ಈ ಕುಣಿತಕ್ಕೆ ಬಳಸುವ ಮರದ ಮುಖವಾಡಗಳಿಗೆ ಲೇಪಿಸುವ ವರ್ಣಗಳು ಅಪೂರ್ವವಾದವು.

[illegible]

(ಕೆಂಚರಾಯ ಮತ್ತು ಕರಿರಾಯ) ಎಂಬ ಎರಡು ಸೋಮಗಳು ದೇವತೆಯ ಮೈಗಾವಲು ಬಂಟರು. ಹರೆ, ತಮಟೆ, ಡೋಲು ಮುಂತಾದ ಮುಂತಾದ ವಾದ್ಯಗಳ ಗತ್ತಿಗೆ ತಕ್ಕಂತೆ ಸೋಮಗಳ ಹೆಜ್ಜೆ ಹಾಕುತ್ತಾ ಕುಣಿಯುತ್ತದೆ. ಸೋಮನ ಮುಖವಾಡಗಳನ್ನು ಕಲಾವಿದರು ಹಗುರವಾದ ಬೂರುಗದ ಮರದಿಂದ ರಚನೆ ಮಾಡಿ ಅವುಗಳಿಗೆ ಬಣ್ಣವನ್ನು ಹಾಕುತ್ತಾರೆ. ಮುಂಭಾಗದಲ್ಲಿ ದೊಡ್ಡ ದೊಡ್ಡ ಕಣ್ಣುಗಳು, ಮೂಗು, ಮೀಸೆ, ಕೋರೆ ಹಲ್ಲುಗಳು, ಹೊರಚಾಚಿದ ನಾಲಿಗೆ, ನೀಳವಾದ ಕಿವಿಗಳು ಕರ್ಣಕುಂಡಗಳ ಮತ್ತು ಮುರಿ ಆಭರಣಗಳು ಇರುತ್ತವೆ. ಹಣೆಯುಳ್ಳಿ ಗಂಧದ ತಿಲಕ ಮತ್ತು ಬೊಟ್ಟು ಇಟ್ಟಿರುತ್ತಾರೆ. ತಲೆಯ ಮೇಲೆ ಚಾಚಿದ ಚಿತ್ತಾರದ ಕಿರೀಟವಿರುತ್ತದೆ. ಹಿಂಭಾಗ ತೆರೆದಿರುತ್ತದೆ. ನೃತ್ಯಗಾರ ತನ್ನ ತಲೆಯನ್ನು ಈ ಮುಖವಾಡದಲ್ಲಿ ಇರಿಸುವಷ್ಟು ಟೊಳ್ಳಾದ ಜಾಗವಿರುತ್ತದೆ. ಮುಂಭಾಗದಲ್ಲಿ ಒಳಭಾಗದಿಂದ ನೋಡಲು ಅನುಕೂಲವಾಗುವಂತೆ ಎರಡು ರಂಧ್ರಗಳನ್ನು ಮಾಡಿರುತ್ತಾರೆ. ಅವು ಮುಖವಾಡದ ಕಣ್ಣಿನ ಭಾಗಗಳು ನೃತ್ಯಗಾರರು ಈ ರಂಧ್ರಗಳ ಮೂಲಕ ನೋಡಲು ಅನುಕೂಲವಾಗುವಂತೆ ಮಾಡಲಾಗಿರುತ್ತದೆ.

IV. ಭಿತ್ತಿಚಿತ್ರ ವಿನ್ಯಾಸ

೧. ಸಾಸಿವೆ ಕಟ್ಟೆ ಚಿತ್ರದ ವಿನ್ಯಾಸ: ಹಳ್ಳಿಯ ಮನೆಗಳಲ್ಲಿ ಸುಣ್ಣದ ಗೋಡೆಯ ಮೇಲೆ ನೈಸರ್ಗಿಕವಾದ ಬಣ್ಣದ ಪುಡಿಗಳನ್ನು ಬಳಸಿ ಚಿತ್ರಗಳನ್ನು ಬರೆಯುತ್ತಿದ್ದರು. ಈ ನೈಸರ್ಗಿಕವಾದ ಬಣ್ಣಗಳೆಂದರೆ ಸಫೇದ-ಬಿಳಿಬಣ್ಣ ಪೇವಾಡಿ-ಹಳದಿಬಣ್ಣ, ಕೆಂಪು, ಹಸಿರು, ಇಲಾಲ್-ಕಪ್ಪುಪುಡಿ, ಆಕಾಶನೀಲಿ ಮೊದಲಾದ ಬಣ್ಣಗಳ ಜೊತೆಗೆ ಮೀನಸರಿ (ವಜ್ರಸರಿ) ಯನ್ನು ಮಿಶ್ರಣ ಮಾಡಿ ಗೋಡೆಗಳ ಮೇಲೆ ಚಿತ್ತಾರಗಳನ್ನು ಬರೆಯುತ್ತಿದ್ದರು.

ಸಂಪ್ರದಾಯದಂತೆ ಮದುವೆ ಮನೆಗಳಲ್ಲಿ ಮದುಮಕ್ಕಳು ಕೂಡುವ ಸ್ಥಳದಲ್ಲಿ ಹಸೆಚಿತ್ರ (ಸಾಸಿವೆಚಿತ್ರ) ಬರೆಯುವುದು ವಾಡಿಕೆ. ಇದರಲ್ಲಿ ಪ್ರಮುಖವಾಗಿ ಮೂರು ಭಾಗ ಮಾಡಲಾಗಿದೆ. ಮೇಲುಭಾಗದಲ್ಲಿ ಹಂಪಿಯ ವಿರೂಪಾಕ್ಷನ ಚಿತ್ರ, ಮಧ್ಯಭಾಗದಲ್ಲಿ ಎರಡೂ ಬದಿಗೂ ಬಸವಣ್ಣನ ಚಿತ್ರ ಮತ್ತು ಬಲಭಾಗದಲ್ಲಿ ಬಾಸಿಂಗ ಎಡಭಾಗದಲ್ಲಿ ಸೂಸಗ, ಕೆಳಭಾಗದಲ್ಲಿ ಐದಗಿತ್ತಿಯರು ಅಂದರೆ ಒಬ್ಬ ಮಹಿಳೆ ಕಳಸಗಿತ್ತಿ ಉಳಿದವರು ನಾಲ್ವರು ಕೊಡ ಹೊತ್ತವರ ಚಿತ್ರಗಳನ್ನು ಬರೆಯುತ್ತಾರೆ.

ಇವರ ಜೊತೆಗೆ ಮದುವೆ ಮನೆಯಲ್ಲಿ ಸುಣ್ಣದ ಗೋಡೆಯ ಮೇಲೆ ಕಾಮಧೇನು, ಕಲ್ಪವೃಕ್ಷದ ಚಿತ್ರಗಳನ್ನು ಬರೆಯುವ ವಾಡಿಕೆ ಉಂಟು. ಈ ಚಿತ್ರವನ್ನು ಬಿಡಿಸುವ ಮೂಲ ಉದ್ದೇಶವೆಂದರೆ ಮನೆಗೆ ಶುಭಕರವಾಗುವುದು ಜೊತೆಗೆ ಹೆರಿಗೆ ಸಂದರ್ಭದಲ್ಲಿ ಮಹಿಳೆಯರಿಗೆ

ಈ ಚಿತ್ರ ತೋರಿಸಿದರೆ ಸುಗಮವಾಗಿ ಹೆರಿಗೆಯಾಗುತ್ತದೆ ಎಂಬುದು ಈ ಭಾಗದ ಹಿರಿಯರ ನಂಬಿಕೆಯಾಗಿದೆ. **ಅಷ್ಟೇ ಅಲ್ಲದೇ ಮದುವೆ ಮನೆಯಲ್ಲಿ ಮುಖ್ಯದ್ವಾರವನ್ನು ಮತ್ತು** ಒಳಗಿನ ಬಾಗಿಲುಗಳು, ಕಿಟಕಿಗಳು, ಹೂ ಹಾಗೂ ಎಲೆಗಳ ಚಿತ್ತಾರಗಳಿಂದ ಅಲಂಕರಿಸಿ ಕಂಗೊಳಿಸುವಂತೆ ಕಾಣುತ್ತವೆ.

ಸಾಸಿವೆಕಟ್ಟೆ ಚಿತ್ರವನ್ನು ಚಿತ್ರಿಸಲು ಕಲಾವಿದರು ಮೊದಲು ೫೦ ರೂಪಾಯಿಯಿಂದ ಹಿಡಿದು ೫೦೦ ರೂಪಾಯಿಗಳವರೆಗೆ ಸಂಪ್ರದಾಯದಂತೆ(ಅಕ್ಕಿ, ಬೆಲ್ಲ, ಕೊಬ್ಬರಿ ಬಟ್ಟಲು ತೆಂಗಿನಕಾಯಿ ಕುಬಸದ ಕಣ, ಕರ್ಪೂರದ ಊದುಬತ್ತಿ, ಅಡಿಕೆ ಎಲೆ ಮತ್ತು ದಕ್ಷಿಣೆ) ಉಲ್ಪಿಯೊಂದಿಗೆ ಪೂಜೆ ಮಾಡಿಕೊಡುವುದು ಮೊದಲಿನಿಂದಲೂ ನಡೆದುಕೊಂಡು ಬಂದಿರುವ ವಾಡಿಕೆಯಾಗಿದೆ.

ಈ ಕಲೆಯನ್ನು ಇಂದಿನ ಪ್ರಸ್ತುತತೆಗೆ ತಕ್ಕಂತೆ ಇಂದು ಆಧುನಿಕ **ತೈಲವರ್ಣ** ಬಣ್ಣಗಳನ್ನು ಉಪಯೋಗಿಸುತ್ತಾರೆ ಮತ್ತು ಇತ್ತೀಚಿನ ದಿನಗಳಲ್ಲಿ ಕಾರ್ಡ್‌ಬೋರ್ಡ್ ಶೀಟ್‌ಗಳ ಮೇಲೂ ಶಾಸ್ವಿಕಟ್ಟೆ ಮತ್ತು ಕಾಮಧೇನು ಚಿತ್ರಗಳನ್ನು ತಮ್ಮ ತಮ್ಮ ಮನೆಗಳ ಮದುವೆ ಸಂದರ್ಭದಲ್ಲಿ ಶುಭ ಕಾರ್ಯಕ್ಕೆ ಬಾಡಿಗೆಯ ರೀತಿಯಲ್ಲಿ ತೆಗೆದುಕೊಂಡು ಹೋಗುತ್ತಾರೆ. ಶಿವಮೊಗ್ಗ ಜಿಲ್ಲೆಯ ಆನಂದಪುರ, ರಿಪ್ಪನ್‌ಪೇಟೆಗಳಲ್ಲಿ ವಾಸವಾಗಿರುವ ಬಣಗಾರ ಜನಾಂಗದವರು ಮದುವೆ ಸಂದರ್ಭಗಳಲ್ಲಿ ವಧು–ವರರು ಕುಳಿತುಕೊಳ್ಳುವ ಗೋಡೆಯನ್ನು ವರ್ಣರಂಜಿತವಾಗಿ ಸಿದ್ಧಮಾಡಿಕೊಡಬಲ್ಲರು."[೪]

೨. ಕಾಮಧೇನು ಮತ್ತು ಕಲ್ಪವೃಕ್ಷದ ವಿನ್ಯಾಸ: ಹಳ್ಳಿಯ ಮನೆಗಳಲ್ಲಿ ಸುಣ್ಣದ ಗೋಡೆಯ ಮೇಲೆ ನೈಸರ್ಗಿಕವಾದ ವರ್ಣಗಳನ್ನು ಬಳಸಿ ಚಿತ್ತಾರವಾದ ಚಿತ್ರಗಳನ್ನು ಕಲಾವಿದರು ರಚಿಸುತ್ತಿದರು. ಇದರಲ್ಲಿ ಉಪಯೋಗಿಸುವ ನೈರ್ಸಗಿಕವಾದ ಬಣ್ಣಗಳಾದ ಬಿಳಿ ಬಣ್ಣ, ಹಳದಿ ಬಣ್ಣ, ಕೆಂಪು, ಕಪ್ಪುಮಡಿ, ಆಕಾಶ ನೀಲಿ ಬಣ್ಣಗಳನ್ನು ಬಳಸಿ ಅದರ ಜೊತೆಗೆ ಮೀನಸರಿ, ವಜ್ರಸರಿಯನ್ನು ಮಿಶ್ರಣ ಮಾಡಿ ಗೋಡೆಯ ಮೇಲೆ ಸುಂದರವಾದ ಕಲಾಕೃತಿಗಳನ್ನು ರಚಿಸುತ್ತಿದ್ದರು. ಈ ಕಲಾಕೃತಿಯು ಬಣ್ಣ ಬಣ್ಣಗಳಿಂದ ಕೂಡಿವೆ. ಇನ್ನು ಹಲವಾರು ರೀತಿಯ ಕಲಾಕೃತಿಗಳನ್ನು ನೋಡಬಹುದು.

ಮದುವೆ ಮನೆಯ ಬಾಗಿಲಿನ ಚಿತ್ರಗಳು

ಹಳ್ಳಿಯ ಮನೆಗಳಲ್ಲಿ ಮದುವೆ ಸಂದರ್ಭದಲ್ಲಿ ಮುಖ್ಯದ್ವಾರದ ಮೇಲೆ ಮತ್ತು ಒಳಗಿನ ಬಾಗಿಲುಗಳು, ಕಿಟಕಿಗಳ ಮೇಲೆ ಹೂ ಬಳ್ಳಿಯ ಚಿತ್ರಗಳನ್ನು ಕಲಾವಿದರು ರಚಿಸಿದ್ದಾರೆ.

೪. ರಾಮಚಂದ್ರಪ್ಪ ಚಿತ್ರಗಾರ, ಜನಪದ ಕಲಾವಿದ ಪರಶುರಾಮಪ್ಪ ಚಿತ್ರಗಾರ(ಅ.ಪ್ರ), ಪು.೩–೭

ಇದು ನೋಡಲು ಸುಂದರವಾಗಿ ಕಾಣುತ್ತದೆ. ಇದರಲ್ಲಿ ಪ್ರಮುಖವಾಗಿ ಕೆಂಪು, ಹಸಿರು, ಹಳದಿ, ತಿಳಿ ನೀಲಿಯ ವರ್ಣಗಳನ್ನು ಬಳಸುತ್ತಾರೆ.

ದೇವಸ್ಥಾನಗಳಲ್ಲಿರುವ ಚಿತ್ರಗಳು

ಕಂಪ್ಲಿಯ ಶ್ರೀ ಕನ್ನಿಕಪರಮೇಶ್ವರಿ ದೇವಾಲಯಲ್ಲಿ ಇಲ್ಲಿನ ಕಲಾವಿದರು ಅತಿ ಸುಂದರವಾಗಿ ಕಲಾಕೃತಿಗಳನ್ನು ರಚಿಸಿದ್ದಾರೆ. ದೇವಾಲಯ ಗೋಡೆ, ಕಂಬ, ಮೆಟ್ಟಿಲುಗಳ ಮೇಲೆ ಅದ್ಭುತವಾದ ಚಿತ್ರಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ. ಈ ಕಲಾಕೃತಿಗಳಲ್ಲಿ ಹೂ ಬಳ್ಳಿ, ವಿನ್ಯಾಸ, ಬಟ್ಟೆಯ ವಿನ್ಯಾಸಗಳನ್ನು ರಚಿಸಿದ್ದಾರೆ. ಇಲ್ಲಿ ಪ್ರಮುಖವಾಗಿ ಕೆಂಪು, ನೀಲಿ, ಹಳದಿ, ಜಾಂಬಳಿ, ಹಸಿರು ಬಣ್ಣಗಳನ್ನು ಹೆಚ್ಚಾಗಿ ಬಳಸಿಕೊಂಡು ಸುಂದರವಾದ ಕಲಾಕೃತಿಗಳನ್ನು ರಚಿಸಿದ್ದಾರೆ. ದೇವಾಲಯದ ಹೊರ ಭಾಗದಲ್ಲಿ ಮತ್ತು ಒಳ ಭಾಗದಲ್ಲಿ ಕಲಾಕೃತಿಗಳು ಕಂಡುಬರುತ್ತವೆ.

ನಾಟಕದ ಪಾತ್ರಧಾರಿಗಳಿಗೆ ಬಣ್ಣ ಹಚ್ಚುವುದು

ನಾಟಕದಲ್ಲಿ ಬರುವ ಪಾತ್ರಧಾರಿಗಳಿಗೆ ಅನುಗುಣವಾಗಿ ವಸ್ತ್ರ ಆಭರಣಗಳನ್ನು ಹಾಕಿ, ಪಾತ್ರಕ್ಕೆ ತಕ್ಕಂತೆ ಮೀಸೆ, ಹುಬ್ಬು, ಕುಂಕುಮ, ನಾಮ ವಿವಿಧ ರೂಪಗಳನ್ನು ಬರೆದು ಸಿದ್ಧಗೊಳಿಸಿ ಪಾತ್ರಕ್ಕೆ ಸಿದ್ಧಪಡಿಸುವುದು. ಇಂತಹ ಅಲಂಕಾರಕ್ಕೆ ಬೇಕಾದ ವಸ್ತುಗಳನ್ನು ಕಲಾವಿದರು ತಮ್ಮಿಂದಲೇ ತೆಗೆದುಕೊಂಡು ಬಂದು ಉಪಯೋಗಿಸುವುದಾಗಿರುತ್ತದೆ. ಇಷ್ಟಲ್ಲದೇ ದೊಡ್ಡಾಟದ ಪಾತ್ರಧಾರಿಗಳಿಗೆ ಬೇಕಾಗುವ ಕಿರೀಟ, ಭುಜಕೀರ್ತಿ, ಕೈಕಟ್ಟು, ವಡ್ಯಾಣ ಹೀಗೆ ಮೊದಲಾದ ಆಭರಣಗಳು ಹಾಗೂ ಕತ್ತಿ, ಗುರಾಣಿ, ಗದೆ, ಬಿಲ್ಲು ಬಾಣ ಮೊದಲಾದ ಆಯುಧಗಳನ್ನು ತಯಾರಿಸಿ ಪಾತ್ರಕ್ಕೆ ತಕ್ಕಂತೆ ಅಲಂಕರಿಸುವುದು ನಾಟಕ ಯಶಸ್ವಿಯಾಗಲು ಕಾರಣವಾಗುತ್ತದೆ. ನಾಟಕದ ಪಾತ್ರಧಾರರಿಗೆ ಬಣ್ಣದಲ್ಲಿ ಮೊದಲು ವ್ಯಾಸಲಿನ ಎಣ್ಣೆ ಅಥವಾ ಕೊಬ್ಬರಿ ಎಣ್ಣೆಯಲ್ಲಿ ಮೈಬಣ್ಣದ ಪುಡಿಯನ್ನು ಕಲಸಿ ಮುಖಕ್ಕೆ ಹಚ್ಚಿ, ಮೀಸೆ, ಹುಬ್ಬು, ನಾಮಗಳನ್ನು ಹಾಕಿ, ಲಿಫ್‌ಟಿಕ್‌ನಿಂದ ತುಟಿಗಳಿಗೆ ಬಣ್ಣವನ್ನು ಹಚ್ಚಿ ಪೂರ್ಣಗೊಳಿಸಲಾಗುವುದು. ಬಿಳಿ, ಹಳದಿ, ಕೆಂಪು ಈ ಮೂರು ಬಣ್ಣದ ಪುಡಿಗಳನ್ನು ಕೊಬ್ಬರಿ ಎಣ್ಣೆಯಲ್ಲಿ ಬೆರೆಸಿ ಮೀಸೆ, ಹುಬ್ಬು ಕಿವಿಗಳ ಮೇಲೆ ಒದ್ದೆ ಬಟ್ಟೆಯಿಂದ ಒತ್ತುವುದು. ವಿಭೂತಿಯಿಂದ ಕಣ್ಣಿನ ಕೆಳಗೆ ರೇಖೆಯನ್ನು ಹಾಕಿ ವೇಷಕ್ಕೆ ತಕ್ಕಂತೆ ಅಲಂಕಾರ ಮಾಡುತ್ತಾರೆ.

ಮೊಹರಂ ಹಬ್ಬದಲ್ಲಿನ ಹುಲಿ ವೇಷಗಾರಿಕೆ

ಹುಲಿವೇಷವು ಜಾತ್ರೆ-ಉತ್ಸವಗಳಲ್ಲಿ ಮನರಂಜನೆಗಾಗಿ ಪ್ರದರ್ಶನಗೊಳ್ಳುವ ಒಂದು ಕಲೆಯಾಗಿದೆ. ಅಲ್ಲದೇ ಮೊಹರಂ ಹಬ್ಬದಲ್ಲಿ ಹರಕೆ ಹೊತ್ತಂತಹ ವ್ಯಕ್ತಿಯು ಈ ರೀತಿಯ

ವೇಷವನ್ನು ಹಾಕುವುದು ಮೊದಲಿನಿಂದ ಬೆಳೆಸಿಕೊಂಡು ಬಂದಿರುವಂತಹ ಒಂದು ಧಾರ್ಮಿಕ ಆಚರಣೆಯಾಗಿದೆ. ಬಣ್ಣಗಾರಿಕೆಯೇ ಇಲ್ಲಿ ಪ್ರಧಾನವಾಗಿರುವುದರಿಂದ ಇದು ವೇಷಪ್ರಧಾನ ಕಲೆಯಾಗಿದೆ. ನಾಡಿನ ಅನೇಕ ಭಾಗಗಳಲ್ಲಿ ಹುಲಿವೇಷ ಹಾಕುತ್ತಾರೆ. ಮೊಹರಂ ಹಬ್ಬದಲ್ಲಿ ನಾನಾ ನಮೂನೆಯ ವೇಷವನ್ನು ಹಾಕಿಕೊಳ್ಳುತ್ತಾರೆ. ಅವುಗಳಲ್ಲಿ ಹುಲಿವೇಷವೂ ಒಂದು. ಹುಲಿಯ ಮುಖವಾಡವನ್ನು ತಲೆಗೆ ಧರಿಸುತ್ತಾರೆ. ಬರಿ ಮೈಗೆ ಹುಲಿಯ ಪಟ್ಟ ಗೆರೆಗಳನ್ನು ಬರಹ ಮತ್ತು ಎದೆಯ ಮೇಲೆ ಗಿಳಿಯ ಚಿತ್ರಗಳನ್ನು ಬರೆಯಿಸಿಕೊಂಡು ಮೆರವಣಿಗೆಯೊಂದಿಗೆ ತಮ್ಮ ಹರಕೆಯನ್ನು ಸಲ್ಲಿಸುವುದು ಸಂಪ್ರದಾಯವಾಗಿದೆ.

ಮುಸ್ಲಿಂ ಧರ್ಮದವರಿಗೆ ಮಾತ್ರ ಈ ಹಬ್ಬ ಮೀಸಲಾಗಿರದೇ ಹಿಂದೂ ಧರ್ಮದವರು ಈ ಹಬ್ಬದಲ್ಲಿ ಎಲ್ಲರೂ ಪಾಲ್ಗೊಂಡು ಭಾವೈಕ್ಯತೆಯಿಂದ ಮೆರೆಯುತ್ತಾರೆ. ಮುಸ್ಲಿಂ ಸಂಪ್ರದಾಯದ ಮೊಹರಂ ಹಬ್ಬದಲ್ಲಿ 'ಪೀರ' ದೇವರುಗಳ ಪೆಟ್ಟಿಗೆಯನ್ನು ಕಟ್ಟಿಗೆಯಲ್ಲಿ ಮಾಡಿ ಕಿರೀಟದಿಂದ ಅಲಂಕಾರಗೊಳಿಸಿ ವರ್ಣಾಲಂಕಾರಗಳನ್ನು ಮಾಡಲಾಗುತ್ತದೆ. ಮುಖಕ್ಕೆ ಹುಲಿಯ ಮುಖವಾಡವನ್ನು ಧರಿಸಿ ಮೈಗೆ ಚರ್ಮವನ್ನು ಹೋಲುವ ಹಳದಿ-ಕಪ್ಪು ಪಟ್ಟಿಗಳನ್ನು ಬಳಿದುಕೊಂಡಿರುತ್ತಾರೆ. ಕೆಲವರು ಮುಖಕ್ಕೆ ಬದಲಾಗಿ ಮೈಭಾಗಕ್ಕೆಲ್ಲಾ ಬಣ್ಣ ಬಳಿದುಕೊಂಡಿರುತ್ತಾರೆ. ಕೈಬೆರಳಿಗೆ ಹುಲಿಯ ಉಗುರುಗಳನ್ನು ಧರಿಸಿ ನಾರಿನಿಂದ ಮಾಡಿದ ಬಾಲವನ್ನು ಹಿಂದಕ್ಕೆ ಕಟ್ಟಿಕೊಂಡಿರುತ್ತಾರೆ. ಸೊಂಟಕ್ಕೆ ಗೆಜ್ಜೆ ಪಟ್ಟಿಯನ್ನು ಕಟ್ಟಿರುತ್ತಾರೆ. ಹಲಗೆಯ ಬಡಿತಕ್ಕೆ ಹುಲಿ ವೇಷಧಾರಿ ಕುಣಿಯುತ್ತಿರುತ್ತಾರೆ.


ಹಸೆ ಚಿತ್ರಕಲೆ

ಹಸೆ ಚಿತ್ರಕಲೆ ಕಂಪ್ಲಿ ಪ್ರದೇಶದ ಹಳ್ಳಿಗಳಲ್ಲಿ ಜನರು ತಮ್ಮ ಮನೆಯ ಗೋಡೆಗಳಲ್ಲಿ ಬಾಗಿಲು ಚೌಕಟ್ಟು ಮತ್ತು ಹೊಸ್ತಿಲಲ್ಲಿ ಸುಂದರವಾದ ಚಿತ್ರಗಳನ್ನು ರಚಿಸುವುದನ್ನು ರೂಢಿಸಿಕೊಂಡಿದ್ದಾರೆ. ಕೆಮ್ಮಣ್ಣು, ಅಕ್ಕಿ ಹಿಟ್ಟು, ತಾರೆಕಾಯಿ, ದ್ರವ ಮುಂತಾದ ಸ್ಥಳೀಯವಾಗಿ ದೊರೆಯುವ ಸಾಮಾಗಿಗಳಿಂದ ರಚಿಸುತ್ತಾರೆ. ಹೆಚ್ಚಾಗಿ ಮಹಿಳೆಯರೇ ಇಂತಹ ಕಲೆಯಲ್ಲಿ ಪರಿಣಿತರಾಗಿದ್ದಾರೆ. ಬೊಂಬೆಸಾಲು, ಸೀತೆಮುಡಿ, ಭತ್ತದ ಸಾಲು, ಕುಚ್ಚು ಸಾಲು, ಗೊಂಬೆ, ತ್ರಿಕೋನಾಕೃತಿಯ ಮನುಷ್ಯ ಮತ್ತು ಪ್ರಾಣಿಚಿತ್ರಗಳ ಮದುವೆ, ಪಲ್ಲಕ್ಕಿ, ಹಕ್ಕಿಗಳು, ಎತ್ತುಗಳು ಮುಂತಾದವುಗಳು ತಮ್ಮ ಬದುಕಿನಲ್ಲಿ ದಿನನಿತ್ಯ ಕಾಣುವ ದೃಶ್ಯಗಳೇ ಹಸೆಚಿತ್ರ ಕಲಾವಿದರಿಗೆ ವಸ್ತುವಿಷಯಗಳಾಗಿವೆ. ಇದಕ್ಕೊಂದು ಕಲಾತ್ಮಕ ಚೌಕಟ್ಟು ರೂಪಿಸುವುದು ಅವರ ಕಲಾಜಾಣ್ಮೆ.


ಬಿದಿರು ಬುಟ್ಟಿಗಳಿಗೆ ಕೆಮ್ಮಣ್ಣು ಹಚ್ಚಿ, ಅಕ್ಕಿಹಿಟ್ಟಿನಿಂದ ಹಸೆಚಿತ್ರ ಬರೆದು ಭೂಮಿಹುಣ್ಣಿಮೆ ಪೂಜೆಗೆ ಒಯ್ಯುವ ಬುಟ್ಟಿಗಳನ್ನು ಶೃಂಗರಿಸುತ್ತಾರೆ. ಮದುವೆಗಳಾದಾಗ

ಮನೆಯ ಗೋಡೆಗಳಲ್ಲಿ ಮದುಮಕ್ಕಳನ್ನು ಪಲ್ಲಕ್ಕಿಯಲ್ಲಿ ಕೂರಿಸಿ, ವಾದ್ಯಗಳೊಂದಿಗೆ ದಿಬ್ಬಣ ಸಾಗುವ ಚಿತ್ರ ರಚಿಸುತ್ತಾರೆ. ಪ್ರದೇಶದಿಂದ ಪ್ರದೇಶಕ್ಕೆ ಇವುಗಳ ಮಾದರಿಯಲ್ಲಿ ಬದಲಾವಣೆಗಳಿರುತ್ತವೆ. ಶಿವಮೊಗ್ಗದ ಮಲೆನಾಡಿನಲ್ಲಿ ಹುಟ್ಟಿ ಬೆಳೆದು ಈಗ ಕಂಪ್ಲಿಯಲ್ಲಿ ನೆಲೆಸಿರುವ ಡಬ್ಲ್ಯೂ.ಶಿಲ್ಪಾ ಬಸವರಾಜರವರು ಈಗ ಈ ಹಸೆಚಿತ್ರವನ್ನು ರಚಿಸುವಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಾರೆ ಮತ್ತು ಹಸೆಚಿತ್ರಗಳನ್ನು ರಚಿಸುತ್ತಿದ್ದಾರೆ. ಕಂಪ್ಲಿಯಲ್ಲಿ ಮಲೆನಾಡಿನ ಹಸೆಚಿತ್ರಕಲೆ ಇಲ್ಲಿ ಹೊಸರೂಪವನ್ನು ಪಡೆದು ಬೆಳೆಯುತ್ತಿರುವುದು ಗಮನಾರ್ಹವಾಗಿದೆ.

ದಶಾವತರ ಮೂರ್ತಿಗಳು










ಶ್ರೀ ಯಮಧರ್ಮರಾಜ


ಶ್ರೀ ಗಜಾಸುರ


ಶ್ರೀ ಚತುರ್ಮುಖ ಬ್ರಹ್ಮ


ಶ್ರೀ ಷಣ್ಮುಖ


ಶ್ರೀ ವೀರಭದ್ರೇಶ್ವರ


ಶ್ರೀ ಆತ್ಮಲಿಂಗ ರಾವಣ


ಶ್ರೀ ನಂದೀಶ


ಶ್ರೀ ನಂದೀಶ



ಶ್ರೀ ದೇವಿ ಮೂರ್ತಿ



ಶಿವ ಪಾರ್ವತಿ ಪರಿವಾರದ ಮೂರ್ತಿ



ಲಕ್ಷ್ಮೀ ಮತ್ತು ಶಿವ ಪಾರ್ವತಿ

ಅಧ್ಯಾಯ : ನಾಲ್ಕು

ಕಲಾಕೃತಿಗಳ ರಚನಾ ವಿಧಾನ, ತಂತ್ರ, ಶೈಲಿ, ಪ್ರಭಾವ ಮತ್ತು ಪ್ರೇರಣೆ

ಅಧ್ಯಾಯ : ನಾಲ್ಕು

ಕಲಾಕೃತಿಗಳ ರಚನಾ ವಿಧಾನ, ತಂತ್ರ, ಶೈಲಿ, ಪ್ರಭಾವ ಮತ್ತು ಪ್ರೇರಣೆ

ಈ ಅಧ್ಯಯದಲ್ಲಿ ಕಲಾಕೃತಿಗಳಾದ ಕಿನ್ನಾಳ ಕಲೆ, ಮರದ ಮೂರ್ತಿ, ಮಣ್ಣಿನ ಮೂರ್ತಿಗಳನ್ನು ಮಾಡುವ ವಿಧಾನ, ತಂತ್ರ, ಶೈಲಿ, ಪ್ರಭಾವ ಮತ್ತು ಪ್ರೇರಣೆಯ ಕುರಿತು ಹಂತ ಹಂತವಾಗಿ ಕೆಳಗೆ ವಿವರಿಸಲಾಗಿದೆ.

ಕಲಾವಿದರ ಸಂಪ್ರದಾಯ ಮತ್ತು ರಚನಾ ವಿಧಾನ

ಈ ಕಲಾವಿದರು ಎಲ್ಲಾ ಮಾದರಿಯ ಕರಕುಶಲಕಲೆ ರಚನೆಯಲ್ಲಿ ಬಹಳ ನಿಪುಣತೆಯನ್ನು ಹೊಂದಿದವರಾಗಿದ್ದಾರೆ ಎಂದೇ ಹೇಳಬಹುದು. ಗೊಂಬೆಗಳ ತಯಾರಿಕೆ ಮತ್ತು ಬಣ್ಣಗಾರಿಕೆಯಲ್ಲಿ ಕುಶಲತೆಯನ್ನು ಇಲ್ಲಿನ ಕಲಾವಿದರು ಸಾಧಿಸಿದ್ದಾರೆ. ಒಂದು ಮೂರ್ತಿ ತಯಾರಿಕೆಯಲ್ಲಿ ಕಲಾವಿದರು ಭಕ್ತಿ, ಶೃದ್ಧೆಯನ್ನು ಆಚರಣೆ ಮತ್ತು ಒಳ್ಳೆಯ ಮನಸ್ಸನ್ನು ಇಟ್ಟುಕೊಳ್ಳಬೇಕು ಅದರಲ್ಲಿ ಗೊಂಬೆಗಳನ್ನು ತಯಾರಿಸಲು ಮೊದಲು ಶ್ರದ್ಧೆ, ಭಕ್ತಿಯನ್ನು ಅನುಸರಿಸುತ್ತದೆ. ಮೊದಲು ಸ್ನಾನ ಮಾಡಿ ನಂತರ ದೇವರ ಪೂಜೆ ಮಾಡಿ ಮಡಿಯಿಂದ ದೇವರ ಮೂರ್ತಿಗಳನ್ನು ಮಾಡಲು ಸಿದ್ದತೆಯನ್ನು ಮಾಡಿಕೊಳ್ಳುತ್ತಾರೆ. ಇಂತಹ ಪದ್ದತಿ ಪೂರ್ವದಿಂದಲೂ ಇವರ ಮನೆತನದಲ್ಲಿ ನಡೆದುಕೊಂಡು ಬಂದಂತಹ ಆಚರಣೆಯಾಗಿದೆ. ಇವರ ಕಲಾಕೃತಿಯ ಬೇಡಿಕೆಗೆ ತಕ್ಕಂತೆ ಸುಂದರ ಕಟ್ಟಿಗೆ ಮೂರ್ತಿಗಳನ್ನು ತಯಾರಿಸುವ ನಿಪುಣ ಕಲಾವಿದರೆನ್ನಲು ಈ ಕೆಳಗಿನ ಮೂರ್ತಿಗಳೇ ಸಾಕ್ಷಿಯಾಗಿವೆ.

ಕಲಾವಿದರು ಜನಸಾಮಾನ್ಯರ ಬೇಡಿಕೆಗೆ ಅನುಗುಣವಾಗಿ ಕಲಾಕೃತಿಯನ್ನು ರಚಿಸುತ್ತಾರೆ. ದೇವರ ಮೂರ್ತಿಗಳನ್ನು ರಚಿಸಲು ಶ್ರೇಷ್ಠವಾದ ಹತ್ತಿ ಕಟ್ಟಿಗೆಯ ಬಡ್ಡೆಯನ್ನು ಬಳಸಿಕೊಂಡು, ಬೇಕಾದ ಆಕೃತಿಗೆ ತಕ್ಕ ಪ್ರಮಾಣಕ್ಕೆ ಕೊರೆದುಕೊಂಡು ಅದರಲ್ಲಿ ದೇವರ ಮೂರ್ತಿಯನ್ನು

ಕೆತ್ತನೆ ಮಾಡುತ್ತಾರೆ. ಮೂರ್ತಿ ರಚನೆಯಾದ ನಂತರ ಅದರ ಮೇಲೆ ಹುಣಸೇ ಬೀಜಗಳನ್ನು ಪುಡಿಮಾಡಿ ನೀರಿನಲ್ಲಿ ಮಿಶ್ರಣ ಮಾಡಿ ಕುದಿಸಿ ಆರಿದ ನಂತರ ಅದರಲ್ಲಿ ಕಟ್ಟಿಗೆ ಪುಡಿ, ತಟ್ಟಿನ ಪುಡಿ, ಸರಿಯಲ್ಲಿ ಕುದಿಸಿ ನಾರನ್ನು ತಯಾರಿಸಿ ಆಕೃತಿ ಬರುವಂತೆ ಹಚ್ಚಿ ಮೊಳೆಗಳಿಂದ ತೂತು ಮಾಡಿ ಒಣಗಿಸಿ(ಅದರೊಳಗೆ ಗಾಳಿ ಹೋಗಿ ಒಣಗಲು ತೂತುಗಳನ್ನು ಹಾಕುತ್ತಾರೆ) ಪುನಃ ಅದರ ಮೇಲೆ ನಾರು ಹಚ್ಚಿ ಮತ್ತೆ ಒಣಗಿಸಿ ಗಂಜಿ ಸಮನಾಗಿ ತುಂಡು ಮಾಡಿ ಸವರಿ ಹಚ್ಚಿ ಕಟ್ಟಿಗೆಯ ಮೂರ್ತಿಯ ಮೇಲೆ ಸಮನಾಗಿ ಕಾಣುವಂತೆ ಹಚ್ಚಿ ಮೇಲೆ ಸರಿಯನ್ನು ಕುಟ್ಟಿ ಹುಣಸೇ ಸರಿಯಿಂದ ನುಣುಪು ಮಾಡಿ ಕಿವು (ಪಕ್ವ) ತಯಾರಿಸುವುದು.

ನಂತರದಲ್ಲಿ ವಿಭೂತಿಯನ್ನು ಪುಡಿಮಾಡಿಕೊಂಡು ಹುಣಸೆ ಸರಿಯೊಂದಿಗೆ ಮಿಶ್ರಣ ಮಾಡಿಕೊಂಡ ಬಟ್ಟೆ ಕಟ್ಟಿ ಸೋಸಿ ಬಂದ ಶುದ್ಧವನ್ನು ಹಚ್ಚಿ ಒಣಗಿಸಿದ ಮೇಲೆ ಒದ್ದೆ ಬಟ್ಟೆಯನ್ನು ತೆಗೆದುಕೊಂಡು ನುಣುಪಾದ ಕಲ್ಲು ತೆಗೆದುಕೊಂಡು ಮಿಂಚುವ ಹಾಗೆ ಉಜ್ಜುವುದು, ನಂತರ ಬಣ್ಣ ಲೇಪನದ ಪೂರ್ವದಲ್ಲಿ ಪ್ರೈಮರ್ ಹಚ್ಚಲಾಗುವುದು. ಇದಾದ ನಂತರ ಕ್ರಮವಾಗಿ ತೈಲವರ್ಣ ಹಚ್ಚಿ ಚಿತ್ರವಿನ್ಯಾಸ ಮಾಡಲಾಗುತ್ತದೆ.

ಈ ರೀತಿಯಾಗಿ ಹಲವಾರು ಸುಂದರ ದೇವರ ಮೂರ್ತಿಗಳನ್ನು ತಯಾರಿಸುತ್ತಾರೆ. ಅವುಗಳ ಬೀರಪ್ಪ ದೇವರು, ಗ್ರಾಮ ದೇವತೆಯರ ಮೂರ್ತಿಗಳು, ಪಲ್ಲಕ್ಕಿ ಕೆತ್ತನೆ, ಗಾರುಡಿ ದ್ವಾರಪಾಲಕರು ಮೂರ್ತಿಗಳು, ಚೌರಿ ಬೀಸುವ ಹೆಣ್ಣು ಗೊಂಬೆಗಳು, ಅರಳೆ ಗೊಂಬೆಗಳು, ದುರುಗುಮುರ್ಗಿ ದೇವರು ಮೂರ್ತಿಗಳು, ಆನೆ, ಹುಲಿ, ಸಿಂಹದ ಕಟ್ಟಿಗೆ ಮೂರ್ತಿಗಳು ದೇವಸ್ಥಾನಗಳಲ್ಲಿ ಮೂರ್ತಿಗಳನ್ನು ಬಿಡಿಭಾಗಗಳನ್ನು ತಗೆದುಕೊಂಡು ದೇವಸ್ಥಾನಗಳಲ್ಲಿ ಊರಿನ ಹಿರಿಯರು ಮಾರ್ಗಸೂಚಿಯಂತೆ ಗೊಂಬೆಗಳನ್ನು ಜೋಡಿಸಿ, ಕೈಕಾಲು ಮುಖಗಳನ್ನು ಜೋಡಿಸಿ, ವಸ್ತ್ರಗಳಿಂದ ಅಲಂಕಾರ ಮಾಡಿ ರಟ್ಟಿನಲ್ಲಿ ಇವರೇ ತಯಾರಿಸಿದ ಕೀರಿಟ, ಕೈಪಟ್ಟಿಗಳನ್ನು ಕಟ್ಟಿ ಮೂರ್ತಿಗಳನ್ನು ಅಲಂಕಾರ ಮಾಡುವದು ವಿಶೇಷವಾಗಿದೆ. ಈ ರೀತಿಯಾಗಿ ಕಲಾವಿದರು ಅನೇಕ ಕಲಾಕೃತಿಗಳನ್ನು ಹಾಗೂ ಮೂರ್ತಿಗಳನ್ನು ತಯಾರಿಸಿದ್ದಾರೆ.

ಕಲಾಕೃತಿ ರಚನೆಗೆ ಬಳಸುವ ಪರಿಕರಗಳು

ಕುಂಚ, ಉಳಿ, ಕೊಡಲಿ, ಸುತ್ತಿಗೆ, ಮೊಳೆಗಳು, ಗರಗಸ, ಫೈಲ್, ಪಾಲಿಶ್ ಪೇಪರ್ ಹಾಗೂ ಇತ್ಯಾದಿ.

ಕಲಾಕೃತಿ ರಚನೆಗೆ ಬಳಸುವ ಕಚ್ಚಾ ಸಾಮಾಗ್ರಿಗಳು

ಪುಡಿಬಣ್ಣ, ಬಿದಿರಿನಕಡ್ಡಿ, ಸರಿ, ರೇಷ್ಮೆ ಪೇಪರ್, ಹುಣಸೇಬೀಜ, ಗಂಜಿಬಟ್ಟೆ, ತಟ್ಟಿನ ಸಾರು, ಕಟ್ಟಿಗೆ, ಮಣ್ಣು, ತಂತಿ, ದಾರ, ಅಂಟು(ಪೆವಿಕಾಲ್).

ಬಣ್ಣಗಳು : ೧.ಜಲವರ್ಣ ೨. ತೈಲವರ್ಣ ೩. ಲಜಾವರ ವರ್ಣ

ಹೀಗೆ ಬಳಸುವ ಕೆಲವು ಕಚ್ಚಾ ಸಾಮಾಗ್ರಿಗಳ ಕುರಿತು ಈ ಮುಂದೆ ವಿಸ್ತಾರವಾಗಿ ಕಾಣಬಹುದಾಗಿದೆ.

ಕಟ್ಟಿಗೆ

ಹತ್ತಿ ಕಟ್ಟಿಗೆ, ಬೇವಿನ ಕಟ್ಟಿಗೆ, ನುಗ್ಗೆ ಮರದ ಕಟ್ಟಿಗೆ ಇವು ಹಗುರವಾಗಿರುತ್ತವೆ ಹಾಗೂ ಜೊತೆಗೆ ಮೃದುವಾಗಿರುತ್ತವೆ. ಹೀಗಾಗಿ ಮೊಹರಂ ದೇವರುಗಳ ಪೆಟ್ಟಿಗೆ, ಪಲ್ಲಕ್ಕಿಗಳು, ಗೊಂಬೆಗಳು, ಕಟ್ಟಿಗೆಯ ಮೂರ್ತಿಗಳಂತಹ ವಸ್ತುಗಳನ್ನು ಕಟ್ಟಿಗೆಯನ್ನು ಸಂಗ್ರಹಿಸಿದ ನಂತರ ಅದನ್ನು ಮೃದುಗೊಳಿಸಿ ನಯವಾಗಿಸಿಕೊಂಡು ಆಮೇಲೆ ಬೇಕಾದ ಆಕೃತಿಗಳನ್ನು ಕೆತ್ತನೆ ಮೂಲಕ ತಯಾರಿಸುತ್ತಾರೆ.

ಕಟ್ಟಿಗೆ ಪುಡಿ

ಹತ್ತಿ ಕಟ್ಟಿಗೆ, ಬೇವಿನ ಕಟ್ಟಿಗೆ, ನುಗ್ಗೆ ಮರದ ಕಟ್ಟಿಗೆ ಇವು ಮೃದು ಹಾಗೂ ಹಗುರ. ಇವುಗಳೊಂದಿಗೆ ಜಾಲಿಗಿಡದ ಅಂಟನ್ನು ಬಳಸಿ ಪುಡಿಯನ್ನು ತಯಾರಿಸುತ್ತಾರೆ. ಈ ರೀತಿ ಬಳಸಿದರೆ ಗೊಂಬೆಗಳನ್ನು ನಿರ್ಮಿಸಿದ ನಂತರ ಹೆಚ್ಚು ತೂಕ ಇರುವುದಿಲ್ಲ ಹಾಗೂ ಬೇರೆ ಕಡೆಗೆ ತೆಗೆದುಕೊಂಡು ಹೋಗುವುದಕ್ಕೆ ಸರಳವಾಗಿರಲೆಂದು ಈ ಪರಿಕರವನ್ನೇ ಹೆಚ್ಚಾಗಿ ಬಳಸುವುದನ್ನು ರೂಢಿಸಿಕೊಂಡಿದ್ದಾರೆ."[೧]

ಹುಣಸೆ ಬೀಜದ ಸರಿ

"ಹುಣಸೆ ಬೀಜದ 'ಸರಿ'ಯನ್ನು ಗೊಂಬೆಗಳಿಗೆ ಬಳಸುತ್ತಾರೆ. ಇದೇ ಗೊಂಬೆಗಳಿಗೆ ರಕ್ತ ಮತ್ತು ಮಾಂಸದಂತೆ ಕೆಲಸ ಮಾಡುತ್ತದೆ. ಹಿಂದೆ ಈ ಸರಿಯನ್ನು ತಯಾರಿಸಲು ಹುಣಸೆ ಬೀಜಗಳನ್ನು ೨-೩ ದಿನಗಳ ಕಾಲ ನೆನೆಸಿಟ್ಟು ನಂತರ ಅದನ್ನು ರುಬ್ಬಿ ಮುದ್ದೆ ಹಾಗೆ ಮಾಡಿ ಒಂದು ಹದಕ್ಕೆ ಬರುವವರೆಗೂ ರುಬ್ಬುತ್ತಿದ್ದರು. ಆದರೆ ಈಗ ಆಧುನಿಕತೆಯ ನೆರಳು ಇಲ್ಲಿಯೂ ಹರಿದಿದೆ. ರುಬ್ಬಿ ಕುಟ್ಟಿ ಪುಡಿ ಮಾಡುವ ಬದಲಾಗಿ ರುಬ್ಬುವ ಗಿರಣಿಗೆ

೧. ಅಶ್ವಿನಿ ಕಿನ್ನಾಳ ಕಲೆಯಿಂದ ಅರಳಿದ ಮಹಿಳಾ ಕಲಾವಿದರ ಬದುಕು, ಪು.೩೨

(ಗಿರಣಿಯಂತ್ರ) ಹಾಕಿಸಿಕೊಂಡು ಬಂದ ಜಿಗಿಯನ್ನು ತಯಾರಿಸಿ ಸರಿಯಾಗಿ ಬಳಕೆ ಮಾಡುತ್ತಾರೆ. ಕಟ್ಟಿಗೆ ಮಡಿ ಗೊಂಬೆಗಳಿಗೆ ಇದನ್ನು ಬಳಸುತ್ತಾರೆ. ಇದಕ್ಕೆ ತಟ್ಟಿನ ಗಂಜಿಯನ್ನು ಬಳಸಿ ಹಚ್ಚುತ್ತಾರೆ. ಅದರಿಂದಲೇ ಗೊಂಬೆಗಳನ್ನು ಗಟ್ಟಿಗೊಳಿಸುತ್ತಾರೆ."[೨]

ಬಣ್ಣಗಳು

೧. ಮಡಿ ಬಣ್ಣ(ಟೆಂಪ್ರ ವರ್ಣಗಳು): ಭಾರತದಲ್ಲಿ ಜಲವರ್ಣ ತಯಾರಿಸುವ ಪದ್ಧತಿ ಪ್ರಾಚೀನ ಕಾಲದಿಂದಲೂ ಹಲವಾರು ವಿಧದಲ್ಲಿ ಇದೆ. ಮಡಿ ಬಣ್ಣವನ್ನು ನೈಸರ್ಗಿಕವಾಗಿ ದೊರೆಯುವ ಕಲ್ಲು, ಮಣ್ಣಿನಿಂದಲೂ ಕೆಲವು ಗಿಡದ ಎಲೆಗಳ ರಸದಿಂದಲೂ ತಯಾರಿಸುತ್ತಾರೆ. ದೀಪದ ಕಪ್ಪು ಕುಡಿಗೆಯಿಂದಲೂ ಹೀಗೆ ಹಲವು ರೀತಿಯಿಂದ ವಸ್ತುಗಳ ಮಿಶ್ರಣದಿಂದ ತಯಾರಿಸಿ, ಮಡಿ ಬಣ್ಣದಲ್ಲಿ ಜಾಲಿಗಿಡದ ಅಂಟನ್ನು ಮೀನಸರಿ, ಮೊಟ್ಟೆಯ ಲೋಳೆಯನ್ನು ಇಲ್ಲವೇ ಪತ್ರಿಯ ಅರಗನ್ನು ಸ್ಪಿರಿಟ್‌ದೊಂದಿಗೆ ಬೆರಸಿ ತಯಾರಿಸಿದ ರಸವನ್ನು ಮಿಶ್ರಣ ಮಾಡಿ, ಬಣ್ಣ ಲೇಪನ ಮಾಡುತ್ತಾರೆ. ಹೀಗೆ ತಯಾರಿಸಲ್ಪಟ್ಟ ಬಣ್ಣಗಳನ್ನು ಡಬ್ಬಗಳಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳುತ್ತಾರೆ. ಬೇಕಾದ ಸಂದರ್ಭಗಳಲ್ಲಿ ಲೇಪನ ಮಾಡಿ೬೦-೭೦ ವರ್ಷಗಳ ಕಾಲ ಬಾಳಿಕೆ ಬರುತ್ತವೆ ಎಂಬ ಉದ್ದೇಶದಿಂದ ದೇಶೀ ನೆಲದಲ್ಲಿ ಸಿಗುವ ಬಣ್ಣದ ಅಂಟನ್ನು ತಯಾರಿಸಿಕೊಳ್ಳುತ್ತಾರೆ. ಈ ರೀತಿಯ ರಚನಾ ವಿಧಾನವು ಮುಂದಿನ ತಲೆಮಾರಿಗೆ ಅಧ್ಯಯನಕ್ಕೆ ಉಪಯೋಗವಾಗುತ್ತವೆ.

೨. ಲಜಾವರ ಬಣ್ಣ: ಕಂಪ್ಲಿಯ ಕರಕುಶಲ ಕಲಾಕೃತಿಗಳ ವಿಶೇಷಾತಿಗೆ ಲಜಾವರ ಬಣ್ಣವೇ ಕಾರಣ. ಈ ಬಣ್ಣ ಬಿಳಿ ವಾರ್ನಿಷನಂತೆ ಕಂಡರೂ ಬೆಳ್ಳಿ ಬಣ್ಣವೆಂದೇ ಹೇಳುತ್ತಾರೆ. ತವರನ್ನು ಸರಿಯಲ್ಲಿ ಹಾಕಿ, ಕುಟ್ಟಿ ಕುಟ್ಟಿ ಸಣ್ಣಗೆ ಮಾಡಿ, ಒದ್ದೆ ಇಡುತ್ತಾರೆ. ಒದ್ದೆಯಾದ ಮೇಲೆ ಕಿವುಚಿ ಸೋಸುತ್ತಾರೆ. ತೇಲಿ ಬಿಟ್ಟ ಹೊಂಡನ್ನೇ ಲಜಾವರ ಬಣ್ಣವನ್ನಾಗಿ ಮಾಡಿ, ತಯಾರಿಸಿದ ಗೊಂಬೆ ಕಲಾಕೃತಿಗಳಿಗೆ ತಕ್ಕ ಬಣ್ಣವನ್ನು ಹಚ್ಚಿ ತಿಕ್ಕುತ್ತಾರೆ. ಈ ಕಲ್ಲು ಬೆಳ್ಳಿಗೆ ಪಾರದರ್ಶಕದಂತಿದ್ದು, ಅದು ಭೀಮಾನದಿ ದಂಡೆಗಳಲ್ಲಿ ಸಿಗುತ್ತದೆ. ಲಜಾವರ ಬಣ್ಣಗಳಲ್ಲಿ ಬೇರೆ-ಬೇರೆ ಬಣ್ಣ ಕೂಡಿಸಿ ಬೇಕಾದಂತಹ ಬಣ್ಣಗಳ ಲಾಸ್ಯವನ್ನು ಸೃಷ್ಟಿಸುತ್ತಾರೆ. ಅಲ್ಲದೇ ಬಿಳಿ ಬಣ್ಣವನ್ನು ಅಡವಿಯಲ್ಲಿ ಸಿಗುವ ಸುಣ್ಣದ ಕಲ್ಲುಗಳನ್ನು ತಂದು ನೀರಿನಲ್ಲಿ ಜಾಲಿಸಿ, ತಿಳಿ ಬಿಟ್ಟು ತಳದ ಹೊಂಡವನ್ನು ಬಿಳಿ ಬಣ್ಣವನ್ನಾಗಿ ಬಳಸುತ್ತಾರೆ. ಹೀಗಾಗಿಯೇ ಲಜಾವರ ಬಣ್ಣ ಕಂಪ್ಲಿ ಕರಕುಶಲ ಕಲಾಕೃತಿಗಳಿಗೆ ಸೌಂದರ್ಯ ವರ್ಧಕವಿದ್ದಂತೆ.

---

೨. ಅಶ್ವಿನಿ ಕಿನ್ನಾಳ ಕಲೆಯಿಂದ ಅರಳಿದ ಮಹಿಳಾ ಕಲಾವಿದರ ಬದುಕು, ಪು.೨೩

ಈ ಬಣ್ಣವೇ ಅಲ್ಲಿನ ಕಲಾಕೃತಿಗಳಿಗೆ ಅದ್ಭುತ ಮೆರಗನ್ನು ಮೂಡಿಸುತ್ತದೆ. ಈ ಲಜಾವರ ಬಣ್ಣ ಅತ್ಯಂತ ಪುರಾತನ ಕಾಲದ ಬಣ್ಣದ ವಿಧಾನವಾಗಿದೆ. ಕರಕುಶಲ ಚಿತ್ರಗಾರರು ಅವರ ಕಲಾಕೃತಿಗಳಿಗೆ ದಿನೆದಿನೆ ಹೆಚ್ಚುಚ್ಚು ಹೊಳಪು ಪಡೆದುಕೊಳ್ಳಲು ಇದು ಮಹತ್ವಪೂರ್ಣವಾದುದ್ದಾಗಿದೆ. ಚಿತ್ರಗಾರರು ಅವರ ಕಲಾಕೃತಿ ನಿರ್ಮಾಣ ಕಾರ್ಯದಲ್ಲಿ ಈ ವರ್ಣವು ಬಹುಮುಖ್ಯ ಪಾತ್ರ ವಹಿಸುತ್ತದೆ ಎಂದು ಸಂಶೋಧನಾತ್ಮಕವಾಗಿ ಹೇಳ ಬಹುದು.

ತೈಲ ವರ್ಣ

ತೈಲವರ್ಣ ತಯಾರಿಸಲು ಬಣ್ಣದ ಪುಡಿಯನ್ನು ಉಪಯೋಗಿಸುತ್ತಾರೆ, ಬಣ್ಣದ ಪುಡಿಯನ್ನು ಮಿಶ್ರಣ ಮಾಡಲು ವಾರ್ನಿಸಯನ್ನುವ ತೈಲವನ್ನು ಬಳಸುತ್ತಾರೆ. ಹೀಗೆ ತಯಾರಿಸಿದ ತೈಲವರ್ಣವನ್ನು ಪುಡಿ ಬಣ್ಣದಲ್ಲಿ ಮಿಶ್ರಣ ಮಾಡಿದರೆ ತೈಲವರ್ಣ ಸಿದ್ದವಾಗುತ್ತದೆ. ಇದರಲ್ಲಿ ಉಪಯೊಗಿಸುವ ಪದಾರ್ಥಗಳೆಂದರೆ ಅವು ಪತ್ರಿಯ ಅರಗು, ಬೆಲ್ಲ, ಆಳೆಯ ಬಳಿಯ ರಾಳ, ಕೆಂಪು ರಾಳ, ಸೀಮೆ ಎಣ್ಣಿ ಮುಂತಾದ ಪದಾರ್ಥಗಳನ್ನು ಬಳಸುತ್ತಾರೆ.

ಪ್ರಸ್ತುತ ಸಂದರ್ಭದಲ್ಲಿ ಕಲಾವಿದರು ರಾಸಾಯನಿಕ ವರ್ಣಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆ. ಆದ ಕಾರಣ ಕಲಾವಿದರಿಗೆ ಬಳಸಲು ಸುಲಬ ಮತ್ತು ಸುಂದರವಾಗಿ ಕಂಡುಬರುತ್ತದೆ. ಈ ವರ್ಣಗಳನ್ನು ಕಿನ್ನಾಳದ ಮೂರ್ತಿಗಳಲ್ಲಿ ಬಳಸುತ್ತಾರೆ.

ಮಣ್ಣಿನ ಮಾಧ್ಯಮದ ರಚನಾ ವಿಧಾನ

ಜೇಡಿ ಮಣ್ಣಿನ ತರಹನಾದ ಕೆಂಪು ಮಣ್ಣನ್ನು ಒಂದು ಕಡೆ ಗುಂಪೆ ಹಾಕಿ ನೀರು ಸಿಂಪಡಿಸಿ ಮೇಲೆ ಹತ್ತಿಯನ್ನು ಹಾಕಿ ಕುಟ್ಟಿ ಹದಮಾಡಿದಾಗ, ಮೂರ್ತಿಗಳನ್ನು ತಯಾರಿಸಲು ಮಣ್ಣು ಸಿದ್ದವಾಗುತ್ತದೆ. ಪ್ರಥಮ ಹಂತದಲ್ಲಿ ಬಿದಿರನ್ನು ಆಕೃತಿಗೆ ತಕ್ಕಂತೆ ತಂತಿಯಿಂದ ಕಟ್ಟಿಕೊಂಡು, ನಂತರ ಬತ್ತದ ಹುಲ್ಲನ್ನು ಕಟ್ಟುವುದರಿಂದ ಆಕೃತಿಯು ಹಗುರವಾಗಿರಲು ಸಹಕಾರಿಯಾಗುತ್ತದೆ. ಹೀಗೆ ತಯಾರಾದ ಆರ್ಮೆಚರ್‌ಗೆ ಹಂತ ಹಂತವಾಗಿ ಮಣ್ಣನ್ನು ಲೇಪಿಸಿ, ಚೀರ್ಣಗಳನ್ನು ಉಪಯೋಗಿಸಿ ಪೂರ್ಣ ಪ್ರಮಾಣದ ಮೂರ್ತಿಯನ್ನು ತಯಾರಿಸುತ್ತಾರೆ. ಹೀಗೆ ಮಣ್ಣಿನಿಂದ ಕುಟುಂಬದ ಸದಸ್ಯರೆಲ್ಲರೂ ಸೇರಿ ನಾಗಪಂಚಮಿ ಸಂದರ್ಭದಲ್ಲಿ ನಾಗಪ್ಪನ ಮೂರ್ತಿ, ಮಣ್ಣೆತ್ತಿನ ಅಮವಾಸ್ಯೆಯ ಸಂದರ್ಭದಲ್ಲಿ ಮಣ್ಣೆತ್ತು ಮತ್ತು ದೋಣಿ, ಗಣೇಶ ಚತುರ್ಥಿ ಸಂದರ್ಭದಲ್ಲಿ ಗಣೇಶ, ಗೌರಿ ಹಬ್ಬದ ಸಂದರ್ಭದಲ್ಲಿ ಗೌರಿ

ಮೂರ್ತಿಯನ್ನು ಹಾಗೂ ಜೋಕುಮಾರನ ಮೂರ್ತಿ ಹೀಗೆ ವಿವಿಧ ಸಂದರ್ಭಕ್ಕೆ ಅನುಗುಣವಾಗಿ ಮಣ್ಣಿನ ಮೂರ್ತಿಗಳನ್ನು ರಚಿಸುವುದನ್ನು ಕಾಣಬಹುದಾಗಿದೆ.

ಕಲಾಕೃತಿ ರಚನೆಗೆ ಬಳಸುವ ಪರಿಕರಗಳು : ಬಿದಿರಿನಕಡ್ಡಿ, ಕಟ್ಟಿಗೆಯ ಚೀರ್ಣಗಳು, ಟೇಪು, ಉರಕೋಲು ಇತ್ಯಾದಿ.

ಕಲಾಕೃತಿ ರಚನೆಗೆ ಬಳಸುವ ಕಚ್ಚಾ ಸಾಮಾಗ್ರಿಗಳು: ಕೆಂಪು ಮತ್ತು ಕಪ್ಪು ಮಣ್ಣು (ಜೇಡಿ ಮಣ್ಣು), ಹತ್ತಿ, ನಾರು, ಪುಡಿಬಣ್ಣ, ಬತ್ತದ ಹುಲ್ಲು, ಬಿದಿರು ಇತ್ಯಾದಿ.

ಭಿತ್ತಿ ವಿನ್ಯಾಸ ರಚನಾ ವಿಧಾನ

ಗುಡಿಗೋಪುರಗಳ ಮೇಲೆ ಭಿತ್ತಿ ವಿನ್ಯಾಸ ಮಾಡುವಾಗ ಚಿತ್ರಕಲಾವಿದರು ಪ್ರಥಮ ಹಂತದಲ್ಲಿ ಪ್ರೈಮರನ್ನು ಲೇಪಿಸಿ, ಅದರ ಮೇಲೆ ಬಿಳಿ ಬಣ್ಣವನ್ನು ಸಮತಟ್ಟಾಗಿ ಲೇಪಿಸಿ ಅದರ ಮೇಲೆ ವೈವಿಧ್ಯಮಯವಾದ ವಿನ್ಯಾಸಗಳನ್ನು ರಚಿಸುತ್ತಾರೆ.

ಕಲಾಕೃತಿ ರಚನೆಗೆ ಬಳಸುವ ಪರಿಕರಗಳು : ಕುಂಚಗಳು, ದಾರ, ಅಳತೆ ಪಟ್ಟಿ, ರಟ್ಟು ಅಥವಾ ಪ್ಲೈವುಡ್ ಇತ್ಯಾದಿ.

ಕಲಾಕೃತಿ ರಚನೆಗೆ ಬಳಸುವ ಕಚ್ಚಾ ಸಾಮಾಗ್ರಿಗಳು: ಪ್ರೈಮರ್, ತೈಲವರ್ಣ(ಏಷಿಯನ್ ಪೇಂಟ್ಸ) ಇತ್ಯಾದಿ.

ತಂತ್ರ: ಒಟ್ಟಾರೆ ಕಲಾವಿದ ಪರಶುರಾಮಪ್ಪನವರು ಮಣ್ಣಿನ ಮಾದ್ಯಮ, ಕಟ್ಟಿಗೆ ಮಾಧ್ಯಮ, ಭಿತ್ತಿಚಿತ್ರ ಮತ್ತು ಅಲಂಕಾರಿಕ ವಸ್ತುಗಳು ಹೀಗೆ ಹಲವಾರು ಮಾಧ್ಯಮಗಳಲ್ಲಿ ಕರಕುಶಲಗಳನ್ನು ರಚಿಸಿದ್ದಾರೆ. ಇವು ವಿವಿಧ ಮಾಧ್ಯಮಗಳಾಗಿರುವುದರಿಂದ, ಪ್ರತಿಯೊಂದಕ್ಕೆ ತಮ್ಮದೇ ಆದ ತಂತ್ರಗಾರಿಕೆಯನ್ನು ಬಳಸಿಕೊಂಡು ಕಲಾಕೃತಿಗಳನ್ನು ರಚಿಸಿರುವುದನ್ನು ಕಾಣುತ್ತೇವೆ.

ಶೈಲಿ : ಕಲಾವಿದ ಪರಶುರಾಮಪ್ಪನವರು ಚಿತ್ರಗಾರ ಕುಟುಂಬದರಲ್ಲಿ ಜನಸಿದರು. ಈ ಚಿತ್ರಗಾರ ವಂಶವು ಮೊದಲಿನಿಂದಲೂ ಜನಪದ ಕಲೆಯಲ್ಲಿ ಆಸಕ್ತಿಯುಳ್ಳವರಾಗಿದ್ದರು. ಅದರಂತೆ ಕಲಾವಿದ ಪರಶುರಾಮಪ್ಪನವರಿಗೆ ಅವರ ಮಾವನವರು ಚಿಕ್ಕ ವಯಸ್ಸಿನಲ್ಲೇ ಕಲಾಕೃತಿಗಳ ರಚನೆ ಹಾಗೂ ಮನೆಗಳಿಗೆ ವಿವಿಧ ಬಣ್ಣಗಳಿಂದ ಅಲಂಕಾರಗೊಳಿಸುವ ಕಲೆ, ಸ್ಥಳೀಯ ಮತ್ತು ಪರಸ್ಥಳಗಳಲ್ಲಿ ದೇವಸ್ಥಾನಗಳಿಗೆ ವರ್ಣ ಅಲಂಕಾರ ಮಾಡುವುದು ಹಾಗೂ ಗೋಪುರಗಳಲ್ಲಿ ದೇವರುಗಳ ಚಿತ್ರ, ಸುರಳಿಗಳಿಂದ ಅಲಂಕಾರ ಮಾಡುವ ಕಲೆಯನ್ನು ಸಂಪೂರ್ಣವಾಗಿ ಕಲಿಸಿದರು.

ಕಲಾವಿದ ಪರಶುರಾಮಪ್ಪ ಚಿತ್ರಗಾರ ಮುಂದೆ ಶಿಲ್ಪ, ಚಿತ್ರಗಳು, ಮರದಿಂದ ಕೆತ್ತಿದ ಕಲಾಕೃತಿಗಳ ಹಾಗೂ ಇನ್ನೂ ಅನೇಕ ರೀತಿಯ ಕಲಾಕೃತಿಗಳ ನಿರ್ಮಾಣ ಹಾಗೂ ಗೋಡೆಯ ಬಣ್ಣ ಅಲಂಕಾರಗೊಳಿಸುವ ಕಲೆ ಮತ್ತು ಸ್ಥಳೀಯ ಪರಸ್ಥಳಗಳಲ್ಲಿ ದೇವಸ್ಥಾನ ಗಳಿಗೆ ವರ್ಣವಿನ್ಯಾಸ ಮಾಡುವುದರಲ್ಲಿ ಪ್ರವೀಣರಾಗಿದ್ದಾರೆ. ಅದರಂತೆ ಅವರ ಕುಟುಂಬ ವರ್ಗದವರು ಕೂಡ ತೊಡಗಿಸಿಕೊಂಡಿರುವುದು ಕಾಣಬಹುದಾಗಿದೆ. ಹಬ್ಬ ಹರಿದಿನ ಆಚರಣೆಗಳಲ್ಲಿ ಮೊಹರಂ, ಹಬ್ಬದಲ್ಲಿ ಹರಕೆ ಹೊತ್ತ ಭಕ್ತರಿಗೆ ಮೈಮೇಲೆ ವಿವಿಧ ಬಣ್ಣಗಳಿಂದ ಹುಲಿಯ ಬರಹಗಳನ್ನು ಹಾಗೂ ಹುಲಿಯ ಗೆರೆಗಳನ್ನು ಬರೆಯುವುದರ ಹಾಗೂ ಗಣೇಶ ಚತುರ್ಥಿಯ ದಿನಗಳಲ್ಲಿ ಗಣೇಶನ ಮೂರ್ತಿಯನ್ನು ಮಾಡುತ್ತಾರೆ ಇದು ಇವರ ಕಲಾ ನೈಪುಣ್ಯತೆಯಾಗಿದೆ. ಹೀಗೆ ಇವರ ಶೈಲಿಯು ತಮ್ಮದೇ ಆದ ವೈಯಕ್ತಿಕವಾದ ಶೈಲಿಯಲ್ಲಿ ಕರಕುಶಲಕಲೆಗಳನ್ನು ರಚಿಸುತ್ತಿರುವುದನ್ನು ಕಂಡುಬರುತ್ತದೆ.

ಪ್ರಭಾವ-ಪ್ರೇರಣೆ : ಇವರ ಮಾವನವರು ಇವರಿಗೆ ಚಿಕ್ಕ ವಯಸ್ಸಿನಲ್ಲೇ ಕರಕುಶಲ ಕಲೆಯನ್ನು ಕಲಿಸಿದವರು, ಅದರಂತೆ ಮುಂದೆ ಅವರ ಮಾರ್ಗದರ್ಶನದಲ್ಲಿ ಹಬ್ಬ-ಹರಿದಿನ, ಆಚರಣೆಗಳ ಪ್ರಕಾರವಾಗಿ ಇವರ ಕಲಾವೃತ್ತಿ ಸಾಗುತ್ತಾ ಬಂದಿತು. ಮುಂದೆ ಪರಶುರಾಮಪ್ಪನವರು ಇದೇ ಕಾಯಕವಾಗಿ ಮುಂದುವರೆಸಿಕೊಂಡು ಬಂದರು. ಸುಮಾರು ವರ್ಷದಿಂದ ಬಹುಮುಖ ಪ್ರತಿಭೆಯುಳ್ಳ ರಾಜ್ಯದ ಶ್ರಮಜೀವಿ, ಫಲವನ್ನೇ ಬಯಸದ ಜೀವನ ನಡೆಸುತ್ತಿರುವ ಇವರು ಮುಂದಿನ ಯುವಪೀಳಿಗೆಗೆ ಸ್ಪೂರ್ತಿಯಾಗಿದ್ದಾರೆ. ಇವರೊಬ್ಬ ಕರಕುಶಲ ಕಲಾವಿದರಾಗಿರ ವುದರಿಂದ ಯಾವುದೇ ಕಲಾಕೃತಿ ರಚನೆಗೆ ವೈಯಕ್ತಿಕ ಪ್ರಭಾವ ಪ್ರೇರಣೆ ಎನ್ನುವುದುಕ್ಕಿಂತಲೂ ಬೇಡಿಕೆಗೆ ಅನುಗುಣವಾಗಿ ಕಲೆಯನ್ನು ಅಭಿವ್ಯಕ್ತಿಸಿದ್ದಾರೆ. ಆದರೆ ಒಂದು ಕಲಾಕೃತಿ ರಚನೆಯು ಮತ್ತೊಂದು ಕಲಾಕೃತಿ ರಚನೆಗೆ ತುಂಬಾ ಪ್ರಭಾವ ಬೀರಿ ಪ್ರೇರಣೆ ನೀಡಿರುವುದು ಕಂಡು ಬರುತ್ತದೆ. ಹೀಗಾಗಿ ಒಂದು ಕಲಾಕೃತಿಯು ಮತ್ತೊಂದು ಕಲಾಕೃತಿಗೆ ವಿಭಿನ್ನವಾಗಿದೆ.

....



ಕಲಾವಿದರು ಮರದ ಕಟ್ಟಿಗೆಯಲ್ಲಿ ಮೂರ್ತಿ ರಚನೆ ಮಾಡುತ್ತಿರುವುದು



ಪರಶುರಾಮಪ್ಪರವರನ್ನು ಮೂರ್ತಿಯನ್ನು ಅಂತಿಮ ರೂಪನೀಡುತ್ತಿರುವುದು



ಹುಲಿ ಮೂರ್ತಿಯನ್ನು ತಯಾರಿಸುತ್ತಿರುವ ಕಲಾವಿದ ಪರಶುರಾಮಪ್ಪನವರು



ಗೊಂಬೆಗಳಿಗೆ ಬಣ್ಣ ಹಚ್ಚುತ್ತಿರುವ ಕಲಾವಿದ ಪರಶುರಾಮಪ್ಪನವರು



ಮಣ್ಣಿನ ಗಣೇಶನ ಶಿಲ್ಪಗಳು



ಮಣ್ಣಿನ ಬಸ್ತುಗಳ ಶಿಲ್ಪಗಳು



ಸಿದ್ಧತೆಯಲ್ಲಿರುವ ನಂದಿಯ ಮೂರ್ತಿಗಳು



ಪೂರ್ಣಗೊಂಡ ನಂದಿಯ ಮೂರ್ತಿಗಳು



ಮಣ್ಣಿನಲ್ಲಿ ಎತ್ತುಗಳ ಮುಖವಾಡ ತಯಾರಿಸುತ್ತಿರುವುದು



ನಾಟಕದಲ್ಲಿ ಕಲಾವಿದರಿಗೆ ಅಲಂಕಾರ ಮಡುತ್ತಿರುವ ದೃಶ್ಯ



ಪರಶುರಾಮಪ್ಪನವರು ಪಲ್ಲಕ್ಕಿಗೆ ಬಣ್ಣ ಹಚ್ಚುತ್ತಿರುವುದು .



ಮರದ ಕಟ್ಟಿಗೆಯಲ್ಲಿ ಸಿದ್ಧಗೊಂಡ ಗೊಂಬೆಯ ಮೂರ್ತಿಗಳು



ಕಟ್ಟಿಗೆಯಲ್ಲಿ ತಯಾರಾದ ಮುಖವಾಡಗಳು



ಅಲಂಕಾರದಿಂದ ಸಿದ್ಧಗೊಂಡ ಹೂವಿನ ಪಲ್ಲಕ್ಕಿ



ಶ್ರೀ ರಾಘವೇಂದ್ರ ಸ್ವಾಮಿಯ ಮೂರ್ತಿಗೆ ಹೂವಿನ ಅಲಂಕಾರ ಮಾಡುತ್ತಿರುವ ಕಲಾವಿದರು.



ಕಲಾವಿದರು ಮೂರ್ತಿಯ ಅಲಂಕಾರದಲ್ಲಿ ನಿರತರಾಗಿರುವುದು.



ಪರಶುರಾಮಪ್ಪನವರು ದೇವಿ ಮೂರ್ತಿಗೆ ಅಂತಿಮ ಸ್ಪರ್ಶನೀಡುತ್ತಿರುವುದು



ಸಿದ್ಧಗೊಂಡ ಮೂರ್ತಿಗಳೊಂದಿಗೆ ಪರಶುರಾಮಪ್ಪ ಮತ್ತು ಸಹ ಕಲಾವಿದರು



ಅಲಂಕಾರವಾದ ಛತ್ರಿ



ಮೊಹರಂ ಪೆಟ್ಟಿಗೆ



ಮೂರ್ತಿಗಳಿಂದ ಸಿದ್ಧಗೊಂಡ ರಥ



ಶ್ರೀ ಬಸವಣ್ಣನ ರಥದ ಬಾಗಿಲವಾಡಗಳು







ರಥಗಳಲ್ಲಿ ಬಳಸುವ ವಸ್ತುಗಳು



ಬಸವಣ್ಣ ರಥದ ಡುಬುರಿ ಪಟಗಳು



ಬಸವಣ್ಣ ರಥದ ಡುಬುರಿ ಪಟಗಳು



ಗಾಜಿನ ಮೇಲೆ ರಚಿಸಿರುವ ಕಾಮಧೇನು ಕಲಾಕೃತಿ



ಅಲಂಕಾರಿಕ ಹೂವಿನ ಮಂಟಪ



ಕಾಮದೇನು ಕಲ್ಪವೃಕ್ಷ



ವೇದಿಕೆಯ ವಿನ್ಯಾಸ

ಅಧ್ಯಾಯ : ಐದು

ಕಲಾವಿದ ಪರಶುರಾಮಪ್ಪ ಅವರ ಸಾಧನೆ

ಅಧ್ಯಾಯ : ಐದು

ಕಲಾವಿದ ಪರಶುರಾಮಪ್ಪ ಅವರ ಸಾಧನೆ

ಲಲಿತಕಲೆಗಳು ಪುರಾತನ ಕಾಲದಿಂದಲೂ ಮಾನವನ ಸಂಸ್ಕೃತಿಯ ಒಂದು ಭಾಗವಾಗಿವೆ. ಕಲೆಗಳು ತನ್ನದೇ ಆದ ಒಂದು ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ. ಇಂತಹ ಕಲೆಗಳು ದೇಶ ವಿದೇಶಗಳಲ್ಲಿ ಪ್ರಚಲಿತದಲ್ಲಿವೆ. ಅಲ್ಲದೇ ಲಲಿತ ಕಲೆಗಳಲ್ಲಿ ಚಿತ್ರ, ಶಿಲ್ಪ, ವಾಸ್ತು ಶಿಲ್ಪಗಳಿಗೆ ಉನ್ನತ ಮಟ್ಟದ ಸ್ಥಾನವಿದೆ. ಕರ್ನಾಟಕದ ಜಿಲ್ಲೆಗಳಲೊಂದಾದ ಬಳ್ಳಾರಿ ಜಿಲ್ಲೆಯ ಕಲೆ, ಸಾಹಿತ್ಯ, ವಾಸ್ತು ಶಿಲ್ಪ ಶಿಲ್ಪಕಲೆ, ನಾಟಕ, ಐತಿಹಾಸಿಕ ಕಟ್ಟಡಗಳು, ದೇವಾಲಯಗಳು ಇನ್ನೂ ಅನೇಕ ಲಲಿತ ಕಲೆಗಳಿಗೆ ತವರೂರಾಗಿದೆ.

ಇಂತಹ ಕಲೆಗಳನ್ನು ಇಂದು ನಮ್ಮ ಸುತ್ತಲೂ ಇದ್ದರೂ ಕಡೆಗಣಿಸುತ್ತಿದ್ದೇವೆ. ಕೆಲವೊಂದು ಹಳ್ಳಿಯಲ್ಲಿ ಈಗಲೂ ನಮಗೆ ಜನಪದ, ಕರಕುಶಲ ಕಲೆಗಳು ನೋಡಲು ಸಿಗುತ್ತವೆ. ಅದನ್ನು ಮುಂದುವರೆಸಲು ಆಗುತ್ತಿಲ್ಲ, ಕಾರಣ ಈಗಿನ ಮುಂದುವರೆದ ಅತ್ಯಾಧುನಿಕ ತಂತ್ರಜ್ಞಾನ ಯುಗದಲ್ಲಿ ಪ್ರಾದೇಶಿಕ ಕಲೆಗಳ ಬಗ್ಗೆ ಯಾರೂ ಹೆಚ್ಚಿನ ಗಮನಹರಿಸುತ್ತಿಲ್ಲ. ಇಂತಹ ಕಾಲದಲ್ಲಿ ಶಿಲ್ಪಕಲೆಗಳಿಗೆ ಹೆಸರುವಾಸಿಯಾಗಿರುವ ಹಂಪಿ ಪ್ರದೇಶದ ಸಮೀಪವಿರುವ ಕಂಪ್ಲಿಯ ಪಟ್ಟಣದಲ್ಲಿ ಕಿನ್ನಾಳ ಶೈಲಿಯ ಕರಕುಶಲಕಲೆ ಕಂಡುಬರುತ್ತದೆ. ಪ್ರಾಚೀನ ಕಲೆ, ಸಂಪ್ರದಾಯ, ಆಚರಣೆಗಳು, ನಂಬಿಕೆ ಕಾಲ ಉರುಳಿದಂತೆ ಮೊಟಕುಗೊಳ್ಳುತ್ತಾ ಮುಂದೊಂದು ದಿನ ಹೇಳಲು ಹೆಸರಿಲ್ಲದಂತೆ ಮಾಯವಾಗಿ ಹೋದರೆ ಅಚ್ಚರಿ ಪಡಬೇಕಾಗಿಲ್ಲ. ಆಧುನಿಕತೆಗೆ ಮಾರುಹೋಗಿ ನಮ್ಮ ಸಂಸ್ಕೃತಿ ಪರಂಪರೆಯನ್ನು ಉಳಿಸಿಕೊಳ್ಳುವದು ತುಂಬಾ ಕಷ್ಟವಾಗಿದೆ. ಕಂಪ್ಲಿ ಪಟ್ಟಣದಲ್ಲಿ ಇಂತಹ ಕರಕುಶಲ ಕಲೆಯನ್ನು ಮಾಡುತ್ತ ತಮ್ಮ ಜೀವನದ ಬಂಡಿಯನ್ನು ಸಾಗಿಸುತ್ತಿರುವ ಬಣಗಾರ ಜನಾಂಗವೊಂದಿದೆ. ಬಹಳ ಹಿಂದಿನ ತಮ್ಮ ಮನೆತನದಲ್ಲಿ ಕರಕುಶಲ ಕಲೆಗಳನ್ನು ರೂಢಿಸಿಕೊಂಡು ಬಂದಿರುವ ಕಲಾವಿದರು ಕಲೆಯನ್ನೇ ದೈವವೆಂದು ಬಗೆದು ಉಳಿಸಿಕೊಂಡು ಬಂದಿದ್ದಾರೆ.

"ಎದುರಾಯಪ್ಪ, ಮಲ್ಲಪ್ಪ, ಪಕ್ಕಿರಪ್ಪ ಈ ಮೂರು ತಲೆಮಾರಿನ ನಂತರ ರಾಮಣ್ಣ ಚಿತ್ರಗಾರ ಕಂಪ್ಲಿ ನಗರದಲ್ಲಿ ಜಾನಪದ ಕರಕುಶಲ ಕಲಾವಿದರಾಗಿ ಹೆಸರಾಗಿದ್ದರು. ಸುಮಾರು ೫೦ ವರ್ಷಗಳಿಂದ ಶ್ರೀ ಪರಶುರಾಮಪ್ಪ ಚಿತ್ರಗಾರ ಎಂಬುವವರು ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಸುಮಿತ್ರಮ್ಮ ಮತ್ತು ಮಕ್ಕಳು ಹಾಗೂ ಅವರ ಅಳಿಯಂದಿರು ಸಹ ಜಾನಪದ ಕರಕುಶಲ ಕಲಾವಿದರಾಗಿ ಕಲಾಜೀವನ ನಡೆಸುತ್ತಾ ಸುತ್ತಮುತ್ತಲಿನ ಭಾಗದಲ್ಲಿ ತುಂಬಾ ಹೆಸರುವಾಸಿಯಾಗಿದ್ದಾರೆ."[೧]

"ಇವರು ತಮ್ಮ ಕಲಾಜೀವನದಲ್ಲಿ ವೈವಿಧ್ಯಮಯವಾದ ಲಲಿತ ಕಲೆಗಳನ್ನು ಕರಗತ ಮಾಡಿಕೊಂಡಿದ್ದಾರೆ. ಇಂತಹ ಕಲೆಯನ್ನು ಉಳಿಸಿ ಬೆಳಸಿಕೊಂಡು ಹೋಗುವ ಹಾದಿಯಲ್ಲಿದ್ದು, ಕಾಲಮಾನಕ್ಕೆ ತಕ್ಕಂತೆ ಸಂಪ್ರದಾಯಗಳಿಗೆ ಹೊಂದಿಕೊಂಡು ಕಲಾಜಿವನವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವುಗಳಲ್ಲಿ ಕೆಲವೊಂದು ಸಂಪ್ರದಾಯಗಳನ್ನು ಖರ್ಚುವೆಚ್ಚಗಳ ಲೆಕ್ಕಾಚಾರದಲ್ಲಿ ಕೈಬಿಡುವುದು ಅನಿವಾರ್ಯವಾಗಿದೆ. ಇದಕ್ಕೆ ಅನುಗುಣವಾಗಿ ಕಲಾವಿದನು ಕಲೆಯನ್ನು ನಂಬಿಕೊಂಡು ಜೀವನ ಸಾಗಿಸುವುದು ಕಷ್ಟವಾಗಿ ತಮ್ಮ ಜೀವನಕ್ಕೆ ಬೇರೆ ದಾರಿಯನ್ನು ಕಂಡು ಕೊಳ್ಳುವುದು ಕೂಡ ಅನಿವಾರ್ಯವಾಗಿದೆ. ಅಲ್ಲದೆ ಇಂದು ಆಧುನಿಕ ತಂತ್ರಜಾನಿಕ ಕಾಲದಲ್ಲಿ ಕಲಾವಿದನ ಕೈಬರಹವನ್ನು ಮೊಟಕುಗೊಳಿಸಿದೆ. ಆದರೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಂಪ್ಲಿ ನಗರದಲ್ಲಿ ಕರಕುಶಲ ಕಲೆಯನ್ನು ಮುಂದುವರೆಸಿಕೊಂಡು ಬಂದ ಮನೆತನ ಇವರದಾಗಿತ್ತು. ಅದರಂತೆ ಅಪಾರವಾದ ಪ್ರೇಮವನ್ನು ಹೊಂದಿರುವ ಕುಟುಂಬವೊಂದರ ಕಲಾವಿದರಾದ ಪರಶುರಾಮಪ್ಪ ಚಿತ್ರಗಾರ ಅವರ ಕರಕುಶಲ ಕಲೆಯು ಕಂಪ್ಲಿಯ ಪ್ರದೇಶದ ಸುತ್ತಲ ಅಪಾರವಾದ ಪ್ರಸಿದ್ಧಿ ಪಡೆದಿದೆ."[೨]

"ಕಲಾವಿದ ಪರಶುರಾಮಪ್ಪ ಚಿತ್ರಗಾರ ರವರು ೨೩-೦೨-೯೪೪ ರಲ್ಲಿ ಕಂಪ್ಲಿ ಪಟ್ಟಣದಲ್ಲಿ ಜನಿಸಿದರು ಇವರ ತಂದೆ ಮೈಲಾರಪ್ಪ ತಾಯಿ ಕಾಳಮ್ಮ. ಕಲಾವಿದ ಪರಶುರಾಮಪ್ಪ ಚಿತ್ರಗಾರ ಅವರ ವಿಧ್ಯಾಭ್ಯಾಸವು ಕೂಡ ೪ನೇ ತರಗತಿಯವರೆಗೆ ಪ್ರಾಥಮಿಕ ಹಂತವಾಗಿ ಶಿಕ್ಷಣ ಪಡೆದಿರುವವರು."[೩]

ಇವರು ಚಿಕ್ಕ ವಯಸ್ಸಿನಲ್ಲಿಯೆ ಕಲೆಯ ಬಗ್ಗೆ ಆಸಕ್ತಿ ಉಳ್ಳವರು ಆಗಿದ್ದವರು ಕಲಾಪಿದರ ಮಾವನವರಾದ ಶ್ರೀ ರಾಮಣ್ಣ ಚಿತ್ರಗಾರ ಹಿರಿಯ ಕಲಾವಿದರ ಬಳಿ ಕಲಾ

೧. ರಾಮಚಂದ್ರಪ್ಪ ಚಿತ್ರಗಾರ, ಜನಪದ ಕಲಾವಿದ ಪರಶುರಾಮಪ್ಪ ಚಿತ್ರಗಾರ(ಅ.ಪ್ರ), ಪು.೨

೨. ಅದೇ, ಪು.೩

೩. ಅದೇ, ಪು.೩

ಕೆಲಸವನ್ನು ಹಾಗೂ ಈ ಕರಕುಶಲ ಕಲೆಯನ್ನು ಕಲಿತರು ನಿರಂತರ ಅಭ್ಯಾಸದಿಂದ ಕಟ್ಟಿಗೆ ಮಣ್ಣುಗಳಿಂದ ಮೂರ್ತಿ ಮಾಡುವಕಲೆ ಕುಂಚದ ಪ್ರಾವಿಣ್ಯತೆ ಬತ್ತಾನೆ (ಮುಖವಾಡ) ಮಾಡುವ ಕಲೆ ಪುಷ್ಪ ರೇಷ್ಮೆಗಳಿಂದ ಅಲಂಕಾರ ಮಾಡುವ ಕಲೆ ಗೋಪುರ ಶಿಖರ ನಿರ್ಮಾಣಕ್ಕೆ ಕಲಾ ಸಲಹೆ ಮೇಕಪ್ ಮಾಡುವ ಕಲೆಯನ್ನು ಕಲಿಯಲಿಕ್ಕೆ ಸಾಧ್ಯವಾಯಿತು ಎಂದು ಕಲಾವಿದರು ಹೇಳುತ್ತಾರೆ. ಅದರಂತೆ ಮುಂದೆ ಕಟ್ಟಿಗೆ ಕೆತ್ತನೆ ಮಣ್ಣಿನಿಂದ ಸುಂದರ ವಾದ ಮೂರ್ತಿಗಳನ್ನು ಮಾಡುವದು ಪ್ರಾಣಿಗಳ ಮಾನವನ ಮುಖವಾಡಗಳನ್ನು ತೋರಿಸುವ ಪ್ರಾವಿಣ್ಯತೆ ಕುಂಚದಿಂದ ಚಿತ್ತಾರಗಳನ್ನು ಬಿಡಿಸುವುದು ದೇವರ ಛತ್ರಿ–ಛಾಮರಗಳಿಗೆ ರೇಷ್ಮೆಯಿಂದ ಅಲಂಕಾರಗೊಳಿಸುವ ಬಯಲಾಟ–ನಾಟಕಗಳಿಗೆ ಪಾತ್ರದಾರಿಗಳಿಗೆ ಮೇಕಪ್ ಮಾಡುವ ಕಲೆ ಹೀಗೆ ಸಾಗಿತ್ತು ಮುಂದೆ ಜಾನಪದ ಸಂಪ್ರದಾಯ ಚಿತ್ರಗಳು ಭಾವೈಕ್ಯತೆಯ ಸಾಮಾಜಿಕ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಇವರು ತಮ್ಮ ಕಲೆಯ ಪ್ರದರ್ಶನ ಶುಭ ಸಮಾರಂಭದಲ್ಲಿ ಉತ್ಸವ ಜಾತ್ರೆ ಹಬ್ಬಗಳಲ್ಲಿ ಕಲೆಯ ಪ್ರದರ್ಶನಗಳು ಅನೇಕ ಸಂಧರ್ಭದಲ್ಲಿ ನಡೆದಿವೆ.

ಕಲಾ ಪ್ರದರ್ಶನಗಳು

೧. ೨೦೦೦ದಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಹಂಪಿ ವಿದ್ಯಾರಣ್ಯ ಹೊಸಪೇಟೆ ತಾ॥ ಬಳ್ಳಾರಿ ಜಿ॥ ಇವರು ಏರ್ಪಡಿಸಿದ್ದ, ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ದೆಯಲ್ಲಿ ಇವರು ರಚಿಸಿದ ಚಿತ್ರ ಪ್ರದರ್ಶನಗೊಂಡಿತು.

೨. ೨೦೧೧ರಲ್ಲಿ ಕೊಪ್ಪಳ ಜಿಲ್ಲಾ ಗಂಗಾವತಿಯಲ್ಲಿ ೭೮ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರ ಚಿತ್ರಕಲೆಗಳು, ವೀಶೆಷವಾಗಿ ಹುಲಿ, ಆನೆಯ ಮುಖವಾಡಗಳು ಪ್ರದರ್ಶನಗೊಂಡವು.

೩. ೧೬–೧೦–೨೦೧೨ರಿಂದ ೧೩–೦೧–೨೦೧೩ರಲ್ಲಿ ವಿಶ್ವವಿಖ್ಯಾತ ಮೈಸೂರು ದಸರಾ ವಸ್ತು ಪ್ರದರ್ಶನ ಲಲಿತಕಲೆ ಮತ್ತು ಕರಕುಶಲ ವಿಭಾಗದಲ್ಲಿ ಪರಶುರಾಮಪ್ಪ ಚಿತ್ರಗಾರ ಇವರ ಕಟ್ಟಿಗೆ ಮೂರ್ತಿ ಆಯ್ಕೆಯಾಗಿ ಪ್ರದರ್ಶನಗೊಂಡಿತು.

೪. ೧೫–೧೬–೨೦೧೪ರಲ್ಲಿ ೧೭ನೇ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಕಂಪ್ಲಿಯಲ್ಲಿ ಪರಶುರಾಮಪ್ಪ ಚಿತ್ರಗಾರ ಇವರು ರಚಿಸಿದ ಚಿತ್ರಗಳು ಹುಲಿ, ಆನೆಯ ಮುಖವಾಡಗಳು ದೇವಿಯ ಮೂರ್ತಿಗಳು ಪ್ರದರ್ಶನಗೊಂಡಿವೆ.

೫. ೧೮–೧೯–೨೦೧೪ ರಲ್ಲಿ ಡಿಜಿಟಲ್ ಹಂಪಿ ವರ್ಕ್‌ಶಾಪ್ ಮತ್ತು ಎಕ್ಷಿಬಿಷನ್ ಇಂಡಿಯಾ ಹೆಬಿಟ್ಯೆಟ್ ಸೆಂಟರ, ಹೊಸ ದೆಹಲಿಯಲ್ಲಿ ಪರಶುರಾಮಪ್ಪ ಚಿತ್ರಗಾರ ಇವರ ಕರಕುಶಲ ಕಲೆಗಳು ಪ್ರದರ್ಶನಗೊಂಡಿವೆ.

ಪರಶುರಾಮಪ್ಪ ನವರ ಕಲಾಕೇಂದ್ರಕ್ಕೆ ಭೇಟಿ ನೀಡಿರುವ ಪ್ರಮುಖ ಸಂಶೋಧಕರು ಮತ್ತು ಗಣ್ಯಮಾನ್ಯರು.

೧. ೨೦೦೦ರಲ್ಲಿ ಶ್ರೀಮತಿ ಡಾ. ಎಸ್.ಎನ್. ಸಾವಿತ್ರಿಯವರು "ಕಂಪ್ಲಿ ಜಾನಪದ ಒಂದು ಅಧ್ಯಯನ" ಎಂಬ ಶೀರ್ಷಿಕೆಯಲ್ಲಿ ಕಂಪ್ಲಿಯ ಜಾನಪದ ಕಲೆಗಾರರಾದ ಪರಶುರಾಮಪ್ಪ ಚಿತ್ರಗಾರ ಇವರನ್ನು ಗುರುತಿಸಿ ಹೆಮ್ಮೆಯಿಂದ ಉಲ್ಲೇಖಿಸಿದ್ದಾರೆ.

೨. ೨೦೧೧ರಲ್ಲಿ ಶ್ರೀ ಡಾ. ಚಲುವರಾಜ, ಸಹ ಪ್ರಾಧ್ಯಾಪಕರು ಬುಡಕಟ್ಟು ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ಪರಶುರಾಮಪ್ಪನವರ ಕಲೆಯ ಅಧ್ಯಯನ ಕುರಿತು ಭೇಟಿ ನೀಡಿದ್ದರು.

೩. ಜೂನ್ ೧೭ರಂದು ೨೦೧೮ ರಲ್ಲಿ ಅಮೆರಿಕಾದ ಕ್ಯಾಲಿಫೋರ್ನಿಯಾದ ಯಾಲೆ ವಿವಿಯ ಇತಿಹಾಸ ಮತ್ತು ಸಂಸ್ಕೃತಿ ವಿಭಾಗದ ಉಪನ್ಯಾಸಕರು, ಪ್ರೊ ಡಾ ಕರೆನ್ ಫೆಸ್, ಅನಿಮೇಶನ್ ಮತ್ತು ಡಿಸೈನ ವಿಭಾಗದ ಉಪನ್ಯಾಸಕಿ ಮೆಘನಾ ಮತ್ತು ವಿಧ್ಯಾರ್ಥಿಗಳು ಬೇಟಿ ನೀಡಿ, ಇವರ ಜೊತೆಯಲ್ಲಿ ಬೆಂಗಳೂರು ಜನಸ್ತೋಮ ಸಂಘಟನೆಯ ಟಿ.ಬಿ.ದಿನೇಶ, ಹಂಪಿ ಕನ್ನಡ ವಿವಿಯ ಪ್ರೊ ಚಲುವರಾಜು, ಉಪನ್ಯಾಸಕಿ ನಾಗಪುಷ್ಪ, ಲತಾ ವಿಜಯನಗರ ಜನಪದ ಚಿತ್ರಕಲಾವಿದ ಪರಶುರಾಮಪ್ಪ ಚಿತ್ರಗಾರ ಇವರ ನಿವಾಸಕ್ಕೆ ಕ್ಷೇತ್ರ ಅಧ್ಯಯನ ನಿಮಿತ್ತ ಆಗಮಿಸಿದ್ದರು.

೪. ದಿ. ೦೮.೦೭.೨೦೧೮ರಂದು ಪ್ರೊಫೆಸರ್ ಕರಣ್‌ಸಿಂಗ್, ಯು ತೊರ‍್ಯಾಂಟೊ – ಕೆನಡಾ ಮತ್ತು ಗೀತಿಕಾ ಶರ್ಮಾ, ಚೀಫ್ ಟೆಕ್ನಿಕಲ್ ಆಫಿಸರ್, ವಿಜಾರಾ ಕಂಪನಿ, ದೆಹಲಿ. ಇವರು ಕಲಾವಿದರ ಕಲಾಕೇಂದ್ರವನ್ನು ವೀಕ್ಷಿಸಿ, ಚರ್ಚಿಸಿದರು.

೫. "ದಯಾನಂದ ಸಾಗರ ಕಾಲೇಜ್ ಆಫ್ ಆರ್ಕಿಟೆಕ್ಚರ್, ಬೆಂಗಳೂರು". ಪ್ರೊಫೆಸರ್ ಅಪರ್ಣ ಶಾಸ್ತ್ರಿ, ಸಂಧ್ಯಾರಾವ್, ಲಕ್ಷ್ಮೀ ಕ್ರಿಷ್ಣಸ್ವಾಮಿ ಮತ್ತು ವಿದ್ಯಾರ್ಥಿಗಳು ಈ ಸಾಂಪ್ರದಾಯಿಕ ಕಲೆಯ ಅಧ್ಯಯನ ಕುರಿತು ಚಿತ್ರಕಲಾವಿದ ಪರಶುರಾಮಪ್ಪ ಚಿತ್ರಗಾರ ಇವರ ನಿವಾಸಕ್ಕೆ ದಿ|| ೨೬-೦೭-೨೦೧೮ ರಂದು ಮಧ್ಯಾಹ್ನ ೩ ಗಂಟೆಗೆ ಭೇಟಿ ನೀಡಿದರು.

ದೂರದರ್ಶನದಲ್ಲಿ ಸಂದರ್ಶನ

೧. ದಿನಾಂಕ ೧೦-೦೯-೨೦೧೨ ರಂದು ಬೆಳಗ್ಗೆ ೭ ಗಂಟೆಗೆ ಟಿ.ವಿ. ೯ ದೂರದರ್ಶನ ಮಾಧ್ಯಮದಲ್ಲಿ ಕಲೆಯ ಸಾಧನೆ ಕುರಿತು ಕಲಾವಿದರ ಸಂದರ್ಶನವು ಸುಪ್ರಭಾತ ಸುಪರ್‌ಫಾಸ್ಟ ಕಾರ್ಯಕ್ರಮದಲ್ಲಿ ಪ್ರಸಾರ ಮಾಡಲಾಯಿತು.

೨. "ಚಂದನ" ದೂರದರ್ಶನದಲ್ಲಿ ದಿನಾಂಕ ೧೧-೦೨-೨೦೧೩ ರಂದು ಬೆಳಗ್ಗೆ ೭ ಗಂಟೆಗೆ ಬೆಳಗು ಕಾರ್ಯಕ್ರಮದಲ್ಲಿ ಕಲಾ ಸಾಧನೆ ಕುರಿತು ನೇರ ಸಂದರ್ಶನ ಮತ್ತು ಪ್ರಸಾರವನ್ನು ಸಹ ಮಾಡಲಾಯಿತು.

೩. "ಹೊಸಪೇಟೆ ಆಕಾಶವಾಣಿ"ಯಲ್ಲಿ ದಿನಾಂಕ ೨೫-೦೫-೨೦೧೭ ರಂದು ಬೆಳಗ್ಗೆ ೧೧ ಗಂಟೆಗೆ ಕಂಪ್ಲಿಯ ಜನಪದ ಚಿತ್ರಕಲಾವಿದ ಹಾಗೂ ಗೊಂಬೆ ತಯಾರಿಕೆಯ ಚಿತ್ರಗಾರ ಪರಶುರಾಮಪ್ಪ ದಂಪತಿಯನ್ನು ಸಂದರ್ಶನ ನಡೆಸಲಾಯಿತು ಮತ್ತು ಪ್ರಸಾರವನ್ನು ಸಹ ಮಾಡಲಾಯಿತು.

ಸಹ ಕಲಾವಿದರ ಹೆಸರು

೧. ಪತ್ನಿ ಶ್ರೀಮತಿ ಸುಮಿತ್ರಮ್ಮ ೬೫ ವರ್ಷ ೨. ತಮ್ಮನಾದ ಶ್ರೀ ರಾಮಕೃಷ್ಣಪ್ಪ ಚಿತ್ರಗಾರ ೬೮ ವರ್ಷ ೩. ತಂಗಿಯಾದ ಶ್ರೀಮತಿ ರಾಮಕ್ಕ ೬೧ವರ್ಷ ೪. ಮಗ ಶ್ರೀ ರಮೇಶ ಚಿತ್ರಗಾರ ೪೬ ವರ್ಷ ೫. ಮಗ ಶ್ರೀ ರಾಮಚಂದ್ರ ಚಿತ್ರಗಾರ ೩೯ ವರ್ಷ ೬. ಶ್ರೀ ರವಿಕುಮಾರ ಚಿತ್ರಗಾರ ೩೯ ವರ್ಷ ೭. ಮಗ ಶ್ರೀ ರಾಜಾರಾಮ್ ಚಿತ್ರಗಾರ ೩೯ ವರ್ಷ ೮. ತಮ್ಮನ ಮಗನಾದ ಶ್ರೀ ರಾಘವೇಂದ್ರ ಚಿತ್ರಗಾರ ೪೨ ವರ್ಷ ೯. ತಂಗಿಯ ಮಗನಾದ ಶ್ರೀ ಶಿವಕುಮಾರ ಚಿತ್ರಗಾರ ೪೨ ವರ್ಷ

ಕಲಾ ಸಂಗ್ರಹ ನೆಲೆಗಳು: ಹಳ್ಳಿ ಹಳ್ಳಿಗಳಲ್ಲಿಯೂ, ನಗರ ಪಟ್ಟಣದಲ್ಲಿಯೂ ನಮ್ಮ ರಾಜ್ಯದ ಬಳ್ಳಾರಿ ಜಿಲ್ಲೆ, ರಾಯಚೂರು ಜಿಲ್ಲೆ, ಕೊಪ್ಪಳ ಜಿಲ್ಲೆ, ಗದಗ ಜಿಲ್ಲೆಗಳಲ್ಲದೆಯೂ ಆಂಧ್ರದಲ್ಲಿಯೂ ಇವರ ಜಾನಪದ ಕಲೆಗಳನ್ನು ಕಾಣಬಹುದು.

ದಿನಪತ್ರಿಕೆಗಳಲ್ಲಿ ಪ್ರಕಟಿತ ಲೇಖನಗಳು

೧. **"ವಿಜಯ ಕರ್ನಾಟಕ" ೨೭-೧೨-೨೦೦೧:** ಪೇಟೆಬಸವೇಶ್ವರ ಜೋಡು ರಥೋತ್ಸವ ಎಂಬ ವರದಿಯಲ್ಲಿ ಸ್ಥಳೀಯ ಕಲಾವಿದ ಚಿತ್ರಗಾರ ಪರಶುರಾಮಪ್ಪ. ಪತ್ರಕರ್ತರು : ಕರಿ ವಿರುಪಾಕ್ಷಿ ಕಂಪ್ಲಿ.

೨. **"ಪ್ರಜಾವಾಣಿ" ೧೭-೧೦-೨೦೦೪:** ಕಂಪ್ಲಿ : ದಸರಾ ಉತ್ಸವ ಆರಂಭ ಎಂಬ ವರದಿಯಲ್ಲಿ ೩೫ ವರ್ಷಗಳಿಂದ ಸ್ಥಳೀಯ ಹೆಸರಾಂತ ಕಲಾವಿದ ಚಿತ್ರಗಾರ ಪರಶುರಾಮಪ್ಪ. ಪತ್ರಕರ್ತರು: ಪಂಡಿತಾರಾಧ್ಯ. ಕಂಪ್ಲಿ

೩. **"ಉಷಾಕಿರಣ" ೨೩-೦೮-೨೦೦೬:** ಎಲ್ಲ ದೇವರನ್ನು ಸೃಷ್ಟಿಸುವ ಪರಶುರಾಮಪ್ಪ ಬಹುಮುಖ ಪ್ರತಿಭೆ. ಪತ್ರಕರ್ತ : ಬಿ. ಮಂಜುನಾಥ

೪. **"ಪ್ರಜಾವಾಣಿ" ೨೪-೦೯-೨೦೦೬:** ನವರಾತ್ರಿ ಉತ್ಸವ ಆರಂಭ ವರದಿಯಲ್ಲಿ ಇವರ ಬಗ್ಗೆ ಪ್ರಕಟ ಪತ್ರಕರ್ತರು : ಪಂಡಿತಾರಾಧ್ಯ. ಕಂಪ್ಲಿ

೫. **"ಸಂಯುಕ್ತ ಕರ್ನಾಟಕ" ೨೮-೦೯-೨೦೦೬:** ವೈಭವದ ನವರಾತ್ರಿ ಉತ್ಸವಕ್ಕೆ ಚಾಲನೆ ಎಂಬ ವರದಿಯಲ್ಲಿ ವೈವಿಧ್ಯಮಯ ದೇವತೆಗಳ ಮೂರ್ತಿಗಳನ್ನು ಕಂಪ್ಲಿಯ ಪ್ರಸಿದ್ಧ ಕಲಾವಿದ ಪರಶುರಾಮಪ್ಪ ಚಿತ್ರಗಾರ ಕುಟುಂಬದವರು ಅಲಂಕಾರ ಮಾಡುತ್ತಿರುವುದು.

೬. **"ಪ್ರಜಾವಾಣಿ" ೦೬-೧೨-೨೦೦೬:** "ಪುಣ್ಯದ ಫಲ ಸುಖಕ್ಕೆ ನಾಂದಿ" ವರದಿಯಲ್ಲಿ ಪರಶುರಾಮಪ್ಪನವರಿಗೆ ಶ್ರೀಗಳಿಂದ ಸನ್ಮಾನ. ಪತ್ರಕರ್ತರು: ಪಂಡಿತಾರಾಧ್ಯ. ಕಂಪ್ಲಿ

೭. **"ಕನ್ನಡ ಪ್ರಭ" ೦೬-೧೨-೨೦೦೬:** ಕಂಪ್ಲಿ-೩ ದಿನಗಳಲ್ಲಿ ನಡೆದ ಸಿದ್ಧತೆ, ಉತ್ಸವಕ್ಕೆ ಗಣೇಶ ಮೂರ್ತಿ ನಿರ್ಮಾಣ ವರದಿಯಲ್ಲಿ ಸಿದ್ಧ ಹಸ್ತರೆನಿಸಿಕೊಂಡಿರುವ ಕಲಾವಿದ ಪರಶರಾಮಪ್ಪ ಚಿತ್ರಗಾರ.

೮. **"ಸಂಜೆ ವಾಣಿ" ೦೨-೦೯-೨೦೦೮:** ವೈವಿಧ್ಯಮಯ ಗಣೇಶ ವಿಗ್ರಹಗಳಿಗೆ ಅಂತಿಮ ರೂಪ ನೀಡುತ್ತಿರುವ ಕಲಾವಿದ ಪರಶುರಾಮಪ್ಪ ಚಿತ್ರಗಾರ.

೯. **"ವಿಜಯ ಕರ್ನಾಟಕ" ೨೩-೦೯-೨೦೦೮:** ಲವ ಲವಿಕೆ ಅಂಕಣದಲ್ಲಿ ಜಾನಪದ ಸಂವೇಧನೆಯ ಕಲಾವಿದ ಪತ್ರಕರ್ತರು: ಡಬ್ಲೂ ಬಸವರಾಜ ಕಂಪ್ಲಿ.

೧೦. **"ಸಂಯುಕ್ತ ಕರ್ನಾಟಕ" ೦೮-೧೦-೨೦೧೧:** ಚಿತ್ರಗಾರ ಪರಶುರಾಮಪ್ಪಗೆ ಕಲಾಕೇಸರಿ ಪ್ರಶಸ್ತಿ ಪ್ರಧಾನ ಪತ್ರಕರ್ತರು: ಬಿ ಮಂಜುನಾಥ.

೧೧. **"ಪ್ರಜಾವಾಣಿ ೧೦-೧೦-೨೦೧೧:** ಚಿತ್ರಗಾರ ಪರಶುರಾಮಪ್ಪ ಈಗ "ಕಲಾಕೇಸರಿ" ಪತ್ರಕರ್ತರು: ಪಂಡಿತಾರಾಧ್ಯ ಕಂಪ್ಲಿ

೧೨. **"ಸಾಕ್ಷಿ"(ತೆಲಗು ಪತ್ರಿಕೆ) ೦೭-೧೦-೨೦೧೧:** ಅದ್ಭುತ "ಚಿತ್ರಗಾರ" ಪರಶುರಾಮಪ್ಪ ಕುಂಚ ನುಂಚಿ ಜಾಲುವಾರಿನ ಎನ್ನೋ ಚಿತ್ರಾಲು. ಪತ್ರಕರ್ತರು : ಜಾನಿ ಕಂಪ್ಲಿ

೧೩. **"ಲೋಕದರ್ಶನ" ೨೬-೦೨-೨೦೧೨:** "ಕಟ್ಟಿಗೆ ಕುಸುರಿನ ಕಾಯಕಯೋಗಿ ಚಿತ್ರಗಾರ ಪರಶುರಾಮಪ್ಪ" ಪತ್ರಕರ್ತರು: ಕಿನ್ನೊರೇಶ್ವರ ಕಂಪ್ಲಿ.

೧೪. **"ಸಯುಂಕ್ತ ಕರ್ನಾಟಕ" ೨೮–೦೨–೨೦೧೨:** ಪರಶುರಾಮಪ್ಪಗೆ "ಚಿತ್ರಕಲಾ ಸೇವಾಭಾರ್ಗವ" ಪ್ರಶಸ್ತಿ ಪ್ರಧಾನ. ಪತ್ರಕರ್ತರು : ಬಿ. ಮಂಜುನಾಥ ಕಂಪ್ಲಿ.

೧೫. **ಉದಯವಾಣಿ** ೦೧–೦೪–೨೦೧೨: ಹಳ್ಳಿಹಳ್ಳಿಯಲ್ಲೂ ಜನಪದ ಕಲಾ ಸೇವೆ ಪರಶುರಾಮಪ್ಪನ ಕಲಾಸೇವೆ ಗುರುತಿಸಿದ ಸಂಘ–ಸಂಸ್ಥೆಗಳು "ನಾಡಿನುದ್ದಕ್ಕು ಕಲೆ ಪಸರಿಸಿದ ಕಲಾವಿದ" ಸರ್ಕಾರಕ್ಕೆ ಕಾಣಲಿಲ್ಲವೆ?

೧೬. **"ವಿಜಯವಾಣಿ" ೧೬–೦೨–೨೦೧೪:** ಚಿತ್ರಕಲಾ ಮಳಿಗೆ ಉದ್ಘಾಟನೆ: ಕಂಪ್ಲಿಯಲ್ಲಿ ನಡೆದ ಕನ್ನಡ ಸಾಹಿತ್ಯ ಜಿಲ್ಲಾ ಸಮ್ಮೇಳನ ದಲ್ಲಿ ಮಾಜಿ ಸಂಸದ ಕೆ.ಸಿ.ಕೊಂಡಯ್ಯ ಚಿತ್ರಕಲಾ ಪ್ರದರ್ಶನ ಮಳಿಗೆ ಉದ್ಘಾಟಿಸಿದರು.

೧೭. **"ಲೋಕದರ್ಶನ" ೧೯–೦೫–೨೦೧೪:** ಬೆಂಗಳೂರಿನಲ್ಲಿ ಶ್ರೀ ನಿಮಿಷಾಂಬಾ ದೇವಿ ಜಯಂತೋತ್ಸವ ಪ್ರತಿಮೆಯನ್ನು ಪ್ರದರ್ಶಿಸಿದ್ದಕ್ಕಾಗಿ ಚಿತ್ರಗಾರ ಪರಶುರಾಮಪ್ಪನವರಿಗೆ ಸನ್ಮಾನ. ಪತ್ರಕರ್ತರು: ಯಮನಪ್ಪ ಕಂಪ್ಲಿ

೧೮. **"ಪ್ರಜಾವಾಣಿ": ೨೭–೦೯–೨೦೧೪:** ವಿಜಯದಶಮಿ ಗೊಂಬೆ ಅಲಂಕಾರ ಆರಂಭ ಪತ್ರಕರ್ತರು: ಪಂಡಿತಾರಾಧ್ಯ ಕಂಪ್ಲಿ

೧೯. **"ಉದಯವಾಣಿ" ೧೮–೧೧–೨೦೧೪:** ದೆಹಲಿ ಚಿತ್ರಕಲಾ ಪ್ರದರ್ಶನಕ್ಕೆ ಆಯ್ಕೆ: ಹಂಪಿ ಕುರಿತು ರಾಷ್ಟ್ರೀಯ ಚಿತ್ರಕಲಾ ಪ್ರದರ್ಶನ ಮತ್ತು ಕಾರ್ಯಗಾರಕ್ಕೆ ಚಿತ್ರಗಾರ ಪರಶುರಾಮಪ್ಪ ಆಯ್ಕೆಯಾಗಿದ್ದಾರೆ. ಪತ್ರಕರ್ತರು: ಎಸ್.ಎಮ್.ವಿರೂಪಾಕ್ಷಯ್ಯ. ಕಂಪ್ಲಿ

೨೦. **"ಲೋಕದರ್ಶನ" ೨೦–೧೨–೨೦೧೫:** ಶ್ರೀ ಚಿತ್ರಗಾರ ಪರಶುರಾಮಪ್ಪ ಇವರಿಗೆ "ಪೇಟೆ ಬಸವಶ್ರೀ" ಪ್ರಶಸ್ತಿ ಪ್ರಧಾನ ಕಂಪ್ಲಿ ಪೇಟೆ ಬಸವೇಶ್ವರ ಕಾರ್ಯದರ್ಶಿ ಮಂಡಳಿಯವರು ಚಿತ್ರಗಾರ ಪರಶುರಾಮಪ್ಪ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು.

೨೧. **"ಈನಾಡು ಕರ್ನಾಟಕ"(ತೆಲಗು ಪತ್ರಿಕೆ) ೨೩–೦೬–೨೦೧೬:** ವಿವಿಧ ರಂಗಲ್ಲೊ ಸೇವೆಂದಿನಚಿನವಾರಿಕಿ ಸನ್ಮಾನಂ ಚಿತ್ರಕಳಾರುಡು ಪರಶುರಾಮಪ್ಪ ದಂಪತುಲನು ಸನ್ಮಾನಿಂಚಾರು.

೨೨. **"ಸಂಯುಕ್ತ ಕರ್ನಾಟಕ" ೧೯–೦೨–೨೦೧೬:** "ಅನರ್ಘ್ಯ ರತ್ನ ಪ್ರಶಸ್ತಿ ಪ್ರಧಾನ" ಶ್ರೀ ಗುರು ದೊಡ್ಡ ಬಸವೇಶ್ವರ ಜಾತ್ರಾ ಮಹೋತ್ಸವ ಶ್ರೀ ನಂದಿಪುರ ಕ್ಷೇತ್ರದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

೨೩. **"ಸಂಯುಕ್ತ ಕರ್ನಾಟಕ" ೨೫–೦೫–೨೦೧೭:** ಚಿತ್ರಗಾರ ಪರಶುರಾಮಪ್ಪ ದಂಪತಿ ಸಂದರ್ಶನ ಹೊಸಪೇಟೆಯ ಆಕಾಶವಾಣಿ ತಂಡ ಕಂಪ್ಲಿಯ ವಿಜಯನಗರ ಜನಪದ

ಚಿತ್ರಕಲಾವಿದ ಹಾಗೂ ಗೊಂಬೆ ತಯಾರಕ ಚಿತ್ರಗಾರ ಪರಶುರಾಮಪ್ಪ ದಂಪತಿಯನ್ನು ಸಂದರ್ಶನ ನಡೆಸಲಾಯಿತು.

೨೪. **"ಪ್ರಜಾವಾಣಿ" ೧೯-೦೬-೨೦೧೮:** "ಸಂಸ್ಕೃತಿ ಅಧ್ಯಯನ : ಕ್ಯಾಲಿಪೋರ್ನಿಯ ಯಾಲೆ ವಿ.ವಿ ತಂಡ ಭೇಟಿ" ಕಂಪ್ಲಿ ಜನಪದ ಹಿರಿಯ ಚಿತ್ರ ಕಲಾವಿದ ಪರಶುರಾಮಪ್ಪ ಚಿತ್ರಾಗಾರ ಮನೆಗೆ ಕ್ಯಾಲಿಪೋರ್ನಿಯ ಯಾಲೆ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಸಂಸ್ಕೃತಿ ವಿಭಾಗದ ಉಪನ್ಯಾಸಕರು ವಿದ್ಯಾರ್ಥಿಗಳು ಭಾನುವಾರ ಭೇಟಿ ನೀಡಿದ್ದರು.

೨೫. **"ಸಂಯುಕ್ತ ಕರ್ನಾಟಕ" ೧೯-೦೬-೨೦೧೮:** "ಚಿತ್ರಗಾರನ ಮನೆಗೆ ಯಾಲೆ ವಿವಿ ವಿಧ್ಯಾರ್ಥಿಗಳು ಭೇಟ : ಪ್ರೊ. ಡಾ. ಕರೆನ್ ಫೆಸ್" ಸಮುದಾಯಗಳ ಕಲಾತ್ಮಕ ಸಂಬಂಧದ ಅಧ್ಯಯನ ಅಗತ್ಯ.

೨೬. **"ವಿಜಯ ಕರ್ನಾಟಕ" ೧೯-೦೬-೨೦೧೮: "ಕಲಾವಿದನ ಕಲೆಗೆ ಮೆಚ್ಚುಗೆ"**

೨೭. **"ಆಂಧ್ರಜ್ಯೋತಿ" ೧೯-೦೬-೨೦೧೮: "ಕಳಾರಂಗಂಪೈ ಅಧ್ಯಾಯನಿಕಿ ವಿದೇಶಿ ವಿದ್ಯಾರ್ಥುಲು"**

೨೮. **"ವಿಶ್ವವಾಣಿ": ೨೦-೦೬-೨೦೧೮: "ಭಾರತೀಯ ಕಲೆ ಸಂಸ್ಕೃತಿ ವಿಶಿಷ್ಟತೆಯಿಂದ ಕೂಡಿದೆ"**

೨೯. **"ಈನಾಡು ಕರ್ನಾಟಕ"(ತೆಲುಗು ಪತ್ರಿಕೆ): "ಭಾರತೀಯ ಶಿಲ್ಪಕಳ ಅದ್ಭುತಂ"**

೩೦. **"ಉದಯವಾಣಿ": ೨೦-೦೬-೨೦೧೮ (ಕಂಪ್ಲಿಗೆ ಅಧ್ಯಯನಕ್ಕಾಗಿ ಭೇಟಿ): "ಭಾರತೀಯ ಸಂಸ್ಕೃತಿಗೆ ಯಾಲೆ ವಿವಿ ತಂಡ ಫಿದಾ"**

ಪ್ರಶಂಸನೀಯ ಪತ್ರ ನೀಡಿ ಗೌರವಿಸಿದ ಸಂಘ ಸಂಸ್ಥೆಗಳು

೧. ಪುರಸಭೆ ಕಾರ್ಯಾಲಯ ಕಂಪ್ಲಿ-ಹೊಸಪೇಟೆ ತಾ॥ ಸ್ಥಳೀಯ ಕಲಾವಿದ ಎಂದು ದೃಢೀಕರಣ ಪತ್ರ ನೀಡಿದೆ. ೨೦-೦೮-೨೦೦೫

೨. ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಘಟಕ ಕಂಪ್ಲಿ "ಬಹುಮುಖ ಪ್ರತಿಭೆಯ ಕಲಾವಿದ" ಎಂದು ಅಭಿನಂದಿಸಿದ್ದಾರೆ.

೩. ಕನ್ನಡ ಹಿತರಕ್ಷಕ ಸಂಘ ಕಂಪ್ಲಿ ಹೊಸಪೇಟೆ ತಾ ॥ ಬಳ್ಳಾರಿ ಜಿ ॥ ನಮ್ಮೂರಿನ ಸ್ಥಳಿಯ ಕಲಾವಿದರನ್ನು ರಾಜ್ಯ ಸರ್ಕಾರ ಗುರುತಿಸುವಂತಾಗಲಿ ಎಂದು ಅಭಿನಂದನಾ ಪತ್ರ.

೪. ಶ್ರೀ ಆರ್ಯ ವೇಶ್ಯ ಸಂಘ ಕಂಪ್ಲಿ ಹೊಸಪೇಟೆ ತಾ॥ ಕಲಾ ನೈಪುಣ್ಯತೆಯ ಕಲಾವಿದ ಪರಶುರಾಮಪ್ಪ ಚಿತ್ರಗಾರ ನಮ್ಮೂರಿಗೆ ದೊರೆತಿರುವುದು ಭಾಗ್ಯ.

೫. ದೇವಾಂಗ ಸಮಾಜದ ಕಂಪ್ಲಿ ಹೊಸಪೇಟೆ ತಾ॥ ನಮ್ಮ ಜಿಲ್ಲೆಯ ಹೆಸರಾಂತ ಬಹುಮುಖಿ ಕಲಾಪ್ರತಿಭೆಯ ಕಲಾವಿದ

೬. ಶ್ರೀ ತುರುಮಂದಿ ಬಸವೇಶ್ವರ ದೇವಸ್ಥಾನದ ವ್ಯವಸ್ಥಾಪದ ಸಮಿತಿ ರಾಮಸಾಗರ ಹೊಸಪೇಟೆ ತಾ॥ ಇವರ ಕಲೆಯನ್ನು ಗುರುತಿಸಿ ಅಭಿನಂದಿಸಿದ್ದಾರೆ.

೭. ಗ್ರಾಮ ಪಂಚಾಯತಿ ಕಾರ್ಯಾಲಯ ರಾಮಸಾಗರ ಹೊಸಪೇಟೆ ತಾ॥ ಇವರು ನಡೆಸಿಕೊಂಡು ಬರುತ್ತಿರುವ ಕಲಾ ರೂಪಗಳನ್ನು ನೋಡಿ ಉತ್ತಮ ಕಲಾವಿದರೆಂದು ಶುಭಹಾರೈಸಿದ್ದಾರೆ.

೮. ಶ್ರೀ ಪೇಟೆ ಬಸವೇಶ್ವರ ದೇವಸ್ಥಾನ ಕಂಪ್ಲಿ ಹೊಸಪೇಟೆ ತಾ॥ ಕಲಾ ನೈಪುಣ್ಯತೆಯ ಕಲಾವಿದ ಪರಶುರಾಮಪ್ಪ ಚಿತ್ರಗಾರ ನಮ್ಮೂರಿಗೆ ದೊರೆತಿರುವುದು ಭಾಗ್ಯ

ಕರ್ನಾಟಕ ಸರ್ಕಾರದಿಂದ ಮಾಸಾಶನ ಮಂಜೂರಿ

ಕಲಾ ನಿದರ್ಶನಗಳನ್ನು ಪರೀಶಿಲಿಸಿ ನಮ್ಮ ಘನ ಸರ್ಕಾರವು ಸೆಪ್ಟಂಬರ್ ೨೦೦೭ ರಲ್ಲಿ ಪ್ರತಿ ತಿಂಗಳಿಗೆ ೫೦೦ ರೂ. ೧೦೦೦ ರೂ. ಮತ್ತು ೧೫೦೦ ರೂ ಗಳ ಮಾಸಾಶನ ಮಂಜೂರಿಯಾಗಿದೆ.

ಹ್ಯಾಂಡಿ ಕ್ರಾಫ್ಟ್ ಸಂಸ್ಥೆ ಮಂಗಳೂರು

"೨೦೧೦ರಲ್ಲಿ ಗವರ್ನಮೆಂಟ್ ಆಫ್ ಇಂಡಿಯಾ ಮಿನಿಸ್ಟರ್ ಆಫ್ ಟೆಕ್ಸ್ಟೈಲ್ಸ್. ಹ್ಯಾಂಡಿಕ್ರ್ಯಾಪ್ಟ ಮಾರ್ಕೆಟಿಂಗ್ ಮತ್ತು ಸರ್ವಿಸ್ ಎಕ್ಸ್‌ಟೆನ್ಸ್ಯಿನ್ ಸೆಂಟರ್ ಮಂಗಳೂರು ೫೭೫೦೦೧ ಇವರು ಭೇಟಿ ನೀಡಿ ಕರಕುಶಲ ಕ್ಯಾಂಪ್ ಸಂಡೂರುನಲ್ಲಿ ಭಾಗವಹಿಸಲು ಸೂಚಿಸಲಾಯಿತು."[೪]

ಕಲೆಗೆ ಸಂದ ಪ್ರಶಸ್ತಿ ಪುರಸ್ಕಾರಗಳು

೧. **"ಗುರು ಸೇವಾ ಧುರೀಣ" ಪ್ರಶಸ್ತಿ** ಶ್ರೀ ಗುರು ಕರಿಸಿದ್ಧೇಶ್ವರ ಸಂಸ್ಥಾನ ಮಠ – ಬುಕ್ಕಸಾಗರ ಹೊಸಪೇಟೆ ತಾ॥ ಬಳ್ಳಾರಿ ಜಿ॥ ಸ್ವಾಮಿಗಳ ೨೫ ನೇ ವರ್ಷದ ಪಟ್ಟಾಭೀಷೆಕದ ಸಂದರ್ಭದಲ್ಲಿ ಶ್ರೀಗಳಿಂದ ಸನ್ಮಾನ ಪ್ರಶಸ್ತಿ ೧೨-೦೨-೨೦೦೬.

೨. **"ಕಲಾ ಕೇಸರಿ" ಬಿರುದು** ಶ್ರೀದೇವಿ ಮಹಾತ್ಮೆ ಪುರಾಣ ಸಮಿತಿ, ಸಾಂಗತ್ರಯ ಪಾಠಶಾಲೆ, ಕಂಪ್ಲಿ ಇವರು ೦೬-೧೦-೨೦೧೧ ರಂದು ಬಿರುದ ಸನ್ಮಾನದೊಂದಿಗೆ ಪುರಸ್ಕರಿಸಲಾಯಿತು.

೪. ರಾಮಚಂದ್ರಪ್ಪ ಚಿತ್ರಗಾರ, ಜನಪದ ಕಲಾವಿದ ಪರಶುರಾಮಪ್ಪ ಚಿತ್ರಗಾರ(ಅ.ಪ್ರ.ಕಿ.), ಪು.೧೦

೩. **"ಉತ್ತಮ ಕಲಾವಿದ" ಸನ್ಮಾನ** ಕನ್ನಡ ಹಿತರಕ್ಷಕ ಸಂಘ ಕಂಪ್ಲಿ ಇವರ ಆಶ್ರಯದಲ್ಲಿ ರಾಜ್ಯೋತ್ಸವದ ಉತ್ಸವಕ್ಕೆ ಮಣ್ಣಿನಿಂದ ಶ್ರೀ ಭುವನೇಶ್ವರಿ ದೇವಿ ಮೂರ್ತಿ ಮಾಡಿಕೊಟ್ಟದ್ದಕ್ಕೆ ಅಂದಿನ ಸಮಾರಂಭದ ಮುಖ್ಯ ಅತಥಿಗಳಾದ ಶ್ರೀ ಆರ್.ಸಿ. ಹಿರೇಮಠ ಇವರಿಂದ ಸನ್ಮಾನ.

೪. **"ಉತ್ತಮ ಸಾಂಪ್ರದಾಯಿಕ ಚಿತ್ರಕಲಾವಿದರು"** ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯ ಹೊಸಪೇಟೆ ತಾ॥ ಇವರು ಏರ್ಪಡಿಸಿದ್ದ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ದೆ ೨೦೦೦ ದಲ್ಲಿ ಸಾಂಪ್ರದಾಯಿಕ ಕಲೆಯ ವಿಭಾಗದಲ್ಲಿ ಚಿತ್ರವು ಆಯ್ಕೆಯಾಗಿ ಕುಲಪತಿಗಳಿಂದ ನೀಡಲಾದ ಅರ್ಹತಾ ಪತ್ರ ಪಡೆಯಲಾಗಿದೆ.

೫. **ಶ್ರೀ ಸತ್ಯನಾರಾಯಣ ದೇವಸ್ಥಾನ ಕಂಪ್ಲಿ** ದೇವಸ್ಥಾನದ ರಜತ ಮಹೋತ್ಸವ ಸಂದರ್ಭ ದಲ್ಲಿ ಮಂತ್ರಾಲಯದ ಗುರುಗಳಿಂದ ಆರ್ಶಿವಾದದೊಂದಿಗೆ ಸನ್ಮಾನ.

೬. **ಶ್ರೀ ಆಂಜನೇಯ ದೇವಸ್ಥಾನ ಕಂಪ್ಲಿ** ಗಣಪತಿ ರಜತ ಮಹೋತ್ಸವ ಸಂದರ್ಭದಲ್ಲಿ ಮಂತ್ರಾಲಯದ ಗುರುಗಳಿಂದ ಆಶೀರ್ವಾದದೊಂದಿಗೆ ಸನ್ಮಾನ.

೭. **ಶ್ರೀ ವೆಂಕಟೇಶ್ವರ ಸೇವಾಧರ್ಮನಿಧಿ(ರಿ)** ಮತ್ತು ದೇವಸ್ಥಾನ ಕಂಪ್ಲಿ ದೇವಸ್ಥಾನದ ಸಂದರ್ಭದಲ್ಲಿ ಶ್ರೀ ಜಗದ್ಗುರು ಶೃಂಗೇರಿ ಮಹಾಸಂಸ್ಥಾನದ ಪೀಠಾಸ್ಥರಾದ ಶ್ರೀಶ್ರೀಶ್ರೀ ಸಚ್ಚಿದಾನಂದ ವಾಲುಕೇಶ್ವರ ಭಾರತೀ ಸ್ವಾಮಿಗಳಿಂದ ಆಶೀರ್ವಾದ ಪತ್ರದೊಂದಿಗೆ ಸನ್ಮಾನಿಸಲಾಯಿತು.

೮. **ಶ್ರೀ ಬನ್ನಿ ಮಹಾಕಾಳಿ ದೇವಸ್ಥಾನ** ಕಂಪ್ಲಿ ತೇರಿಗೆ ವರ್ಣಾಲಂಕಾರ ಹಾಗೂ ದೇವರ ಚಿತ್ರಗಳನ್ನು ಬರೆದು ಶೃಂಗರಿಸಿದ್ದಕ್ಕೆ ಧರ್ಮಕರ್ತರಾದ ಶ್ರೀ ಸುಬ್ಬಯ್ಯ ಶ್ರೇಷ್ಠಿ ಇವರಿಂದ ಸನ್ಮಾನಿತರಾದರು.

೯. **ದೇವಾಂಗ ಸಮಾಜ ಕಂಪ್ಲಿ** ಶ್ರೀ ಹಂಪಿ ಹೇಮಕೂಟದ ಸ್ವಾಮೀಜಿ ಶ್ರೀಶ್ರೀಶ್ರೀ ದಯಾನಂದಪುರಿ ಸ್ವಾಮಿಗಳ ಅಡ್ಡ ಪಲ್ಲಕ್ಕಿ ಉತ್ಸವಕ್ಕೆ ಪುಷ್ಪಗಳಿಂದ ಅಲಂಕಾರ ಮಾಡಿದಕ್ಕಾಗಿ ಶ್ರೀ ಗಳಿಂದ ಸನ್ಮಾನ.

೧೦. **ಕಂಪ್ಲಿಯ ಶ್ರೀ ಸಾಂಗತ್ರಯ ಸಂಸ್ಕೃತ ಪಾಠಶಾಲೆಯ** ಜ್ಞಾನ ಗಂಗೋತ್ರಿ ಕಲ್ಯಾಣ ಮಂಟಪದ ವರ್ಣಾಲಂಕಾರ ಗೋಪುರ ನಿರ್ಮಾಣದ ಸಲಹೆ ನೀಡಿದ್ದು ಸಮಾರಂಭದಲ್ಲಿ ಶ್ರೀಗುರು ಕರಿಸಿದ್ಧೇಶ್ವರ ಸ್ವಾಮಿಗಳ ಸನ್ಮಾನಿತರಾಗಿದ್ದಾರೆ.

೧೧.೨೦೦೪ ರಲ್ಲಿ ಕಲ್ಮಠ-ಕಂಪ್ಲಿಯ ಪೂಜ್ಯ ಶ್ರೀ ಗುರುಸಿದ್ದ ಮರಿದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವದಲ್ಲಿ ಶ್ರೀಗಳ ತುಲಾಭಾರದ ಸಿದ್ದತೆ ಮತ್ತು ಪುಷ್ಪಗಳಿಂದ ಅಲಂಕಾರಗೊಳಿಸಿದ ಸಂದರ್ಭದಲ್ಲಿ ಶ್ರೀಗಳಿಂದ ಸನ್ಮಾನ.

೧೨. **"ಹಿರಿಯ ಕಲಾವಿದ"**ರೆಂದು ಗೌರವ ಸನ್ಮಾನ. ಬೆಳ್ಳಕ್ಕಿ ಬಳಗ ಕಲಾವೃಂದ(ರಿ) ಹೊಸಪೇಟೆ ಬಳ್ಳಾರಿ ಜಿ॥ ಆಧ್ಯಾತ್ಮಿಕ ಮತ್ತು ಧಾರ್ಮಿಕ ಸಮ್ಮೇಳನ-೨೦೧೧ ಹೇರೂರು ಗಂಗಾವತಿ ತಾ॥ ದಲ್ಲಿ ಸನ್ಮಾನ.

೧೩. ೨೦೧೧ **ಮದರ್ ತೆರೆಸಾ ಗ್ರಾಮೀಣಾಭಿವೃದ್ಧಿ ಸಂಸ್ಥೆ** ಹೇರೂರು ಮತ್ತು ಶ್ರೀ ಗವಿಸಿದ್ದೇಶ್ವರ ಪ್ರಸನ್ನ ಕೇಬಲ್ ನೆಟ್ ಗಂಗಾವತಿ ಇವರ ಸಂಯುಕ್ತಾಶ್ರಯದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಸಮ್ಮಿಲನ ಕಾರ್ಯಕ್ರಮ ಗಂಗಾವತಿಯಲ್ಲಿ ಸನ್ಮಾನ.

೧೪. ೨೦೧೧ **ಸೋಮವಂಶ ಆರ್ಯಕ್ಷತ್ರಿಯ ಸಮಾಜ** (ರಿ) ರಾಯಚೂರ ಸಾಂಸ್ಕೃತಿಕ ಸೌರಭ-೨೦೧೧ರಲ್ಲಿ ಹಿರಿಯ ಕಲಾವಿದರೆಂದು ಸನ್ಮಾನ.

೧೫. ಪ್ರಶಸ್ತಿ ಪತ್ರ: ಡಿಸೆಂಬರ್ ೯, ೧೦ ಮತ್ತು ೧೧, ೨೦೧೧ **೭೮ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ** ಗಂಗಾವತಿ ಕೊಪ್ಪಳ ಜಿಲ್ಲೆಯಲ್ಲಿ ಚಿತ್ರಕಲಾ ಪ್ರದರ್ಶನ.

೧೬. **ಅಭಿನಂದನಾ ಪತ್ರ**-ಸನ್ಮಾನ: ೨೦೧೧ ಬಳ್ಳಾರಿ ಜಿಲ್ಲಾ ೧೫ ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಾನಪದ ಚಿತ್ರಕಲಾ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆಯನ್ನು ಪರಿಗಣಿಸಿ ಅಭಿಯಾನ ಪೂರ್ವಕವಾಗಿ ಸನ್ಮಾನ.

೧೭. **ಚಿತ್ರಕಲಾ ಸೇವಾ ಭಾರ್ಗವ ಪ್ರಶಸ್ತಿ**-೨೦೧೨ ಸಂಗೀತ ಭಾರತಿ-ಅತ್ಯುತ್ತಮ ಸಂಘಟನಾ ಪ್ರಶಸ್ತಿ ಪುರಸ್ಕೃತ ಸಾಮಾಜಿಕ ಸೇವಾ ಸಂಸ್ಥೆ ಹೊಸಪೇಟೆ ಚಿತ್ತವಾಡಿಗಿ ಇವರು ೧೨೬ ನೇ ಮಾಸಿಕ ಚಿಂತನ ಸಮಾರಂಭದಲ್ಲಿ ಬಿರುದು ಸನ್ಮಾನದೊಂದಿಗೆ ಗೌರವಿಸಲಾಯಿತು. ೨೬-೦೨-೨೦೧೨.

೧೮. "ಸಾಧನೆಯ ಕಲಾವಿದರೆಂದು ಗೌರವ ಸನ್ಮಾನ: ೦೧-೦೪-೨೦೧೨ ಡಾ॥ ಶ್ರೀ ಮ.ನಿ.ಪ್ರ ಶಿವಕುಮಾರ ಮಹಾಸ್ವಾಮಿಗಳು ೧೦೫ ನೇ ಹುಟ್ಟುಹಬ್ಬ ಸಂಭ್ರಮ ಹಾಗೂ ಗುರು ವಂದನಾ ಕಾರ್ಯಕ್ರಮ ಶ್ರೀ ಸಾಂಗತ್ರಯ ಸಂಸ್ಕೃತ ಪಾಠಶಾಲೆ ಕಂಪ್ಲಿ ಸನ್ಮಾನಿಸಿ ಗೌರವಿಸಲಾಯಿತು.

೧೯. **"ನಿಮಿಷಾಂಬ ಶ್ರೀ" ಪ್ರಶಸ್ತಿ** : ೦೧-೦೫-೨೦೧೨ ಸೋಮವಂಶ ಆರ್ಯಕ್ಷತ್ರಿಯ (ಚಿತ್ರಗಾರ) ಸಮಾಜ ಕಂಪ್ಲಿ ಹೊಸಪೇಟೆ ತಾ॥ ಬಳ್ಳಾರಿ ಜಿ॥ ಶ್ರೀ ನಿಮಿಷಾಂಭಾದೇವಿಯ

೨೬ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಕಲಾಸೇವೆಯನ್ನು ಗುರುತಿಸಿ ಬಿರುದು ಸನ್ಮಾನದೊಂದಿಗೆ ಗೌರವಿಸಲಾಯಿತು.

೨೦. **ಪ್ರಶಸ್ತಿ ಪತ್ರ** : ೧೬-೧೦-೨೦೧೨ ರಿಂದ ೧೩-೧೧-೨೦೧೩ ವಿಶ್ವವಿಖ್ಯಾತ ಮೈಸೂರು ದಸರಾ ವಸ್ತು ಪ್ರದರ್ಶನ ಲಲಿತಕಲೆ ಮತ್ತು ಕರಕುಶಲಕಲೆ ವಿಭಾಗದಲ್ಲಿ ಪರಶುರಾಮಪ್ಪ ಚಿತ್ರಗಾರ ಭಾಗವಹಿಸಿದ ಕಲಾವಿದರು.

೨೧. **ಸಾಧನೆ ಪರಿಗಣಿಸಿ ಸನ್ಮಾನ** : ೦೯-೦೫-೨೦೧೪ ಸೋಮವಂಶ ಆರ್ಯಕ್ಷತ್ರಿಯ ಸೇವಾ ಸಂಘ ಬೆಂಗಳೂರು ಶ್ರೀ ನಿಮಿಶಾಂಬಾ ದೇವಿಯ ಪ್ರತಿಮೆಯನ್ನು ಪ್ರದರ್ಶಿಸಿದ್ದಕ್ಕಾಗಿ ಸನ್ಮಾನಿಸಿ ಗೌರವಿಸಲಾಗಿದೆ.

೨೨. ೦೧-೧೧-೨೦೧೫ **ಕರ್ನಾಟಕ ರಕ್ಷಣಾ ವೇದಿಕೆ ಕಂಪ್ಲಿ**(ಕನ್ನಡ ಪರ ಸಂಘಟನೆಗಳ ಒಕ್ಕೂಟ ಶಿವರಾಮೇಗೌಡ ಬಣ) ೬೦ ಕನ್ನಡ ರಾಜ್ಯೋತ್ಸವದಲ್ಲಿ ಚಿತ್ರಕಲಾವಿದರೆಂದು ಗುರುತಿಸಿ ಸನ್ಮಾನಿಸಲಾಯಿತು.

೨೩. **ಕಂಪ್ಲಿ ಪೇಟೆ ಬಸವಶ್ರೀ ಪ್ರಶಸ್ತಿ** : ೨೦-೧೨-೨೦೧೫ ಶ್ರೀ ಪೇಟೆ ಬಸವೇಶ್ವರ ದೇವಸ್ಥಾನ ಆಡಳಿತ ಮಂಡಳಿ ಕಂಪ್ಲಿಯವರ ಒಮ್ಮತದಿಂದ ಪರಶುರಾಮಪ್ಪ ಚಿತ್ರಗಾರ ಇವರಿಗೆ ಸಕಲ ಗೌರವಗಳೊಂದಿಗೆ ಸತ್ಕರಿಸಿ ಸನ್ಮಾನಿಸಿ "ಕಂಪ್ಲಿ ಪೇಟೆ ಬಸವಶ್ರೀ" ಪ್ರಶಸ್ತಿಯನ್ನು ನೀಡಿ ಅಭಿನಂದಿಸಲಾಯಿತು.

೨೪. **"ಅನರ್ಘ ರತ್ನ" ಪ್ರಶಸ್ತಿ ಪ್ರಧಾನ** : ೧೭-೦೨-೨೦೧೫ ಶ್ರೀ ಗುರು ದೊಡ್ಡ ಬಸವೇಶ್ವರ ಫೌಂಡೇಶನ್(ರಿ) ಪುಣ್ಯಕ್ಷೇತ್ರ ನಂದಿಮರ ಹಗರಿಬೊಮ್ಮನಹಳ್ಳಿ ತಾ॥ ಬಳ್ಳಾರಿ ಜಿ॥ ಇವರು ಶ್ರೀ ಪರಶುರಾಮಪ್ಪ ಚಿತ್ರಗಾರ ಇವರಿಗೆ ಸಕಲ ಗೌರವಗಳೊಂದಿಗೆ ಸತ್ಕರಿಸಿ ಸನ್ಮಾನಿಸಿ "ಅನರ್ಘ್ಯ ರತ್ನ" ಪ್ರಶಸ್ತಿಯನ್ನು ನೀಡಿ ಅಭಿನಂದಿಸಲಾಯಿತು.

೨೫. ೧೯-೧೫-೨೦೧೬ ಕಂಪ್ಲಿ ಪಟ್ಟಣದ ಶ್ರೀ ಕ್ಷೇತ್ರ ಕಲ್ಮಠದ ಮಹಾತಪಸ್ವಿ ಲಿ॥ ಶ್ರೀ ಮ.ನಿ.ಪ್ರ ಹಿರಿಯ ಪ್ರಭುಸ್ವಾಮಿಗಳವರ ೬೪ ನೇ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಚಿತ್ರಗಾರ ಪರಶುರಾಮಪ್ಪ ಶಿಲ್ಪಿಗಳು ಹಾಗೂ ಸಮಾಜ ಸೇವಾ ಕಾರ್ಯಕರ್ತರು ಎಂದು ಸನ್ಮಾನಿಸಿ ಆಶೀರ್ವದಿಸಿದರು.

೨೬. **"ಕನ್ನಡ ಶಿಖಾಮಣಿ" ಪ್ರಶಸ್ತಿ** : ೨೬-೧೧-೨೦೧೭ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ) ಕೊಪ್ಪಳ ಜಿಲ್ಲಾ ಘಟಕ ಗಂಗಾವತಿ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕಾರ್ಯಕ್ರಮದಲ್ಲಿ ಕಂಪ್ಲಿಯ ವಿಜಯನಗರ ಜನಪದ ಚಿತ್ರಕಲಾವಿದರಾದ ಶ್ರೀ

ಪರಶುರಾಮಪ್ಪ ಚಿತ್ರಗಾರ ಇವರ ಜೀವಮಾನ ಸಾಧನೆಯನ್ನು ಕಂಡು ಪ್ರಶಸ್ತಿ ನೀಡಿದ ಸಂದರ್ಭ.

೨೭. **"ಹುಲಿಕುಂಟೆಶ್ರೀ' ಪ್ರಶಸ್ತಿ :** ೨೪-೧೨-೨೦೧೮ ಶ್ರೀ ಹುಲಿಕುಂಟೆರಾಯ ತೊಗಲುಗೊಂಬೆ ಕಲಾ ತಂಡ (ರಿ) ಬಳ್ಳಾರಿ ಇವರು ಜಾನಪದ ಚಿತ್ರಕಲಾ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಪರಿಗಣಿಸಿ ಶ್ರೀ ಪರಶುರಾಮಪ್ಪ ಚಿತ್ರಗಾರ ವಿಜಯನಗರ ಜಾನಪದ ಚಿತ್ರಕಲಾವಿದರು ಕಂಪ್ಲಿ ಇವರನ್ನು ಬಳ್ಳಾರಿಯ ಡಾ ॥ ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಶ್ರೀಯುತರಿಗೆ ಪ್ರಶಸ್ತಿ ನೀಡಿ ಸನ್ಮಾನದೊಂದಿಗೆ ಗೌರವಿಸಲಾಯಿತು."[೫]

ಚಿತ್ರಗಾರರಿಗೆ ಪ್ರಶಸ್ತಿ

ಕಂಪ್ಲಿ: ಸಾರ್ವಜನಿಕರ ಶಿಕ್ಷಣ ಇಲಾಖೆ ಪ್ರಸಕ್ತ ಸಾಲಿನ ಶಿಕ್ಷಕರ ಪಟ್ಟಿ ಪ್ರಕಟಿಸಿದ್ದು ಇಲ್ಲಿನ ಚಿತ್ರಕಲಾ ಶಿಕ್ಷಕ ರಾಮಚಂದ್ರ ಚಿತ್ರಗಾರ ಅವರಿಗೆ ಜಿಲ್ಲಾಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದೆ ಸದ್ಯ ರಾಮಚಂದ್ರ ಚಿತ್ರಗಾರ ಹೊಸಪೇಟೆ ಚಿತ್ತವಾಡ್ಗಿ ಸರಕಾರಿ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ ಪ್ರಶಸ್ತಿ ಲಭಿಸಿರುವುದಕ್ಕೆ ಶಿಕ್ಷಕ ವೃಂದ ಮೆಚ್ಚುಗೆ ವ್ಯಕ್ತಪಡಿಸಿದೆ.

ಪತ್ರಿಕಾ ವರದಿಗಳು ಮತ್ತು ಲೇಖನಗಳು, ಅಭಿಪ್ರಾಯಗಳು

ಉಷಾಕಿರಣ ಪತ್ರಿಕೆಯಲ್ಲಿ

ಕಂಪ್ಲಿ: ಕಲೆ ಎಲ್ಲರನ್ನು ಕೈ ಬೀಸಿ ಕರೆಯುತ್ತದೆ. ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎನ್ನುವ ಕವಿವಾಣಿಯಂತೆ ಇಲ್ಲಿನ ಚಿತ್ರಗಾರ ಪರಶುರಾಮಪ್ಪನವರಿಗೆ ಕಲೆ ಸಿದ್ಧಿಸಿದೆ.

ರಾಮಪ್ಪನವರು ಮೂರ್ತಿ ತಯಾರಿಕೆ, ಚಿತ್ರ ರಚನೆ, ಪುಷ್ಪ ಅಲಂಕಾರ ಕಲಾವಿದರು ಮೂರು ಕಲೆಗಳನ್ನು ಮೂರು ಕಲೆಗಳಲ್ಲೂ ಸಿದ್ಧಹಸ್ತರು. ಗಣಪತಿ ಮೂರ್ತಿ ತಯಾರಿಸುವುದು ಇವರ ತಲೆತಲಾಂತರಗಳಿಂಡಲೂ ಬಂದ ಕಲೆ. ಮೊದಲಿಗೆ ಇವರು ಪೂಜೆಗೆಂದು ಸಂಪ್ರದಾಯಿಕವಾಗಿ ಗಣಪತಿ ತಯಾರಿಸಿ ಮಾರಾಟ ಮಾಡುತ್ತಿದ್ದರು. ಸಾರ್ವಜನಿಕರ ಗಣಪತಿ ಪ್ರದರ್ಶನಗಳಲ್ಲಿ ಪೈಪೋಟಿ ಸ್ಪರ್ಧೆಗಳು ಕಾಣಿಸಿಕೊಂಡ ನಂತರ ೧೯೮೨ ರಿಂದ ಬೃಹತ್ ಗಣಪತಿಗಳ ತಯಾರಿಕೆಗೆ ಇಳಿದರು. ಎರಡು ಅಡಿಯಿಂದ ೮ ಅಡಿ ಎತ್ತರದ ಗಣಪತಿ ಮೂರ್ತಿಗಳು ವೈವಿಧ್ಯಮಯವಾಗಿ ಸ್ಫುರದ್ರೂಪ ಅಂಗ ಸ್ಪಷ್ಟಗಳಿಂದ ಕೂಡಿ

೫. ರಾಮಚಂದ್ರಪ್ಪ ಚಿತ್ರಗಾರ, ಜನಪದ ಕಲಾವಿದ ಪರಶುರಾಮಪ್ಪ ಚಿತ್ರಗಾರ(ಅ.ಪ್ರ.ಕಿ.), ಪು.೧೧-೧೪

ಸಾರ್ವಜನಿಕರ ಮನಸೂರೆಗೊಂಡವು. ಪ್ಲಾಸ್ಟರ್ ಆಪ್ ಪ್ಯಾರಿಸ್‌ನಿಂದ ಮೂರ್ತಿ ತಯಾರಿಕೆ ಆರಂಭವಾದಾಗಿನಿಂದ ಬೃಹತ್ ಪ್ರಮಾಣದ ಕಡಿಮೆ ತೂಕದ ಗಣಪತಿಗಳು ತಯಾರಿಸಿ ಸೈ ಎನಿಸಿಕೊಂಡಿದ್ದಾರೆ. ಪುರಾಣ ಪ್ರಸಿದ್ಧ ವ್ಯಕ್ತಿಗಳ ರೂಪದ ಗಣಪತಿ ಮೂರ್ತಿಗಳು ಅಚ್ಚುಮೆಚ್ಚುಗೆ ಪಡೆದಿವೆ. ಅಲ್ಲದೇ ಮಾರಮ್ಮ ದುರುಗಮ್ಮನವರಂತಹ ಗ್ರಾಮದೇವತೆಗಳ ಮೂರ್ತಿಗಳನ್ನು ಮಣ್ಣು, ಕಟ್ಟಿಗೆಯಲ್ಲಿ ಮೂಡಿಸುವಲ್ಲಿ ನೈಪುಣ್ಯತೆ ಹೊಂದಿದ್ದಾರೆ. ಕೊಂತೆಮ್ಮ ನಚಿತರ ಆರಾಧನ ಮೂರ್ತಿಗಳನ್ನು ರಚಿಸುತ್ತಾರೆ, ಮದುವೆ ಮನೆಗಳಿಗೆ ಹಸೆ ಚಿತ್ರ ಕಾಮಧೇನು ಶಾಸ್ವಿ ಕಟ್ಟಿ ಚಿತ್ರಗಳು ವಿವಿಧ ವರ್ಣಗಳಿಂದ ನೈಜತೆ ಮೂಡಿಸುವಂತೆ ಚಿತ್ರಿಸಬಲ್ಲರು. ಇಲ್ಲಿನ ಹಾಗೂ ಸುತ್ತಲಿನ ಮನೆಗಳಲ್ಲಿನ ಇದರ ಚಿತ್ರಗಳು ಇದರ ಪ್ರತಿಭೆ ಪ್ರದರ್ಶಿಸುತ್ತಿವೆ.

ಮೂರ್ತಿಗಳಿಗೆ ಪೀಠದೇವರು ಪೆಟ್ಟಿಗೆಗಳಿಗೆ ತೊಟ್ಟಿಲುಗಳಿಗೆ ಕಾಣಿಸಿವೆ. ಎತ್ತುಗಳಿಗೆ ಮೊಹರಂನಲ್ಲಿ ಹುಲಿ ಆಡುವವರಿಗೆ ಕಾಮನ ಹಬ್ಬದ ಹುಲಿ ವೇಷದಾರಿಗಳಿಗೆ ಬಣ್ಣ ಕೊಡುತ್ತಾರೆ. ಸರಿಯಾದ ಅರ್ಹ ಬಣ್ಣಗಳನ್ನು ನೀಡಿ ಚಿತ್ರಕ್ಕೆ ಜೀವ ತುಂಬುತ್ತಾರೆ. ಮದುವೆ ಮಂಟಪದ ಜಾತ್ರೆ, ಮೆರವಣಿಗೆ, ಅಡ್ಡಪಲ್ಲಕ್ಕಿ, ಉತ್ಸವ, ದಸರಾಗಳಲ್ಲಿ ಗೊಂಬೆ ಪ್ರದರ್ಶನ ಋತುಮತಿ ಇತರೆ ಶುಭಕಾರ್ಯಗಳಲ್ಲಿ ಪುಷ್ಪುರಿಯರ ಮಾಡುವಲ್ಲಿಯೂ ನೈಪುಣ್ಯತೆಯೂ ಹೊಂದಿದ್ದಾರೆ. ಇವರು ತಮ್ಮ ೧೮ನೇ ವಯಸ್ಸಿನಿಂದಲೇ ಬಣ್ಣದ ವೃತ್ತಿ ಆರಂಭಿಸಿ ೬೦ ವಸಂತಗಳನ್ನು ಸಾರ್ಥಕಗೊಳಿಸಿದ್ದಾರೆ. ಇವರು ೪ ಮಂದಿ ಮಕ್ಕಳು ಸಹ ತಂದೆಯವರ ಪ್ರತಿಭೆಯನ್ನು ಹೊಂದಿ ಅನುಸರಿಸುತ್ತಿದ್ದಾರೆ. ಯಾವುದೇ ಜಿಲ್ಲೆ ರಾಜ್ಯಮಟ್ಟದ ಸರ್ಕಾರಿ ಸರ್ಕಾರೇತರ ಪ್ರಶಸ್ತಿಗಳನ್ನು ಆಶಿಸದೇ ಎಲೆ ಮರೆಯ ಕಾಯಿಯಂತೆ ಸಾರ್ಥಕ ಬಣ್ಣದ ಬದುಕನ್ನು ನಡೆಸುತ್ತಿರುವುದು ಯುವಕರಿಗೆ ಅನುಕರಣೆಯಾಗಿದೆ.

ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ವೈಭವದ ನವರಾತ್ರಿ ಉತ್ಸವಕ್ಕೆ ಚಾಲನೆ

ಕಂಪ್ಲಿ : ೨೭ ಪಟ್ಟಣದ ಆರಾಧ್ಯ ದೈವ ಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ವೈಭವದ ನವರಾತ್ರಿ ಉತ್ಸವಕ್ಕೆ ದೇವಸ್ತಾಣದ ಅಧ್ಯಕ್ಷ ವೀರಪ್ಪ, ಧರ್ಮದರ್ಶಿ ಪಂಚಯ್ಯ ಬೆನಕನಾಳ ಮಠ ಚಿನ್ನದ ತಂತಿ ಶಿವಮೂರ್ತಿ ಹಾಗೂ ಅರ್ಚಕ ಚಂದ್ರಶೇಖರಯ್ಯ ಸ್ವಾಮಿಯವರು ಚಾಲನೆ ನೀಡಿದರು.

ದೇವಸ್ಥಾನದಲ್ಲಿ ವಿಜಯದಶಮಿ ಆಚರಣೆ ಅಂಗವಾಗಿ ೯ ದಿನಗಳ ಕಾಲ ಪ್ರತಿದಿನ ವೈವಿಧ್ಯಮಯ ಗೊಂಬೆಗಳನ್ನು ಒಂದೊಂದು ದೇವತೆಗಳ ಪ್ರತಿರೂಪವನ್ನು ಅಲಂಕರಿಸಿ ಪ್ರತಿಸ್ಥಾದಿಸುವ ಮೂಲಕ್ಕ ಶಬ್ಧವನ್ನು ಆಚರಿಸಲಾಗುತ್ತದೆ ಎನ್ನುತ್ತಾರೆ. ಚಿನ್ನದ ತಂತಿ

ಶಿವಮೂರ್ತಿಸ್ವಾಮಿ ಹಾಗೂ ಅರ್ಚಕ ಚಂದ್ರಶೇಖರಯ್ಯ ಸ್ವಾಮಿ ಈ ಭಾರಿಯ ನವರಾತ್ರಿಯ ಗೊಂಬೆಗಳ ಉತ್ಸವವನ್ನು ವಿಘ್ನೇಶ್ವರ ವಿಗ್ರಹವನ್ನು ಪತಿಷ್ಠಾಪಿಸುವ ಮೂಲಕ ಆರಂಭಿಸಲಾಯಿತು. ಅತ್ಯಾಕರ್ಷಕವಾಗಿ ಅಲಂಕಾರ ಮಾಡಿದ್ದ ವಿಘ್ನಗಳ ನಿವಾರಕ ವಿಘ್ನೇಶ್ವರ ಮೂರ್ತಿ ಭಕ್ತರ ಗಮನ ಸೆಳೆಯಿತು.

ಸಂಜೆ ದೇವಸ್ಥಾನದಲ್ಲಿ ನಡೆದ ವಿವಿಧ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಹಾಗೂ ಗೊಂಬೆ ಉತ್ಸವದಲ್ಲಿ ಭಕ್ತರ ಸಂಭ್ರಮದಿಂದ ಭಾಗವಹಿಸಿ ಭಕ್ತಿಸೇವೆ ಸಮರ್ಪಿಸಿದರು. ದೇವಸ್ಥಾನ ಸೇರಿದಂತೆ ಮುಖ್ಯರಸ್ತೆಯ ಎರಡು ಬದಿಗಳಲ್ಲಿ ಜಗಮಗಿಸುವ ವಿದ್ಯುತ್ ದೀಪಗಳ ಅಲಂಕಾರ ಮಾಡಿದ್ದು ಕಂಗೊಳಿಸುತ್ತಿತ್ತು.

ಭಾನುವಾರದಿಂದ ಕ್ರಮವಾಗಿ ಉಕ್ಕಡಗಾತ್ರಿ ಕರಿಬಸವೇಶ್ವರ, ಜಗಜ್ಯೋತಿ ಬಸವೇಶ್ವರ, ವೀರಭದ್ರೇಶ್ವರ, ಶ್ರೀಮಾತಾ ಅನ್ನಪೂರ್ಣೇಶ್ವರ ಗುರು ಕೊಟ್ಟೂರೇಶ್ವರ, ಲಕ್ಷ್ಮೀ, ಸರಸ್ವತಿ, ಎಮ್ಮಿಗನೂರು ಎರ್ರಿತಾತಮ ಆದಿಶಕ್ತಿ ಮತ್ತು ಶಿವ ಪಾರ್ವತಿಯ ಕಲ್ಯಾಣ ಮೂರ್ತಿಗಳನ್ನು ಅಲಂಕರಿಸಿ ವೈಭವದಿಂದ ಆಚರಿಸಲಾಗುದೆಂದು ದೇವಸ್ಥಾನದ ಅಧ್ಯಕ್ಷ ಡಿ.ವೀರಪ್ಪ ತಿಳಿಸಿದರು. ವೈವಿಧ್ಯಮಯ ದೇವತೆಗಳ ಮೂರ್ತಿಗಳನ್ನು ಕಂಪ್ಲಿಯ ಪ್ರಸಿದ್ಧ ಕಲಾವಿದ ಪರಶುರಾಮಪ್ಪ ಚಿತ್ರಗಾರ ಕುಟುಂಬ ಸೆಳೆಯುತ್ತದೆ.



ಬಳ್ಳಾರಿಯ ೧೫ನೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಲಾಕೃತಿಗಳ ಪ್ರದರ್ಶನ



ಬಳ್ಳಾರಿ ೧೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪುರಸ್ಕಾರ



ಪರಶುರಾಮಪ್ಪನವರು " ಚಿತ್ರಕಲಾ ಸೇವಾ ಭಾರ್ಗವ ಪ್ರಶಸ್ತಿ " ಪಡೆಯುತ್ತಿರುವ ದೃಶ್ಯ.



ಸಿದ್ಧಗಂಗಾ ಶ್ರೀಮಠದ ಪುರಸ್ಕಾರವನ್ನು ಸ್ವೀಕರಿಸುತ್ತಿರುವ ದೃಶ್ಯ.





ಪರಶುರಾಮಪ್ಪನವರ ಪ್ರಶಸ್ತಿ ಪತ್ರಗಳು





ಲೋಕದರ್ಶನ ಕೊಪ್ಪಳ-ರಾಯಚೂರು ರವಿವಾರ 26 ಫೆಬ್ರುವರಿ 2012 2

ಕಟ್ಟಿಗೆ ಕುಸುರಿನ ಕಾಯಕಯೋಗಿ ಚಿತ್ರಗಾರ ಪರಶುರಾಮಪ್ಪ

ಪತ್ರಿಕೆಯಲ್ಲಿ ಬಂದ ಪರಶುರಾಮಪ್ಪನವರ ಜಾಹಿರಾತುಗಳು



ಕನ್ನಡವೇ ಜಾತಿ ಕನ್ನಡವೇ ಧರ್ಮ ಕನ್ನಡವೇ ದೇವರು

ಕರ್ನಾಟಕ ವೇದಿಕೆ

(ಪ್ರವೀಣ್ ಶೆಟ್ಟಿ ಬಣ)

ಕನ್ನಡ ಶಿಖಾಮಣಿ ಪ್ರಶಸ್ತಿ

ಶ್ರೀ ಪರಶುರಾಮಪ್ಪ ಚಿತ್ರಗಾರ.

ಜಾನಪದ ಚಿತ್ರಕಲೆ ರಲ್ಲಿ ಅಮೂಲ್ಯ ಸೇವೆಯನ್ನು ಸಲ್ಲಿಸುವುದರ ಮೂಲಕ ಕನ್ನಡ ನಾಡಿನ ಸೇವೆಯನ್ನು ಗೈದಿದ್ದಾರೆ. ಇವರ ಸೇವೆಯನ್ನು ಪರಿಗಣಿಸಿ ಶ್ರೀಯುತರಿಗೆ ಕನ್ನಡ ಶಿಖಾಮಣಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಸ್ಥಳ : ಗಂಗಾವತಿ.

ದಿನಾಂಕ :

ಶ್ರೀ ಪ್ರವೀಣ್‌ಕುಮಾರ್ ಶೆಟ್ಟಿ
ರಾಜ್ಯಾಧ್ಯಕ್ಷರು, ಕ.ರ.ವೇ.,
ಬೆಂಗಳೂರು.

ಶ್ರೀ ಪಂಪಣ್ಣ ನಾಯಕ
ಜಿಲ್ಲಾಧ್ಯಕ್ಷರು, ಕ.ರ.ವೇ.,
ತಾ. ಗಂಗಾವತಿ

ಪರಶುರಾಮಪ್ಪನವರ ಪ್ರಶಸ್ತಿ ಪತ್ರಗಳು


www.andhrajyothy.com

ఆంధ్రజ్యోతి

7

చిత్రలేఖనమే జీవితం

ಪತ್ರಿಕೆಯಲ್ಲಿ ಬಂದ ಪರಶುರಾಮಪ್ಪನವರ ಜಾಹಿರಾತುಗಳು


2 ಶುಕ್ರವಾರ, 30, ನವೆಂಬರ್, 2018, ದಾವಣಗೆರೆ

ಸಂಯುಕ್ತ ಕರ್ನಾಟಕ

ಬಳ್ಳಾರಿ

ನಮ್ಮವರು ನಮ್ಮ ಹೆಮ್ಮೆ

ಎಲೆಮರೆಯ ಹೂವು ಪರಶುರಾಮ ಚಿತ್ರಗಾರ



ಸಂಯುಕ್ತ ಕರ್ನಾಟಕ

ಮಧ್ಯ ಕರ್ನಾಟಕ

ವಿಜಯನಗರ ಜನಪದ ಚಿತ್ರಕಲೆಯ ಪೋಷಕ 'ದಂಪತಿ'

ವಿನಾಶದತ್ತ ಪ್ರಾಚೀನ ಕಲೆ

ಸರ್ಕಾರದ ನಿರ್ಲಕ್ಷ್ಯ

ಪತ್ರಿಕೆಯಲ್ಲಿ ಬಂದ ಪರಶುರಾಮಪ್ಪನವರ ಜಾಹಿರಾತುಗಳು



ಸಾಕ್ಷಿ 24/7 7

ಅದ್ಭುತ 'ಚಿತ್ರಗಾರ'

ಅಧ್ಯಾಯ : ಆರು

ಕಲಾವಿದ ಪರಶುರಾಮಪ್ಪ ಚಿತ್ರಗಾರ ಅವರ ಸ್ಥಿತಿಗತಿ

ಅಧ್ಯಾಯ : ಆರು

ಕಲಾವಿದ ಪರಶುರಾಮಪ್ಪ ಚಿತ್ರಗಾರ ಅವರ ಸ್ಥಿತಿಗತಿ

"ಹತ್ತಾರು ವರ್ಷಗಳ ಹಿಂದೆ ಗ್ರಾಮೀಣ ಕಲೆಗಳೇ ಜನರ ಜೀವನದ ಉಸಿರಾಗಿದ್ದವು ಅವುಗಳನ್ನು ನೋಡಿ ಆನಂದಿಸಲು ಜನ ತುದಿಗಾಲ ಮೇಲೆ ಕಾಯುತ್ತಿದ್ದರು ಆದರೆ ಇಂದು ಆಧುನಿಕ ತಂತ್ರಜ್ಞಾನದ ಬಿರುಗಾಳಿ ಸಿಕ್ಕು ಅನೇಕ ಜಾನಪದ ಕಲಾ ಪ್ರಕಾರಗಳಾದ ದೊಡ್ಡಾಟ, ಸಣ್ಣಾಟ, ನಾಟಕ, ಯಕ್ಷಗಾನ, ಬಯಲಾಟ, ತೊಗಲು ಗೊಂಬೆಯಾಟ, ಸೂತ್ರದ ಗೊಂಬೆಯಾಟ, ಸುಗ್ಗಿಪದ, ಗೀಗಿಪದ, ಹಂತಿಪದ, ಬೀಸುವ ಪದ ಸೋಬಾನೆ, ಮೋಡಿ ...."[೧]

ಅಂದಿನ ಜನಪದ ಬದುಕಿನಲ್ಲಿ ಯಾವುದಕ್ಕೂ ಕೊರತೆ ಇರಲಿಲ್ಲ ಕೊರತೆಯುಂಟಾದರೆ ಅವರಿಗೆ ಅಪಶಕುನ ಎಂದು ಬಗೆಯುತ್ತಿದ್ದರು. ಶುಭದ ಸಂಕೇತವಾಗಿ ಆಚರಿಸಿಕೊಂಡು ಬಂದ ಸಾಂಪ್ರದಾಯಗಳಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಸಹ ದೊಡ್ಡ ರಾದ್ದಂತವೇ ಏಳುತ್ತಿತ್ತು. ಅವರದು ಬರೀ ಆಚರಣೆ ಆಗಿರಲಿಲ್ಲ ಧಾರ್ಮಿಕ ನಂಬಿಕೆ ಕೂಡ ಆಗಿತ್ತು.

"ಭಾರತೀಯ ಸಂಸ್ಕೃತಿಯಲ್ಲಿ ಜಾನಪದ ಸಂಪ್ರದಾಯ ಕಾರ್ಯಕ್ರಮಗಳು ನಾಡಿಗೆ ಶ್ರೇಷ್ಠತೆ ತಂದುಕೊಟ್ಟಿವೆ. ಅದರಲ್ಲಿ ಕಲಾಪಾತ್ರವು ಸಂಸ್ಕೃತಿಗೆ ಹೆಚ್ಚು ಮೆರಗನ್ನು ನೀಡಿವೆ. ಇಂತಹ ನಮ್ಮ ಭವ್ಯ ಪರಂಪರೆಯ ನಾಡಿನಲ್ಲಿ ಕಲೆಗೆ ದೊಡ್ಡ ಸ್ಥಾನವಿದೆ. ಇದಕ್ಕೆ ನಿದರ್ಶನ ಎಂಬಂತೆ ಉದಾಹರಣೆಗಳು ನಮ್ಮ ರಾಜ್ಯದಲ್ಲಿರುವ ಶಿಲ್ಪ ಕಲೆಗಳ ಅರಮನೆಯಲ್ಲಿ ಚಿತ್ತಾರಗಳಿಂದ ಅಲಂಕಾರಗೊಂಡಿರುವುದು ಇಂದಿಗೂ ರಾಷ್ಟ್ರ ಮತ್ತು ಅಂತರ್ ರಾಷ್ಟ್ರಮಟ್ಟದಲ್ಲಿ ಜನರ ಮನವನ್ನು ಸೆಳೆಯುತ್ತಿರುವುದು ಒಂದು ವಿಶೇಷ."[೨]

---

೧. ಪ್ರಭಾಕರ ಕೆ.ಎಸ್., ಕಂಪ್ಲಿಯ ಕರಕುಶಲ ಕಲೆ(ಅ.ಪ್ರ), ಪು.೧೪

೨. ಎಸ್.ಸಿ.ಪಾಟೀಲ, ಕರ್ನಾಟಕ ಜನಪದ ಚಿತ್ರಕಲೆ, ಪು.೧೯

ನಾಡಿನ ಶಿಲ್ಪಿಗಳು ಮತ್ತು ಚಿತ್ರಕಲಾವಿದರು ಕರಕುಶಲ ಕಲಾವಿದರು ನೀಡಿದ ಕಲಾ ಕೊಡುಗೆ ಅಪಾರ ಅದಕ್ಕೆ ಬೆಲೆಯನ್ನು ಕಟ್ಟಲಾಗದಂತ ದೊಡ್ಡ ಸಂಪತ್ತೆ ಕಲಾ ಸಂಪತ್ತು. ಇಂತಹ ಶ್ರೇಷ್ಠ ಕಲಾವಿದರು ಹಾಕಿ ಕೊಟ್ಟ ಕಲಾ ತಳಪಾಯದಂತೆ ಹಲವು ಕಲಾವಿದರು ಮುನ್ನಡೆಯುತ್ತಿರುವುದು ಕಾಣಬಹುದು. ಅಂತಹವರಲ್ಲಿ ಸುಮಾರು ೫೫ ವರ್ಷಗಳ ಹಿಂದೆ ಈ ಭಾಗದ ಹಳ್ಳಿಯಿಂದ ಪಟ್ಟಣ ನಮ್ಮ ರಾಜ್ಯದ ಹಲವು ಜಿಲ್ಲೆಗಳಲ್ಲೂ ಅಲ್ಲದೆ ನೆರೆಯ ಆಂಧ್ರ ಪ್ರದೇಶದವರೆಗೂ ಕಿನ್ನಾಳ ಕಲೆಯಲ್ಲಿ ಪ್ರಸಿದ್ಧಿ ಪಡೆದ ಕಲಾವಿದರಾದ ಶ್ರೀ ರಾಮಣ್ಣ ಚಿತ್ರಗಾರ ಇವರ ಹತ್ತಿರ ಬಾಲ್ಯದಿಂದಲೂ ಇವರು ತಯಾರಿಸುವ ಕಲಾಪ್ರಕಾರಗಳನ್ನು ನೋಡುತ್ತಾ, ಮೊದಮೊದಲು ಅಲ್ಪಸ್ವಲ್ಪ ಕೈ ಕೆಲಸಗಳನ್ನು ಮಾಡುತ್ತಾ, ಕಲಾ ವಿದ್ವತ್ತನ್ನು ಪೂರ್ಣ ಕಲಿತು ಅವರ ಕಲಾಕೀರ್ತಿಯನ್ನು ಇಂದಿಗೂ ಉಳಿಸಿ ಬೆಳೆಸಿಕೊಂಡು ನಾಡಿನ ಸಂಪ್ರದಾಯಗಳಿಗೆ ಮೆರುಗನ್ನು ನೀಡುವ ಬಹುಮುಖ ಪ್ರತಿಭೆಯ ಕಲಾವಿದ ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಇಂದಿಗೂ ಕಲಾನಿರತರು ಜನ ಮನಗಳಿಗೆ ಚಿರಪರಿಚಿತ ಕಿನ್ನಾಳ ಕಲಾವಿದರು ಶ್ರೀ ಪರಶುರಾಮಪ್ಪ ಚಿತ್ರಗಾರ. ಆದರೆ ಜನಸಮುದಾಯದ ಮನಃಸ್ಥಿತಿ ಈಗ ತುಂಬಾ ಬದಲಾಗಿದೆ. ಹಿಂದಿನ ಧಾರ್ಮಿಕ ಹಿನ್ನಲೆಯ ದೈವಿಕ ಪರಿಕಲ್ಪನೆಯ ಮನೋ ರಂಜನಾ ಕಲೆಗಳು ಇಂದು ಮೂಲೆ ಗುಂಪಾಗಿವೆ. ಭಕ್ತಿಭಾವದ ಆ ಸಂಭ್ರಮಗಳೆಲ್ಲ ದೂಳಿಪಟವಾಗಿ ಹೋಗಿವೆ. ಈಗ ಎಲ್ಲೆಡೆಯಲ್ಲೂ ದೂರದರ್ಶನ ಸಿನಿಮಾ, ಮಂದಿರ, ಕಂಪ್ಯೂಟರ, ಮೋಬೈಲ್, ಐಪಾಡ್, ಛಾಯಾಚಿತ್ರಣ, ಡಿಜಿಟಲ್ ಕ್ಯಾಮರಾ ಹೀಗೆ ಮೊದಲಾದ ಆಧುನಿಕ ತಂತ್ರಜ್ಞಾನದ ಪರಿಕರಗಳ ಭರಾಟೆಯಲ್ಲಿ ಜನಪದ ಕಲೆಗಳೆಲ್ಲಾ ಮಾಯವಾಗುತ್ತವೆ. ಹಿಂದಿನ ಸಂಪ್ರದಾಯ ಆಚರಣೆಗಳು ಕಾಲ ಉರುಳಿದಂತೆ ಮೊಟಕುಗೊಳ್ಳುತ್ತ ಮುಂದೊಂದು ದಿನ ಹೇಳಲು ಹೆಸರಿಲ್ಲದಂತೆ ಮಾಯವಾಗಿ ಹೋದರೆ ಅಚ್ಚರಿ ಪಡಬೇಕಾಗಿಲ್ಲ. ಆಧುನಿಕತೆಗೆ ಮಾರುಹೋಗಿ ನಮ್ಮ ಸಂಸ್ಕೃತಿ ಪರಂಪರೆಯನ್ನು ಉಳಿಸಿಕೊಳ್ಳುವುದು ತುಂಬಾ ಕಷ್ಟವಾಗಿದೆ. ಕಂಪ್ಲಿ ಪಟ್ಟಣದಲ್ಲಿ ಇಂತಹ ಕರಕುಶಲ ಕಲೆಯನ್ನು ಮಾಡುತ್ತಾ ತಮ್ಮ ಜೀವನದ ಬಂಡಿಯನ್ನು ಸಾಗಿಸುತ್ತಿರುವ ಬಣಗಾರ ಜನಾಂಗವೊಂದಿದೆ. ಬಹಳ ಹಿಂದಿನ ತಮ್ಮ ಮನೆತನದಲ್ಲಿ ಕರಕುಶಲ ಕಲೆಗಳನ್ನು ರೂಢಿಸಿಕೊಂಡು ಬಂದಿರುವ ಕಲಾವಿದರು ಕಲೆಯನ್ನೇ ದೈವವೆಂದು ಬಗೆದು ಉಳಿಸಿಕೊಂಡು ಬಂದಿದ್ದಾರೆ.

ಎದುರಾಯಪ್ಪ, ಮಲ್ಲಪ್ಪ, ಫಕೀರಪ್ಪ ಈ ಮೂರು ತಲೆಮಾರಿನ ನಂತರ ರಾಮಣ್ಣ ಚಿತ್ರಗಾರ ಕಂಪ್ಲಿ ನಗರದಲ್ಲಿ ಜಾನಪದ ಕರಕುಶಲ ಕಲಾವಿದರಾಗಿ ಹೆಸರಾಗಿದ್ದರು ಸುಮಾರು ೫೦ ವರ್ಷಗಳಿಂದ ಶ್ರೀ ಪರಶುರಾಮಪ್ಪ ಚಿತ್ರಗಾರ ಎಂಬುವವರ ಹಾಗೂ ಅವರ

ಧರ್ಮಪತ್ನಿ ಶ್ರೀಮತಿ ಸುಮಿತ್ರಮ್ಮ ಮತ್ತು ಮಕ್ಕಳು ಹಾಗೂ ಅಳಿಯಂದಿರು ಸಹ ಜಾನಪದ ಕರಕುಶಲ ಕಲಾವಿದರಾಗಿ ಕಲಾಜೀವನ ನಡೆಸುತ್ತಾ ಸುತ್ತಮುತ್ತಲ ಭಾಗದಲ್ಲಿ ತುಂಬಾ ಹೆಸರುವಾಸಿಯಾಗಿದ್ದಾರೆ.

"ಇವರು ತಮ್ಮ ಕಲಾಜೀವನದಲ್ಲಿ ಹಲವಾರು ರೀತಿಯ ಕಲೆಗಳನ್ನು ಕರಗತ ಮಾಡಿಕೊಂಡಿದ್ದಾರೆ ಇಂತಹ ಕಲೆಯನ್ನು ಉಳಿಸಿ ಬೆಳಸಿಕೊಂಡು ಹೋಗುವ ಹಾದಿಯಲ್ಲಿದ್ದು ಕಾಲಮಾನಕ್ಕೆ ತಕ್ಕಂತೆ ಸಂಪ್ರದಾಯಗಳಿಗೆ ಹೊಂದಿಕೊಂಡು ಕಲಾಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಇವುಗಳಲ್ಲಿ ಕೆಲವೊಂದು ಸಂಪ್ರದಾಯಗಳನ್ನು ಖರ್ಚು ವೆಚ್ಚಗಳ ಲೆಕ್ಕಚಾರದಲ್ಲಿ ಕೈಬಿಡುವುದು ಅನಿವಾರ್ಯವಾಗಿದೆ. ಇದಕ್ಕೆ ಅನುಗುಣವಾಗಿ ಕಲಾವಿದನು ಕಲೆಯನ್ನು ನಂಬಿಕೊಂಡು ಜೀವನ ಸಾಗಿಸುವುದು ಕಷ್ಟವಾಗಿ ತಮ್ಮ ಜೀವನಕ್ಕೆ ಬೇರೆ ದಾರಿಯನ್ನು ಕಂಡುಕಳ್ಳುವುದು ಕೂಡಾ ಅನಿವಾರ್ಯವಾಗಿದೆ. ಅಲ್ಲದೇ ಇಂದು ಆಧುನಿಕ ಪ್ರಿಂಟಿಂಗ್ ಯಂತ್ರಗಳು ಬಂದು ಕಲಾವಿದನ ಕೈಬರಹವನ್ನು ಮೊಟಕುಗೊಳಿಸಿವೆ. ಇಂದಿನ ದಿನಮಾನಗಳಲ್ಲಿ ಮದುವೆ ಮೊದಲಾದ ಸಮಾರಂಭಗಳನ್ನು ಕಲ್ಯಾಣ ಮಂಟಪಗಳಲ್ಲಿ ಸಾಮೂಹಿಕ, ವಿವಾಹಗಳಲ್ಲಿ, ದೇವಸ್ಥಾನಗಳಲ್ಲಿ ಮಾಡುತ್ತಾರೆ. ಮದುವೆ ಮುಂತಾದ ಶುಭಸಮಾರಂಭಗಳಲ್ಲಿ ಸಾಸಿವೆ ಕಟ್ಟೆ ಮತ್ತು ಕಾಮಧೇನು ಚಿತ್ರಗಳನ್ನು ಇದರಿಂದಾಗಿ ತಮ್ಮ ಮನೆಯ ಗೋಡೆಗಳ ಮೇಲೆ ರಚನೆ ಮಾಡಿಸುವುದು ಕಡಿಮೆಯಾಗಿದೆ, ಎಂದೇ ಹೇಳಬಹುದು. ಅಲ್ಲದೇ ಮನೆಗಳ ಗೋಡೆಗಳಿಗೆ ದುಬಾರಿ ಬಣ್ಣಗಳನ್ನು ಹಚ್ಚಿರುವ ಜನರು ತಮ್ಮ ಮನೆಯ ಗೋಡೆಗಳು ಹಾಳಾಗಬಾರದೆಂದು ಈ ರೀತಿಯ ಚಿತ್ರಗಳನ್ನು ಬಿಡಿಸಲು ಇಷ್ಟಪಡುವುದಿಲ್ಲ."[೩] "ಈಗಿನ ಕಾಲದಲ್ಲಿ ಮಾರ್ಡನ್ ಆರ್ಟ್ ಮತ್ತು ಕಲೆಯಲ್ಲಿ ಹೊಸ ಹೊಸ ಪ್ರಯೋಗಗಳು ನಡೆಯುತ್ತಿರುವುದರಿಂದ ನಮ್ಮ ಸಾಂಪ್ರದಾಯಕ ಕರಕುಶಲ ಕಲೆಗಳಿಗೆ ತುಂಬಾ ಪ್ರಮುಖ್ಯತೆ ಎಲ್ಲಿಯೂ ದೊರೆಯದಿರದ ಕಾರಣ, ಹಾಗೂ ಈ ಕಲೆಯನ್ನು ಮುಂದುವರಿಸಿಕೊಂಡು ಹೋಗುವವರು ಇಲ್ಲವೇ ಎಂಬ ಆತಂಕವು ಇದ್ದದ್ದೆ."[೪] ಆದಕಾರಣ ನಮ್ಮ ಪೂರ್ವಜರಿಂದ ನಮಗೆ ಈ ಕಲೆ ವರವಾಗಿ ಸಿದ್ಧಿಸಿಕೊಂಡ ಈ ಕಲೆಯು ಯುವಪೀಳಿಗೆಯು ನಮ್ಮ ಭಾರತದ ಶ್ರೀಮಂತ ಸಂಸ್ಕೃತಿಗಳನ್ನು ಹಾಳು ಮಾಡದೆ, ಇದೇ ರೀತಿ ಮುಂದುವರೆಸಿಕೊಂಡು ಹೋಗುವುದಾಗಿ ಬಯಸುತ್ತೇನೆ ಎಂದು ಚಿತ್ರಗಾರ ಪರಶುರಾಮಪ್ಪನವರು ತಮ್ಮ ಮನದಾಳದ ಮಾತನ್ನು ಹಂಚಿಕೊಳ್ಳುತ್ತಾರೆ.

---

೩. ಪ್ರಭಾಕರ ಕೆ.ಎಸ್., ಕಂಪ್ಲಿಯ ಕರಕುಶಲ ಕಲೆ(ಅ.ಪ್ರ), ಪು.೧೪

೪. ಅದೇ, ಪು.೪೫

“ನಮ್ಮ ಭಾರತೀಯ ಸಮಕಾಲೀನ ಕಲೆಯ ಬೆಳವಣಿಗೆಯನ್ನು ಈಗ ಗಮನಿಸಿದರೆ ಪ್ರಾರಂಭದಲ್ಲಿ ಸಾಂಪ್ರದಾಯಕ ಕಲೆಯ ಪ್ರಭಾವ ಬಲವಾಗಿತ್ತು. ೧೯ ನೇ ಶತಮಾನದ ಕೊನೆಯ ಈ ಜಾಗತಿಕ ಕಲೆಯ ಕ್ಷೇತ್ರದಲ್ಲಿಯೂ ಸಮಾನವಾಗಿ ಪ್ರತಿಧ್ವನಿಸಿತು. ಈ ಪ್ರತಿರೋಧಕವು ಭಾರತೀಯ ಸಾಂಪ್ರದಾಯಿಕ ಕಲೆಗಳಾದ ಜಾನಪದ, ಭಿತ್ತಿಚಿತ್ರಗಳು ಮತ್ತು ಚಿಕಣಿಚಿತ್ರಗಳ ಕಡೆ ದೃಷ್ಟಿ ಪಾಶ್ಚಾತ್ಯ ಸಂಸ್ಕೃತಿ ಕೇಂದ್ರೀಕೃತವಾಗುವಂತೆ ಮಾಡಿತು. ಆ ಕಾಲದಲ್ಲಿ ಕಲೆಯ ಮಾರ್ಗದರ್ಶಕ ಅಥವಾ ಅನ್ವೇಷಕರಾಗಿದ್ದು ಕಲಾವಿದರು ತಮ್ಮ ಪರಂಪರಾಗತವಾದ ಕಲೆಯನ್ನು ಮಾಡತೊಡಗಿದರು.”[೫] ಇಂದಿಗೂ ಕರ್ನಾಟಕದಲ್ಲಿ ಪ್ರಬುದ್ಧ ಹಾಗೂ ಜನಜನಿತವಾದ ಸಾಂಪ್ರದಾಯಿಕ ಕಲೆಯಲ್ಲಿ ಒಂದಾದ ಮರದ ಗೊಂಬೆಗಳು ಉತ್ಸವ ಹಾಗೂ ರಥಗಳಿಗೆ ಜಾತ್ರೆ ನಡೆಯುವಾಗ ಬಣ್ಣದ ಗೊಂಬೆಗಳನ್ನು ಅದ್ಭುತವಾಗಿ ಸಂಯೋಜನೆ ಮಾಡಿ, ವಿಶೇಷವಾಗಿ ಅಲಂಕಾರಿಕವಾಗಿ ಕೆಂಪು, ಹಳದಿ, ಕಪ್ಪು ಬಣ್ಣಗಳಿಂದ ಕೂಡಿದ್ದರೂ ಕರ್ನಾಟಕದ ಕಲಾವಿದರ ಮೇಲೆ ಇದು ಹೆಚ್ಚಿನ ಪರಿಣಾಮವನ್ನು ಬೀರದೇ ಹೋಗಿರುವುದು ಆಶ್ಚರ್ಯಕರ.

“ನಮ್ಮ ಮೂಲ ಸಂಸ್ಕೃತಿ ಹಾಗೂ ಪರಂಪರೆಗಳು ತಮ್ಮ ಸಾಂಪ್ರದಾಯಕ ನೆಲೆಯಿಂದ ಬೇರೆಯಾಗುತ್ತಿವೆ, ಎಂದು ಕಂಡು ಬಂದಾಗ ಹಲವರಲ್ಲಿ ಆತಂಕ ಮೂಡುವುದು ಸಹಜ. ನಮ್ಮದು ಎನ್ನುವುದನ್ನು ಉಳಿಸಿಕೊಳ್ಳಬೇಕು ಅದನ್ನು ಗೌರವಿಸಿ ಬೆಳೆಸಬೇಕು ಎನ್ನುವ ಆಶಯ ಎಲ್ಲಾ ಎಲ್ಲಾ ಪ್ರದೇಶಗಳಲ್ಲಿ ಇರುವುದು ಸಹಜ. ಆದರೆ ಸಂಸ್ಕೃತಿ ಮತ್ತು ಪರಂಪರೆಗಳು ನಿಂತ ನೀರಾಗಿರುವಂತ ಸಂಗತಿಗಳಲ್ಲಿ ಕಾಲಚಕ್ರದ ಉರುಳುವಿಕೆಯ ಗತಿಯಲ್ಲಿಯೇ ಇವು ವ್ಯತ್ಯಾಸಗೊಳ್ಳುತ್ತ ಸಾಗುತ್ತವೆ. ತನ್ನ ಸಂಪರ್ಕಕ್ಕೆ ಬರುವ ಇತರೆ ಸಂಸ್ಕೃತಿಗಳಲ್ಲಿನ ಹಲವು ಅಂಶಗಳನ್ನು ತನ್ನದಾಗಿಸಿಕೊಂಡು ಬೆಳೆಯುತ್ತದೆ. ಇದು ಅಪೇಕ್ಷಣೀಯವಲ್ಲವೆಂದು ಬೌದ್ಧಿಕ ನೆಲೆಯಲ್ಲಿ ಹೇಳಿದರೂ ಇದು ಯಾವುದೇ ಸಂಸ್ಕೃತಿಗೆ ಅನಿವಾರ್ಯವಷ್ಟೇ ಇದೆ. ಅಲ್ಲಿ ಜೀವಂತ ಸಂಸ್ಕೃತಿಯಾಗುತ್ತದೆ. ನಮ್ಮ ನಡುವಳಿಕೆಗಳಲ್ಲಿ ವಿಧಿವಿಧಾನಗಳಲ್ಲಿ ಅನ್ಯ ಸಂಸ್ಕೃತಿಯ ಅಂಶಗಳು ಸೇರಿಕೊಂಡು ಬೆರೆತಾಗ ಅದು ಅಲ್ಲಿನ ಸಂಸ್ಕೃತಿ ಎನಿಸಿಕೊಳ್ಳುತ್ತದೆ.”[೬]

ಇದು ನಮ್ಮ ಸಮೂಹ ಮಾಧ್ಯಮಗಳ ಪ್ರಭಾವದಿಂದಾಗಿ ಇಡೀ ವಿಶ್ವ ಕಿರಿದಾಗುತ್ತಿದೆ. ಪೂರ್ವ ಮತ್ತು ಪಶ್ಚಿಮಗಳ ನಡುವಿನ ಅಂತರ ಕಡಿಮೆಯಾಗುತ್ತಿದೆ. ಮುಂದುವರೆದ ದೇಶಗಳ ನಡೆನುಡಿಗಳು ಆಚರಣೆಗಳ ಪ್ರಭಾವ ನಮ್ಮ ಮೇಲೆ ಹಿಂದೆಂದಿಗಿಂತಲೂ ಹೆಚ್ಚಾಗಿ

೫. ಎಸ್.ಸಿ.ಪಾಟೀಲ, ಕರ್ನಾಟಕ ಜನಪದ ಚಿತ್ರಕಲೆ, ಪು.೨೦

೬. ಅದೇ, ಪು.೨೧

ಆಗುತ್ತಿರುವ ಕಾರಣದಿಂದಾಗಿ ಪರಕೀಯ ಸಂಸ್ಕೃತಿಗಳ ಅಬ್ಬರದಲ್ಲಿ ನಮ್ಮ ಮೂಲ ಸಂಸ್ಕೃತಿಯ ಹಲವಾರು ಅಂಶಗಳು ಕ್ಷೀಣಿಸುತ್ತಿವೆ ಎನ್ನುವುದು ಸುಳ್ಳಲ್ಲ. "ಒಂದೊಂದು ಕರಕುಶಲ ಕಲೆಗಳನ್ನು ಗಮನಿಸಿದಾಗ ಕೆಲವು ಆಯಾ ಪ್ರದೇಶಕ್ಕೆ ಸೀಮಿತ ಹಾಗೂ ವಿಶಿಷ್ಟ ಎನಿಸುವಂತೆ ಕಂಡು ಬಂದರೂ ಮತ್ತೆ ಕೆಲವು ಕಲೆಗಳು ಸಮಾನ್ಯವಾಗಿ ಇನ್ನೊಂದು ಕಡೆಗಳಲ್ಲಿ ಕಂಡು ಬರುತ್ತವೆ . ಹಲವು ಆಯಾ ಪ್ರದೇಶದ ಜನಾಂಗೀಯ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯನ್ನು ಹಾಗೂ ಆಯಾ ಪ್ರದೇಶದ ಪರಿಸರವನ್ನು ಅವಲಂಬಿಸಿ ರೂಪ ತಾಳಿವೆ. ಆಧುನಿಕ ಜೀವನ ಪದ್ಧತಿಯಿಂದಾಗಿ ಜಾಗತೀಕರಣ, ಆಧುನೀಕರನ ಹಾಗೂ ಉದಾರೀಕರಣ ಪ್ರಭಾವದಿಂದಾಗಿ ಹಲವಾರು ತಲೆಮಾರುಗಳಿಂದ ಪಾರಂಪರಿಕವಾಗಿ ರೂಢಿಸಿಕೊಂಡಿವೆ. ಅವುಗಳನ್ನು ಬೆಳೆಸಿಕೊಂಡು ಬಂದಿದ್ದ ಕಲಾವಿದರುಗಳು ಇಂದಿನ ದಿನಮಾನಗಳಿಗೆ ತಕ್ಕಂತೆ ತಮ್ಮ ಕಲೆಯಲ್ಲಿಯೂ ಸಹ ಕೆಲವೊಂದು ಬದಲಾವಣೆಗಳನ್ನು ಮಾಡಿಕೊಂಡು, ತಮ್ಮ ತುತ್ತಿನ ಚೀಲವನ್ನು ತುಂಬಿಸಿಕೊಳ್ಳುವುದಂತು ನಿಜ.

[illegible]

ಅಧ್ಯಾಯ : ಏಳು

ಸಮಾರೋಪ

ಅಧ್ಯಾಯ : ಏಳು

ಸಮಾರೋಪ

"ಜನಪದ ಕಲೆಗಳು ಗ್ರಾಮೀಣ ಭಾಗದ ಪ್ರಜ್ಞಾವಂತ ಜನಪದ ಕಲಾರಸಿಕರಿಂದ ಸೃಷ್ಟಿಯಾಗಿರುವಂತವುಗಳು ಜನಪದ ಕಲೆ, ಜನಸಾಮಾನ್ಯರ ಕಲೆ ಇದು ಎಲ್ಲಾ ಬಗೆಯ ಶಾಸ್ತ್ರೀಯ ಮತ್ತು ಶಿಷ್ಟಕಲೆಗಳಿಗೂ ಮೂಲ. ಜನಪದ ಕಲೆಯಲ್ಲಿ ಯಾವುದೇ ರೀತಿಯ ಇತಿಮಿತಿಗಳ ನಿರ್ಬಂಧ ವಿರುವುದಿಲ್ಲ. ಕಲಾವಿದರಿಗೆ ಇಲ್ಲಿ ಯಾವುದೇ ನಿಯಮಗಳು ಲಿಖಿತ ರೂಪದಲ್ಲಿ ದೊರೆಯುವುದಿಲ್ಲ. ಗ್ರಾಮೀಣ ಭಾಗದ ಜನಸಾಮಾನ್ಯರ ಬಾಯಿಂದ ಬಾಯಿಗೆ, ಹಸ್ತಕೌಶಲ್ಯದಿಂದ ಹಸ್ತಕೌಶಲ್ಯಕ್ಕೆ ಸಂಬಂಧಪಟ್ಟಂತೆ ಪರಿವರ್ತನೆಗೊಂಡಿರುತ್ತವೆ. ತಮ್ಮ ಮನಸ್ಸಿಗೆ ಮುದ ನೀಡುವ ವೈಶಿಷ್ಟ ಪೂರ್ಣ ಅಭಿವ್ಯಕ್ತಿಯೆನ್ನೆಲ್ಲ ಕಲೆ ಎಂದು ಗೌರವಿಸುವುದು ಜನಪರ ರೂಢಿ."[೧]

"ಜನಪದ ಕಲೆಯನ್ನು ಪ್ರಯೋಜನಾತ್ಮಕ ಮತ್ತು ಮನರಂಜನಾತ್ಮಕ ಎಂಬುದಾಗಿ ವಿಭಾಗ ಮಾಡಿ ಹತ್ತಾರು ಜನಪದ ಕಲೆಗಳು ಬೆಳೆದು ಬಂದಿರುವುದನ್ನು ಕಾಣಬಹುದು. "ಕಲಾವಿದ ಪರಶುರಾಮಪ್ಪ ಚಿತ್ರಗಾರ ಅವರ ಕರಕುಶಲ ಕಲೆ ಮತ್ತು ಬದುಕಿನ ಅಧ್ಯಯನ" ಎಂಬ ಈ ಸಂಪ್ರಬಂಧವು ರೂಪಗೊಂಡಿದೆ. ಇದನ್ನು ಏಳು ಅಧ್ಯಾಯಗಳಲ್ಲಿ ವಿಂಗಡಿಸಿ ಕೊಂಡು ವಿಷಯದ ವಿವರಣೆ ಮಾಡಲಾಗಿದೆ. ಪ್ರಸ್ತುತ ಅಧ್ಯಯನದಿಂದ ಹೊರಬಂದ ಪ್ರಮುಖ ಫಲಿತಾಂಶಗಳ ಸಮೀಕ್ಷೆಯನ್ನು ಇಲ್ಲಿ ನೀಡಲಾಗಿದೆ."[೨]

ಪ್ರಸ್ತುತ ಕರಕುಶಲ ಕಲೆಗಳ ಉಗಮ ಮತ್ತು ವಿಕಾಸಗಳನ್ನು ಕುರಿತು ವಿದ್ವಾಂಸರು ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ. ಸಾಮಾನ್ಯವಾಗಿ ಕೆಲವು ಜನಪದ

---

೧. ಪ್ರಭಾಕರ ಕೆ.ಎಸ್., ಕಂಪ್ಲಿಯ ಕರಕುಶಲ ಕಲೆ(ಅ.ಪ್ರ), ಪು.೪೭

೨. ಅದೇ, ಪು.೪೮

[illegible]

ಕಲೆಗಳು ಆಯಾ ಪ್ರದೇಶಕ್ಕೆ ಧಾರ್ಮಿಕ ಹಿನ್ನಲೆಯನ್ನು, ಭೌಗೋಳಿಕ ಪರಿಸರವನ್ನು ಅವಲಂಬಿಸಿ ರೂಪ ಪಡೆದಂತೆ ಕಂಡುಬರುತ್ತದೆ. ಮೊದಲನೆಯ ಅಧ್ಯಾಯದಲ್ಲಿ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ ಒಳಗೊಂಡಿದೆ. ಈ ಅಧ್ಯಯನವು ಪ್ರಸ್ತುತ ದಿನಗಳಲ್ಲಿ ಎಷ್ಟು ಅವಶ್ಯಕ ಎಂಬುವುದರ ಬಗ್ಗೆ ವಿವರಣೆಯನ್ನು ನೀಡಲಾಗಿದೆ ಮತ್ತು ಅಧ್ಯಯನದ ವ್ಯಾಪ್ತಿ ಹಾಗೂ ವಿಧಾನವನ್ನು ಸ್ಪಷ್ಟಪಡಿಸಲಾಗಿದೆ

ಎರಡನೆಯ ಅಧ್ಯಾಯದಲ್ಲಿ ಕಲಾವಿದರಾದ ಪರಶುರಾಮಪ್ಪರವರ ಸಾಂಸ್ಕೃತಿಕ ಪರಿಸರ, ಬಾಲ್ಯ ಜೀವನ ಮತ್ತು ಕೌಟುಂಬಿಕ ಜೀವನ. ಅದರೊಂದಿಗೆ ಈ ಅಧ್ಯಯದಲ್ಲಿ ಕಂಪ್ಲಿಯ ಐತಿಹಾಸಿಕ, ಸಾಮಾಜಿಕ, ಭೌಗೋಳಿಕ ಪರಿಸರ, ಕಲೆ ಮತ್ತು ಸಂಸ್ಕೃತಿ ಹೀಗೆ ವಿವಿಧ ಮುಂತಾದ ವಿವರಣೆಗಳನ್ನು ನೀಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕಲಾವಿದರಾದ ಪರಶುರಾಮಪ್ಪ ರವರ ಕಲಾಕೃತಿಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಅವುಗಳಲ್ಲಿ ಮೊದಲನೆಯದು ಮರ ಕೆತ್ತನೆ ಅದರಲ್ಲಿ ದೇವಾನು-ದೇವತೆಗಳ ಶಿಲ್ಪಗಳು, ಪಲ್ಲಕ್ಕಿಗಳು, ಮುಖವಾಡಗಳು, ಗೊಂಬೆಗಳು ಮುತಾಂದವುಗಳು. ಎರಡನೆದರಲ್ಲಿ ಮಣ್ಣಿನ ಮೂರ್ತಿಗಳು ಅದರಲ್ಲಿ ಮುಖವಾಡಗಳು, ಮೂರನೆಯದು ಭಿತ್ತಿಚಿತ್ರಗಳು ಅದರಲ್ಲಿ ಶುಭಸಮಾರಂಭಗಳಲ್ಲಿ ಮತ್ತು ದೇವಾಲಯಗಳಲ್ಲಿ ಭಿತ್ತಿಚಿತ್ರಗಳನ್ನು ಕಾಣುತ್ತೇವೆ. ನಾಲ್ಕನೇಯದಾಗಿ ಅಲಂಕಾರಿಕ ವಸ್ತುಗಳಲ್ಲಿ ಛತ್ರಿ, ಚಾಮರಗಳು ಹೀಗೆ ಮುಂತಾದಗಳನ್ನು ವರ್ಗಿಕರಣ ಮಾಡಿ ಕೊಂಡು ಉದಾಹರಣೆಗಳೊಂದಿಗೆ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕಲಾವಿದರು ರಚಿಸಿದ ಕಲಾಕೃತಿಗಳ ಮರ ಕೆತ್ತನೆ, ಮಣ್ಣಿನ ಮೂರ್ತಿಗಳು, ಭಿತ್ತಿಚಿತ್ರಗಳು ಮತ್ತು ಅಲಂಕಾರಿಕ ವಸ್ತುಗಳು ಹೀಗೆ ವಿವಿಧ ಮಾಧ್ಯಮಗಳಲ್ಲಿ ರಚಿಸಿದ ಕಲಾಕೃತಿಗಳ ರಚನಾ ವಿಧಾನದಲ್ಲಿ ಬಳಸುವ ಕಚ್ಚಾಸಾಮಾಗ್ರಿಗಳು ಮತ್ತು ಪರಿಕರಗಳು ಹೀಗೆ ಒಟ್ಟು ರಚನೆಯ ವಿವಿಧ ಹಂತಗಳನ್ನು ವಿವರಿಸಲಾಗಿದೆ. ಅದರೊಂದಿಗೆ ಕಲಾಕೃತಿ ರಚನೆಗೆ ಬಳಸಿದ ತಂತ್ರ, ಶೈಲಿ ಮತ್ತು ಕಲಾಕೃತಿ ರಚನೆಗೆ ಕಲಾವಿದರ ಮೇಲೆ ಬೀರಿದ ಪ್ರಭಾವ ಮತ್ತು ಪ್ರೇರಣೆ ಕುರಿತು ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಕಲಾವಿದರಾದ ಪರಶುರಾಮಪ್ಪರವರ ಜೀವನ ಮತ್ತು ಕಲಾಸಾಧನೆ, ಕಲಾಅನುಭವ, ಪ್ರದರ್ಶನಗಳು, ಪ್ರಶಸ್ತಿಗಳು ಮತ್ತು ಕಲಾಸಂಗ್ರಹಣೆಗಳ ಬಗ್ಗೆ ವಿವರಣಾತ್ಮಕವಾಗಿ ವಿವರಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಕಲಾವಿದರಾದ ಪರಶುರಾಮಪ್ಪನವರು ಪ್ರಸ್ತುತ ಸ್ಥಿತಿಗತಿ, ಕರಕುಶಲ ಕಲಾವಿದರಾದಂತಹ ಪರಶುರಾಮಪ್ಪನವರು ಬಾಲ್ಯದಿಂದಲೆ ಬದುಕಿನ ಅನೇಕ ಸಂಕಷ್ಟಗಳ ಮಧ್ಯದಲ್ಲಿಯೆ ಈ ಕಿನ್ನಾಳ ಕಲೆಯನ್ನು ಉಸಿರಾಗಿಸಿಕೊಂಡು ಜೀವನವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರ ಜೀವನ ಚರಿತ್ರೆಯನ್ನು ಗಮನಿಸಿದ್ದಾಗ ಭಾರತ ದೇಶದ ಜನಪದ ಕಲಾವಿದರಿಗೆ ಅಗುತ್ತಿರುವಂತಹ ನೊವು, ನಲಿವುಗಳು ಇವರ ಬದುಕಿನಲ್ಲಿ ಕಂಡುಬರುತ್ತದೆ. ಹೀಗಾಗಿ ಪ್ರಸ್ತುತ ವಾಸ್ಥವ ಬದುಕಿನ ಚಿತ್ರಣವನ್ನು ಇಲ್ಲಿ ಕಟ್ಟಿಕೊಡಲಾಗಿದೆ.

ಏಳನೆಯ ಅಧ್ಯಾಯನವು ಸಮಾರೂಪವಾಗಿದ್ದು ಈ ಮೇಲಿನ ಆರು ಅಧ್ಯಾಯಗಳಿಂದ ಕಂಡುಕೊಂಡಂತಹ ಒಟ್ಟಾರೆ ಸಾರಾಂಶ ಹಾಗೂ ಪ್ರಮುಖ ಫಲಿತಗಳನ್ನು ಈ ಅಧ್ಯಾಯನ ದಲ್ಲಿ ವಿವರಿಸಲಾಗಿದೆ.

ಅಧ್ಯಯನದ ಫಲಿತಗಳು

೧. ಹೊಸಪೇಟೆ ತಾಲೂಕಿನ ಕಂಪ್ಲಿಯ ಹಾಗೂ ಕಲಾವಿದರ ಸಂಸ್ಕತಿ ಹಾಗೂ ಪರಂಪರೆಯು ಈ ಭಾಗದಲ್ಲಿ ಇನ್ನೂ ಜೀವಂತವಾಗಿ ಹೇಗೆ ಬೆಳೆದುಕೊಂಡು ಬಂದಿದೆ ಎಂದು ಹೇಳಲಾಗಿದೆ.

೨. ಕಲಾವಿದ ಪರಶುರಾಮಪ್ಪರವರ ಕರಕುಶಲ ಕಲೆಯ ವಿವಿಧ ಮಾಧ್ಯಮದಲ್ಲಿನ ಕಲಾ ಕೃತಿಗಳನ್ನು ರಚಿಸಿರುವರು, ಅದರಲ್ಲಿ ವಿಭಿನ್ನವಾದ ತಂತ್ರಗಾರಿಕೆಯನ್ನು ಕಾಣಬಹುದಾಗಿದೆ.

೩. ಕಿನ್ನಾಳ ಗ್ರಾಮದಲ್ಲಿ ಕಿನ್ನಾಳ ಕಲೆಯನ್ನು ರಚಿಸುವ ಕಲಾವಿದರಿಗೆ ಹೋಲಿಸಿದಾಗ, ತಂತ್ರ, ಶೈಲಿ ಮತ್ತು ವಸ್ತು ವಿಷಯಗಳಲ್ಲಿ ಅನೇಕ ಬದಲಾವಣೆಗಳನ್ನು ಕಾಣುತ್ತೇವೆ.

೪. ನವರಾತ್ರಿಯ ಸಂಧರ್ಭದಲ್ಲಿ ಪ್ರತಿಷ್ಠಾಪನೆ ಮಾಡುವ ದೇವಿಯ ಮೂರ್ತಿಗೆ ಗಣೇಶನ ಉತ್ಸವದ ವೇದಿಕೆಯಂತೆ ವಿಜ್ರಂಭನೆಯಿಂದ ಸಿದ್ಧಪಡಿಸುತ್ತಾರೆ. ಪ್ರತಿ ನಿತ್ಯವೂ ಒಂಭತ್ತು ದಿವಸಗಳ ಕಾಲ ವಿಭಿನ್ನ ರೀತಿಯಲ್ಲಿ ಅಲಂಕರಿಸುವುದನ್ನು ಕಾಣುತ್ತೇವೆ. ಇದರಲ್ಲಿ ದೇವಿಯ ಅವತಾರಕ್ಕೆ ತಕ್ಕಂತೆ ಅಂಗಾಗಳಲ್ಲಿ ಬದಲಾವಣೆಯನ್ನು ಕಾಣುತ್ತಾರೆ.

೫. ಪರಶುರಾಮಪ್ಪನವರ ಕರಕುಶಲ ವಸ್ತುವಿಷಯ ಒಂದೇಯಾದರೂ ಕೂಡ, ಒಂದು ಕಲಾಕೃತಿಯಿಂದ ಇನ್ನೊಂದು ಕಲಾಕೃತಿಗೆ ರಚನೆಯಲ್ಲಿ ವಿಭಿನ್ನತೆಯನ್ನು ಕಾಣುತ್ತೇವೆ.

೬. ಪ್ರಸ್ತುತ ಸಂಧರ್ಭದಲ್ಲಿ ಈ ಕಿನ್ನಾಳ ಕರಕುಶಲ ಕಲೆಯೊಂದರ ಮೇಲೆ ಜೀವನೋಪಾಯ ನಡೆಸುವುದು ತುಂಬಾ ಕಷ್ಟದಾಯಕವೆಂದು ಕಾಣುತ್ತೇವೆ. ಹೀಗಾಗಿ ಬಹುಶಃ ವಿವಿಧ ರೀತಿಯಲ್ಲಿ ಕಲಾಕೃತಿ ರಚನೆಯಲ್ಲಿ ತೊಡಗಿರಬಹುದು.

೭. ಇಡೀ ಇವರ ಕಲಾ ಬದುಕಿನ ಸಾಧನೆಯನ್ನು ಗಮನಿಸಿದಾಗ ಎಷ್ಟೇ ಕಷ್ಟ-ನಷ್ಟ ಎದುರಾಗುದ್ದರೂ ಕೂಡ ಇದರಿಂದ ಕುಗ್ಗದೆ, ತಮ್ಮ ಪಾರಂಪರಿಕ ಕಲೆಯನ್ನು ಮುಂದುವರೆಸಿಕೊಂಡು ಬಂದಿರುವುದು ಶ್ಲಾಘನೀಯ ಸಂಗತಿ.

೮. ಇವರ ಕಲಾ ಸಾಧನೆ ಮುಖಾಂತರ ದೇಶ-ವಿದೇಶಗಳಲ್ಲಿ ಹೆಸರುವಾಸಿಯಾಗಿದ್ದರೂ, ಅದು ಪ್ರಚಾರಕ್ಕೆ ಮಾತ್ರ ಸೀಮಿತವಾಗಿದೆ ಮತ್ತು ನಿರಂತರ ಸಾಧನೆಯ ಕ್ರಿಯೆಯಲ್ಲಿ ನೆಮ್ಮದಿ ಕಂಡರೂ ಆರ್ಥಿಕ ಬೆಳವಣಿಗೆಯಲ್ಲಿ ಮಾತ್ರ ಅಭಿವೃದ್ಧಿಯಲ್ಲಿ ಕಂಡುಬರುವುದಿಲ್ಲ.

ಹೀಗೆ ಹತ್ತಾರು ಆಯಾಮಗಳಲ್ಲಿ ಈ ಅಧ್ಯಯನವನ್ನು ಕಟ್ಟಿಕೊಡಲಾಗಿದೆ. ಈ ಅಧ್ಯಯನದಿಂದ ಮುಂದಿನ ಸಂಶೋಧಕರಿಗೆ ಹಲವಾರು ಹೊಸ ದಾರಿಗಳೂ ತರೆದುಕೊಳ್ಳುತ್ತವೆ, ಎಂಬ ವಿಶ್ವಾಸವಿದೆ. ಇದು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಕಂಪ್ಲಿಯ ಪ್ರದೇಶಕ್ಕೆ ಮಾತ್ರ ಸೀಮಿತಗೊಳಿಸಿ ಅಧ್ಯಯನ ಮಾಡುವ ಪ್ರಯತ್ನ ಇದಾಗಿದೆ. ಇದೆ ರೀತಿ ನೂರಾರು ಜನ ಕಲಾವಿದರುಗಳ ಸಮಗ್ರವಾದ ಅಧ್ಯಯನದ ಅವಶ್ಯಕತೆ ಇದೆ, ಎಂದು ಹೇಳಬಯಸುತ್ತೇನೆ.

[illegible]

[illegible]

ಅನುಬಂಧಗಳು

ಅನುಬಂಧ : ಒಂದು

ಸಂಕ್ಷೇಪಗಳು

ಕ.ವಿ.ವಿ.ಧಾ	:	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಕ.ವಿ.ವಿ.ಹಂ	:	ಕನ್ನಡ ವಿಶ್ವವಿದ್ಯಾಲಯ ಹಂಪಿ.
ಕ.ಲ.ಅ.ಬೆಂ	:	ಕರ್ನಾಟಕ ಲಲಿತಕಲಾ ಆಕಾಡೆಮಿ ಬೆಂಗಳೂರು.
ಚಿ.ಪ.ಬೆಂ	:	ಚಿತ್ರಕಲಾ ಪರಿಷತ್ ಬೆಂಗಳೂರು.
ಪ್ರ.ಕ.ವಿ.ವಿ	:	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
ಪು	:	ಪುಟ
ಅ.ಪ್ರ	:	ಅಪ್ರಕಟಿತ
ಮ.ಪ್ರ	:	ಮಹಾಪ್ರಬಂಧ
ಸಂ.	:	ಸಂಪಾದಕರು
ಪ್ರ.ಸಂ	:	ಪ್ರಧಾನ ಸಂಪಾದಕರು
ಲೇ	:	ಲೇಖಕರು
ಸಂ.ಪ್ರ	:	ಸಂಪ್ರಬಂಧ
ಕಿ.ಪ್ರ	:	ಕಿರುಪ್ರಬಂಧ

ಅನುಬಂಧ : ಎರಡು

ಗ್ರಂಥ ಋಣ

೧. ಅಶೋಕ ನಡುವಿನಮನಿ, **ಹೈದ್ರಾಬಾದ ಕರ್ನಾಟಕದ ಭಾವಚಿತ್ರ ಕಲಾವಿದರ: ಒಂದು ಅಧ್ಯಯನ,** ಅಪ್ರಕಟಿತ ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಕರೀಗೌಡ ಬೀಚನಹಳ್ಳಿ, **ಕರಕುಶಲ ಕಲೆಗಳು ವಿಶ್ವಕೋಶ ೨,** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಪ್ರಭಾಕರ ಕೆ.ಎಸ್., **ಕಂಪ್ಲಿಯ ಕರಕುಶಲ ಕಲೆ,** ಅಪ್ರಕಟಿತ ಕಿರುಪ್ರಬಂಧ, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ

೪. ಪಾಟೀಲ ಎಸ್.ಸಿ., **ಕರ್ನಾಟಕ ಜನಪದ ಚಿತ್ರಕಲೆ,** ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಮಠ, ಗದಗ-ಡಂಬಳ, ೧೯೯೨

೫. ಪಾಟೀಲ ಎಸ್.ಸಿ., ಮತ್ತು ಸತ್ಯಾನಂದ ಪಾತ್ರೋಟ, ನಿಜದ **ನೆಲೆ(ಡಾ.ಬಿ.ಕೆ.ಹಿರೇಮಠ ಅಭಿನಂದನಾ ಗ್ರಂಥ),** ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ

೬. ಬಸವರಾಜಪ್ಪ ಹೆಚ್.ಇ., **ಬಳ್ಳಾರಿ ಜಿಲ್ಲೆಯ ಚಿತ್ರಕಲೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ರವೀಂದ್ರನಾಥ ಕೆ., **ಅಧ್ಯಯನದ ವಿಧಿ-ವಿಧಾನಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮. ರಾಮಚಂದ್ರ ಚಿತ್ರಗಾರ, **ಚಿತ್ರಗಾರ ಪರಶುರಾಮಪ್ಪ,** ಅಪ್ರಕಟಿತ ಕಿರುಪ್ರಬಂಧ, ಕಲಾಮಂದಿರ, ಬೆಂಗಳೂರು

೯. ರಾಯಕರ್ ಆರ್.ಜಿ., **ಭಾರತೀಯ ಚಿತ್ರಕಲೆ,** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೧೦. ರುದ್ರಪ್ಪ ಬಂಗಿದೊಡ್ಡ ಮಂಜುನಾಥ, ಪರಶುರಾಮಪ್ಪ, **ಚಿತ್ರಗಾರ ಕಲಾವಿದ,** ಭುವನೇಶ್ವರಿ ಪ್ರಕಾಶನ, ಕಂಪ್ಲಿ

೧೧. ಶರಣಪ್ಪ ಪಲ್ಲೇದ, **ಚಿತ್ರಗಾರ ಪರಶುರಾಮಪ್ಪ,** ಅಪ್ರಕಟಿತ ಕಿರುಪ್ರಬಂಧ, ಕಲಾಮಂದಿರ, ಬೆಂಗಳೂರು

೧೨. ಶ್ರೀನಿವಾಸ ಎಲ್., **ಹಂಪಿರ ಪರಸರದ ಆದಿಮಾನವನ ನೆಲೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅನುಬಂಧ : ಮೂರು

ಪರಶುರಾಮಪ್ಪ ಚಿತ್ರಗಾರ ಅವರ ಸಂಕ್ಷಿಪ್ತ ಪರಿಚಯ

ಹೆಸರು	: ಶ್ರೀ ಪರಶುರಾಮಪ್ಪ ಚಿತ್ರಗಾರ
ತಂದೆ	: ಶ್ರೀ ಮೈಲಾರಪ್ಪ ಚಿತ್ರಗಾರ
ತಾಯಿ	: ಶ್ರೀಮತಿ ಕಾಳಮ್ಮ
ಜನ್ಮಸ್ಥಳ, ದಿನಾಂಕ	: ಕಂಪ್ಲಿ ಪಟ್ಟಣ, ೨೩–೦೨–೧೯೩೪, ೭೫ ವರ್ಷ ವಯಸ್ಸು
ಶೈಕ್ಷಣಿಕ ವಿದ್ಯಾರ್ಹತೆ	: ೪ನೇ ತರಗತಿವರೆಗೆ ಮಾತ್ರ
ಲಲಿತಕಲೆ ವಿದ್ಯಾಭ್ಯಾಸ	: ಶ್ರೀ ರಾಮಣ್ಣ ಚಿತ್ರಗಾರ ಹಿರಿಯ ಕಲಾವಿದರ (ಪರಶುರಾಮಪ್ಪನವರ ಮಾವನವರು) ಗರಡಿಯಲ್ಲಿ ವಿದ್ಯಾಭ್ಯಾಸ ಪಡೆದರು.
ಮಾತೃಭಾಷೆ	: ಕನ್ನಡ
ಮಾತನಾಡುವ ಭಾಷೆಗಳು	: ಕನ್ನಡ, ಹಿಂದಿ, ತೆಲುಗು
ಜಾತಿ	: ಚಿತ್ರಗಾರ, ಪ್ರವರ್ಗ–೧
ವಿಳಾಸ	: ಶ್ರೀ ಪರಶುರಾಮಪ್ಪ ಚಿತ್ರಗಾರ ವಿಜಯನಗರ ಜನಪದ ಚಿತ್ರಕಲಾವಿದರು 'ಮಾತೃ ಛಾಯಾ ನಿಲಯ' ವೆಂಕಟೇಶ ರೈಸ್‌ಮಿಲ್ ಎದುರುಗಡೆ, ಬೆಳಗೋಡು ರಸ್ತೆ, ಕಂಪ್ಲಿ ೫೮೩ ೧೩೧ ತಾ.ಹೊಸಪೇಟೆ, ಜಿ.ಬಳ್ಳಾರಿ, ಕರ್ನಾಟಕ.

ಸಹ ಕಲಾವಿದರ ಹೆಸರು: ೧. ಪತ್ನಿ ಶ್ರೀಮತಿ ಸುಮಿತ್ರಮ್ಮ ೬೫ ವರ್ಷ ೨. ತಮ್ಮನಾದ ಶ್ರೀ ರಾಮಕೃಷ್ಣಪ್ಪ ಚಿತ್ರಗಾರ ೬೮ ವರ್ಷ ೩. ತಂಗಿಯಾದ ಶ್ರೀಮತಿ ರಾಮಕ್ಕ ೬೧ ವರ್ಷ ೪. ಮಗ ಶ್ರೀ ರಮೇಶ ಚಿತ್ರಗಾರ ೪೬ ವರ್ಷ ೫. ಮಗ ಶ್ರೀ ರಾಮಚಂದ್ರ ಚಿತ್ರಗಾರ ೩೯ ವರ್ಷ ೬. ಶ್ರೀ ರವಿಕುಮಾರ ಚಿತ್ರಗಾರ ೩೯ ವರ್ಷ ೭. ಮಗ ಶ್ರೀ ರಾಜಾರಾಮ್ ಚಿತ್ರಗಾರ ೩೯ ವರ್ಷ ೮. ತಮ್ಮನ ಮಗನಾದ ಶ್ರೀ ರಾಘವೇಂದ್ರ ಚಿತ್ರಗಾರ ೪೨ ವರ್ಷ ೯. ತಂಗಿಯ ಮಗನಾದ ಶ್ರೀ ಶಿವಕುಮಾರ ಚಿತ್ರಗಾರ ೪೨ ವರ್ಷ

ಕಲಾ ಸಂಗ್ರಹ ನೆಲೆಗಳು: ಹಳ್ಳಿ ಹಳ್ಳಿಗಳಲ್ಲಿಯೂ, ನಗರ ಪಟ್ಟಣದಲ್ಲಿಯೂ ನಮ್ಮ ರಾಜ್ಯದ ಬಳ್ಳಾರಿ ಜಿಲ್ಲೆ, ರಾಯಚೂರು ಜಿಲ್ಲೆ, ಕೊಪ್ಪಳ ಜಿಲ್ಲೆ, ಗದಗ ಜಿಲ್ಲೆಗಳಲ್ಲದೆಯೂ ಆಂಧ್ರದಲ್ಲಿಯೂ ಇವರ ಜಾನಪದ ಕಲೆಗಳನ್ನು ಕಾಣಬಹುದು.

ಪ್ರಶಸ್ತಿ ಪುರಸ್ಕಾರಗಳು

೧. **"ಗುರು ಸೇವಾ ಧುರೀಣ" ಪ್ರಶಸ್ತಿ** ಶ್ರೀ ಗುರು ಕರಿಸಿದ್ಧೇಶ್ವರ ಸಂಸ್ಥಾನ ಮಠ – ಬುಕ್ಕಸಾಗರ ಹೊಸಪೇಟೆ ತಾ॥ ಬಳ್ಳಾರಿ ಜಿ॥ ಸ್ವಾಮಿಗಳ ೨೫ ನೇ ವರ್ಷದ ಪಟ್ಟಾಭೀಷೆಕದ ಸಂದರ್ಭದಲ್ಲಿ ಶ್ರೀಗಳಿಂದ ಸನ್ಮಾನ ಪ್ರಶಸ್ತಿ ೧೨-೦೨-೨೦೦೬.

೨. **"ಕಲಾ ಕೇಸರಿ" ಬಿರುದು.**

ಶ್ರೀದೇವಿ ಮಹಾತ್ಮೆ ಪುರಾಣ ಸಮಿತಿ, ಸಾಂಗತ್ರಯ ಪಾಠಶಾಲೆ, ಕಂಪ್ಲಿ ಇವರು ೦೬-೧೦-೨೦೧೧ ರಂದು ಬಿರುದ ಸನ್ಮಾನದೊಂದಿಗೆ ಪುರಸ್ಕರಿಸಲಾಯಿತು.

೩. **"ಉತ್ತಮ ಕಲಾವಿದ" ಸನ್ಮಾನ**

ಕನ್ನಡ ಹಿತರಕ್ಷಕ ಸಂಘ ಕಂಪ್ಲಿ ಇವರ ಆಶ್ರಯದಲ್ಲಿ ರಾಜ್ಯೋತ್ಸವದ ಉತ್ಸವಕ್ಕೆ ಮಣ್ಣಿನಿಂದ ಶ್ರೀ ಭುವನೇಶ್ವರಿ ದೇವಿ ಮೂರ್ತಿ ಮಾಡಿಕೊಟ್ಟದ್ದಕ್ಕೆ ಅಂದಿನ ಸಮಾರಂಭದ ಮುಖ್ಯ ಅತಥಿಗಳಾದ ಶ್ರೀ ಆರ್.ಸಿ. ಹಿರೇಮಠ ಇವರಿಂದ ಸನ್ಮಾನ.

೪. **"ಉತ್ತಮ ಸಾಂಪ್ರದಾಯಿಕ ಚಿತ್ರಕಲಾವಿದರು"**

ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯ ಹೊಸಪೇಟೆ ತಾ ॥ ಇವರು ಏರ್ಪಡಿಸಿದ್ದ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ದೆ ೨೦೦೦ ದಲ್ಲಿ ಸಾಂಪ್ರದಾಯಿಕ ಕಲೆಯ ವಿಭಾಗದಲ್ಲಿ ಚಿತ್ರವು ಆಯ್ಕೆಯಾಗಿ ಕುಲಪತಿಗಳಿಂದ ನೀಡಲಾದ ಅರ್ಹತಾ ಪತ್ರ ಪಡೆಯಲಾಗಿದೆ.

[illegible]

೫. **ಶ್ರೀ ಸತ್ಯನಾರಾಯಣ ದೇವಸ್ಥಾನ ಕಂಪ್ಲಿ**

ದೇವಸ್ಥಾನದ ರಜತ ಮಹೋತ್ಸವ ಸಂದರ್ಭದಲ್ಲಿ ಮಂತ್ರಾಲಯದ ಗುರುಗಳಿಂದ ಆರ್ಶಿವಾದದೊಂದಿಗೆ ಸನ್ಮಾನ.

೬. **ಶ್ರೀ ಆಂಜನೇಯ ದೇವಸ್ಥಾನ ಕಂಪ್ಲಿ**

ಗಣಪತಿ ರಜತ ಮಹೋತ್ಸವ ಸಂದರ್ಭದಲ್ಲಿ ಮಂತ್ರಾಲಯದ ಗುರುಗಳಿಂದ ಆಶೀರ್ವಾದದೊಂದಿಗೆ ಸನ್ಮಾನ.

೭. **ಶ್ರೀ ವೆಂಕಟೇಶ್ವರ ಸೇವಾಧರ್ಮನಿಧಿ (ರಿ)** ಮತ್ತು ದೇವಸ್ಥಾನ ಕಂಪ್ಲಿ ದೇವಸ್ಥಾನದ ಸಂದರ್ಭದಲ್ಲಿ ಶ್ರೀ ಜಗದ್ಗುರು ಶೃಂಗೇರಿ ಮಹಾಸಂಸ್ಥಾನದ ಪೀಠಾಸ್ಥರಾದ ಶ್ರೀಶ್ರೀಶ್ರೀ ಸಚ್ಚಿದಾನಂದ ವಾಲುಕೇಶ್ವರ ಭಾರತೀ ಸ್ವಾಮಿಗಳಿಂದ ಆಶೀರ್ವಾದ ಪತ್ರದೊಂದಿಗೆ ಸನ್ಮಾನಿಸಲಾಯಿತು.

೮. **ಶ್ರೀ ಬನ್ನಿ ಮಹಾಕಾಳಿ ದೇವಸ್ಥಾನ** ಕಂಪ್ಲಿ ತೇರಿಗೆ ವರ್ಣಾಲಂಕಾರ ಹಾಗೂ ದೇವರ ಚಿತ್ರಗಳನ್ನು ಬರೆದು ಶೃಂಗರಿಸಿದ್ದಕ್ಕೆ ಧರ್ಮಕರ್ತರಾದ ಶ್ರೀ ಸುಬ್ಬಯ್ಯ ಶ್ರೇಷ್ಠಿ ಇವರಿಂದ ಸನ್ಮಾನಿತರಾದರು.

೯. **ದೇವಾಂಗ ಸಮಾಜ ಕಂಪ್ಲಿ** ಶ್ರೀ ಹಂಪಿ ಹೇಮಕೂಟದ ಸ್ವಾಮೀಜಿ ಶ್ರೀಶ್ರೀಶ್ರೀ ದಯಾನಂದಪುರಿ ಸ್ವಾಮಿಗಳ ಅಡ್ಡ ಪಲ್ಲಕ್ಕಿ ಉತ್ಸವಕ್ಕೆ ಪುಷ್ಪಗಳಿಂದ ಅಲಂಕಾರ ಮಾಡಿದಕ್ಕಾಗಿ ಶ್ರೀ ಗಳಿಂದ ಸನ್ಮಾನ.

೧೦. **ಕಂಪ್ಲಿಯ ಶ್ರೀ ಸಾಂಗತ್ರಯ ಸಂಸ್ಕೃತ ಪಾಠಶಾಲೆಯ** ಜ್ಞಾನ ಗಂಗೋತ್ರಿ ಕಲ್ಯಾಣ ಮಂಟಪದ ವರ್ಣಾಲಂಕಾರ ಗೋಪುರ ನಿರ್ಮಾಣದ ಸಲಹೆ ನೀಡಿದ್ದು ಸಮಾರಂಭದಲ್ಲಿ ಶ್ರೀಗುರು ಕರಿಸಿದ್ಧೇಶ್ವರ ಸ್ವಾಮಿಗಳ ಸನ್ಮಾನಿತರಾಗಿದ್ದಾರೆ.

೧೧. ೨೦೦೪ ರಲ್ಲಿ ಕಲ್ಮಠ – ಕಂಪ್ಲಿಯ ಪೂಜ್ಯ ಶ್ರೀ ಗುರುಸಿದ್ದ ಮರಿದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವದಲ್ಲಿ ಶ್ರೀಗಳ ತುಲಾಭಾರದ ಸಿದ್ದತೆ ಮತ್ತು ಪುಷ್ಪಗಳಿಂದ ಅಲಂಕಾರಗೊಳಿಸಿದ ಸಂದರ್ಭದಲ್ಲಿ ಶ್ರೀಗಳಿಂದ ಸನ್ಮಾನ.

೧೨. **"ಹಿರಿಯ ಕಲಾವಿದ"**ರೆಂದು ಗೌರವ ಸನ್ಮಾನ. ಬೆಳ್ಳಕ್ಕ ಬಳಗ ಕಲಾವೃಂದ (ರಿ) ಹೊಸಪೇಟೆ ಬಳ್ಳಾರಿ ಜಿ॥ ಆಧ್ಯಾತ್ಮಿಕ ಮತ್ತು ಧಾರ್ಮಿಕ ಸಮ್ಮೇಳನ–೨೦೧೧ ಹೇರೂರು ಗಂಗಾವತಿ ತಾ॥ ದಲ್ಲಿ ಸನ್ಮಾನ.

೧೩. ೨೦೧೧ **ಮದರ್ ತೆರೆಸಾ ಗ್ರಾಮೀಣಾಭಿವೃದ್ಧಿ ಸಂಸ್ಥೆ** ಹೇರೂರು ಮತ್ತು ಶ್ರೀ ಗವಿಸಿದ್ದೇಶ್ವರ ಪ್ರಸನ್ನ ಕೇಬಲ್ ನೆಟ್ ಗಂಗಾವತಿ ಇವರ ಸಂಯುಕ್ತಾಶ್ರಯದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಸಮ್ಮಿಲನ ಕಾರ್ಯಕ್ರಮ ಗಂಗಾವತಿಯಲ್ಲಿ ಸನ್ಮಾನ.

೧೪. ೨೦೧೧ **ಸೋಮವಂಶ ಆರ್ಯಕ್ಷತ್ರಿಯ ಸಮಾಜ** (ರಿ) ರಾಯಚೂರ ಸಾಂಸ್ಕೃತಿಕ ಸೌರಭ– ೨೦೧೧ ರಲ್ಲಿ ಹಿರಿಯ ಕಲಾವಿದರೆಂದು ಸನ್ಮಾನ.

೧೫. ಪ್ರಶಸ್ತಿ ಪತ್ರ : ಡಿಸೆಂಬರ್ ೯, ೧೦ ಮತ್ತು ೧೧, ೨೦೧೧ **೭೮ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ** ಗಂಗಾವತಿ ಕೊಪ್ಪಳ ಜಿಲ್ಲೆಯಲ್ಲಿ ಚಿತ್ರಕಲಾ ಪ್ರದರ್ಶನ.

೧೬. **ಅಭಿನಂದನಾ ಪತ್ರ**– ಸನ್ಮಾನ : ೨೦೧೧ ಬಳ್ಳಾರಿ ಜಿಲ್ಲಾ ೧೫ ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಾನಪದ ಚಿತ್ರಕಲಾ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆಯನ್ನು ಪರಿಗಣಿಸಿ ಅಭಿಯಾನ ಪೂರ್ವಕವಾಗಿ ಸನ್ಮಾನ.

೧೭. **ಚಿತ್ರಕಲಾ ಸೇವಾ ಭಾರ್ಗವ ಪ್ರಶಸ್ತಿ**– ೨೦೧೨ ಸಂಗೀತ ಭಾರತಿ–ಅತ್ಯುತ್ತಮ ಸಂಘಟನಾ ಪ್ರಶಸ್ತಿ ಪುರಸ್ಕೃತ ಸಾಮಾಜಿಕ ಸೇವಾ ಸಂಸ್ಥೆ ಹೊಸಪೇಟೆ ಚಿತ್ತವಾಡಿಗಿ ಇವರು ೧೨೬ ನೇ ಮಾಸಿಕ ಚಿಂತನ ಸಮಾರಂಭದಲ್ಲಿ ಬಿರುದು ಸನ್ಮಾನದೊಂದಿಗೆ ಗೌರವಿಸಲಾಯಿತು. ೨೬–೦೨–೨೦೧೨.

೧೮. "ಸಾಧನೆಯ ಕಲಾವಿದರೆಂದು ಗೌರವ ಸನ್ಮಾನ : ೦೧–೦೪–೨೦೧೨ ಡಾ ॥ ಶ್ರೀ ಮ.ನಿ.ಪ್ರ ಶಿವಕುಮಾರ ಮಹಾಸ್ವಾಮಿಗಳು ೧೦೫ ನೇ ಹುಟ್ಟುಹಬ್ಬ ಸಂಭ್ರಮ ಹಾಗೂ ಗುರುವಂದನಾ ಕಾರ್ಯಕ್ರಮ ಶ್ರೀ ಸಾಂಗತ್ರಯ ಸಂಸ್ಕೃತ ಪಾಠಶಾಲೆ ಕಂಪ್ಲಿ ಸನ್ಮಾನಿಸಿ ಗೌರವಿಸಲಾಯಿತು.

೧೯. **"ನಿಮಿಷಾಂಬ ಶ್ರೀ" ಪ್ರಶಸ್ತಿ** : ೦೧–೦೫–೨೦೧೨ ಸೋಮವಂಶ ಆರ್ಯಕ್ಷತ್ರಿಯ (ಚಿತ್ರಗಾರ) ಸಮಾಜ ಕಂಪ್ಲಿ ಹೊಸಪೇಟೆ ತಾ॥ ಬಳ್ಳಾರಿ ಜಿ॥ ಶ್ರೀ ನಿಮಿಷಾಂಭಾದೇವಿಯ ೨೬ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಕಲಾಸೇವೆಯನ್ನು ಗುರುತಿಸಿ ಬಿರುದು ಸನ್ಮಾನದೊಂದಿಗೆ ಗೌರವಿಸಲಾಯಿತು.

೨೦. **ಪ್ರಶಸ್ತಿ ಪತ್ರ** : ೧೬–೧೦–೨೦೧೨ ರಿಂದ ೧೩–೦೧–೨೦೧೩ ವಿಶ್ವವಿಖ್ಯಾತ ಮೈಸೂರು ದಸರಾ ವಸ್ತು ಪ್ರದರ್ಶನ ಲಲಿತಕಲೆ ಮತ್ತು ಕರಕುಶಲಕಲೆ ವಿಭಾಗದಲ್ಲಿ ಪರಶುರಾಮಪ್ಪ ಚಿತ್ರಗಾರ ಭಾಗವಹಿಸಿದ ಕಲಾವಿದರು.

೨೧. **ಸಾಧನೆ ಪರಿಗಣಿಸಿ ಸನ್ಮಾನ** : ೦೯-೦೫-೨೦೧೪ ಸೋಮವಂಶ ಆರ್ಯಕ್ಷತ್ರಿಯ ಸೇವಾ ಸಂಘ ಬೆಂಗಳೂರು ಶ್ರೀ ನಿಮಿಶಾಂಬಾ ದೇವಿಯ ಪ್ರತಿಮೆಯನ್ನು ಪ್ರದರ್ಶಿಸಿದ್ದಕ್ಕಾಗಿ ಸನ್ಮಾನಿಸಿ ಗೌರವಿಸಲಾಗಿದೆ.

೨೨. **ಕರ್ನಾಟಕ ರಕ್ಷಣಾ ವೇದಿಕೆ ಕಂಪ್ಲಿ** ೦೧-೧೧-೨೦೧೫(ಕನ್ನಡ ಪರ ಸಂಘಟನೆಗಳ ಒಕ್ಕೂಟ ಶಿವರಾಮೇಗೌಡ ಬಣ) ೬೦ ಕನ್ನಡ ರಾಜ್ಯೋತ್ಸವದಲ್ಲಿ ಚಿತ್ರಕಲಾವಿದರೆಂದು ಗುರುತಿಸಿ ಸನ್ಮಾನಿಸಲಾಯಿತು.

೨೩. **ಕಂಪ್ಲಿ ಪೇಟೆ ಬಸವಶ್ರೀ ಪ್ರಶಸ್ತಿ** : ೨೦-೧೨-೨೦೧೫ ಶ್ರೀ ಪೇಟೆ ಬಸವೇಶ್ವರ ದೇವಸ್ಥಾನ ಆಡಳಿತ ಮಂಡಳಿ ಕಂಪ್ಲಿಯವರ ಒಮ್ಮತದಿಂದ ಪರಶುರಾಮಪ್ಪ ಚಿತ್ರಗಾರ ಇವರಿಗೆ ಸಕಲ ಗೌರವಗಳೊಂದಿಗೆ ಸತ್ಕರಿಸಿ ಸನ್ಮಾನಿಸಿ " ಕಂಪ್ಲಿ ಪೇಟೆ ಬಸವಶ್ರೀ" ಪ್ರಶಸ್ತಿಯನ್ನು ನೀಡಿ ಅಭಿನಂದಿಸಲಾಯಿತು.

೨೪. **"ಅನರ್ಘ ರತ್ನ" ಪ್ರಶಸ್ತಿ ಪ್ರಧಾನ** : ೧೭-೦೨-೨೦೧೫ ಶ್ರೀ ಗುರು ದೊಡ್ಡ ಬಸವೇಶ್ವರ ಫೌಂಡೇಶನ್ (ರಿ) ಪುಣ್ಯಕ್ಷೇತ್ರ ನಂದಿಪುರ ಹಗರಿಬೊಮ್ಮನಹಳ್ಳಿ ತಾ॥ ಬಳ್ಳಾರಿ ಜಿ॥ ಇವರು ಶ್ರೀ ಪರಶುರಾಮಪ್ಪ ಚಿತ್ರಗಾರ ಇವರಿಗೆ ಸಕಲ ಗೌರವಗಳೊಂದಿಗೆ ಸತ್ಕರಿಸಿ ಸನ್ಮಾನಿಸಿ "ಅನರ್ಘ್ಯ ರತ್ನ" ಪ್ರಶಸ್ತಿಯನ್ನು ನೀಡಿ ಅಭಿನಂದಿಸಲಾಯಿತು.

೨೫. ೧೯-೧೫-೨೦೧೬ ಕಂಪ್ಲಿ ಪಟ್ಟಣದ ಶ್ರೀ ಕ್ಷೇತ್ರ ಕಲ್ಮಠದ ಮಹಾತಪಸ್ವಿ ಲಿ॥ ಶ್ರೀ ಮ.ನಿ.ಪ್ರ ಹಿರಿಯ ಪ್ರಭುಸ್ವಾಮಿಗಳವರ ೬೪ನೇ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಚಿತ್ರಗಾರ ಪರಶುರಾಮಪ್ಪ ಶಿಲ್ಪಿಗಳು ಹಾಗೂ ಸಮಾಜ ಸೇವಾ ಕಾರ್ಯಕರ್ತರು ಎಂದು ಸನ್ಮಾನಿಸಿ ಆಶೀರ್ವದಿಸಿದರು.

೨೬. **"ಕನ್ನಡ ಶಿಖಾಮಣಿ" ಪ್ರಶಸ್ತಿ** : ೨೬-೧೧-೨೦೧೭ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ) ಕೊಪ್ಪಳ ಜಿಲ್ಲಾ ಘಟಕ ಗಂಗಾವತಿ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕಾರ್ಯಕ್ರಮದಲ್ಲಿ ಕಂಪ್ಲಿಯ ವಿಜಯನಗರ ಜನಪದ ಚಿತ್ರಕಲಾವಿದರಾದ ಶ್ರೀ ಪರಶುರಾಮಪ್ಪ ಚಿತ್ರಗಾರ ಇವರ ಜೀವಮಾನ ಸಾಧನೆಯನ್ನು ಕಂಡು ಪ್ರಶಸ್ತಿ ನೀಡಿದ ಸಂದರ್ಭ.

೨೭.**"ಹುಲಿಕುಂಟೆಶ್ರೀ' ಪ್ರಶಸ್ತಿ** : ೨೪-೧೨-೨೦೧೮ ಶ್ರೀ ಹುಲಿಕುಂಟೆರಾಯ ತೊಗಲುಗೊಂಬೆ ಕಲಾ ತಂಡ (ರಿ) ಬಳ್ಳಾರಿ ಇವರು ಜಾನಪದ ಚಿತ್ರಕಲಾ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಪರಿಗಣಿಸಿ ಶ್ರೀ ಪರಶುರಾಮಪ್ಪ ಚಿತ್ರಗಾರ ವಿಜಯನಗರ ಜಾನಪದ ಚಿತ್ರಕಲಾವಿದರು ಕಂಪ್ಲಿ ಇವರನ್ನು ಬಳ್ಳಾರಿಯ ಡಾ॥ ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಶ್ರೀಯುತರಿಗೆ ಪ್ರಶಸ್ತಿ ನೀಡಿ ಸನ್ಮಾನದೊಂದಿಗೆ ಗೌರವಿಸಲಾಯಿತು.

ಕಲಾ ಪ್ರದರ್ಶನಗಳು

೧. ೨೦೦೦ದಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಹಂಪಿ ವಿದ್ಯಾರಣ್ಯ ಹೊಸಪೇಟೆ ತಾ॥ ಬಳ್ಳಾರಿ ಜಿ॥ ಇವರು ಏರ್ಪಡಿಸಿದ್ದ, ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ದೆಯಲ್ಲಿ ಇವರು ರಚಿಸಿದ ಚಿತ್ರ ಪ್ರದರ್ಶನಗೊಂಡಿತು.

೨. ೨೦೧೧ರಲ್ಲಿ ಕೊಪ್ಪಳ ಜಿಲ್ಲಾ ಗಂಗಾವತಿಯಲ್ಲಿ ೭೮ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರ ಚಿತ್ರಕಲೆಗಳು, ವೀಶೆಷವಾಗಿ ಹುಲಿ, ಆನೆಯ ಮುಖವಾಡಗಳು ಪ್ರದರ್ಶನಗೊಂಡವು.

೩. ೧೬-೧೦-೨೦೧೨ರಿಂದ ೧೩-೦೧-೨೦೧೩ರಲ್ಲಿ ವಿಶ್ವವಿಖ್ಯಾತ ಮೈಸೂರು ದಸರಾ ವಸ್ತು ಪ್ರದರ್ಶನ ಲಲಿತಕಲೆ ಮತ್ತು ಕರಕುಶಲ ವಿಭಾಗದಲ್ಲಿ ಪರಶುರಾಮಪ್ಪ ಚಿತ್ರಗಾರ ಇವರ ಕಟ್ಟಿಗೆ ಮೂರ್ತಿ ಆಯ್ಕೆಯಾಗಿ ಪ್ರದರ್ಶನಗೊಂಡಿತು.

೪. ೧೫-೧೬-೨೦೧೪ರಲ್ಲಿ ೧೭ನೇ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಕಂಪ್ಲಿಯಲ್ಲಿ ಪರಶುರಾಮಪ್ಪ ಚಿತ್ರಗಾರ ಇವರು ರಚಿಸಿದ ಚಿತ್ರಗಳು ಹುಲಿ, ಆನೆಯ ಮುಖವಾಡಗಳು ದೇವಿಯ ಮೂರ್ತಿಗಳು ಪ್ರದರ್ಶನಗೊಂಡಿವೆ.

೫. ೧೮-೧೯-೨೦೧೪ ರಲ್ಲಿ ಡಿಜಿಟಲ್ ಹಂಪಿ ವರ್ಕ್‌ಶಾಪ್ & ಎಕ್ಸಿಬಿಷನ್ ಇಂಡಿಯಾ ಹೆಬಿಟ್ಯೆಟ್ ಸೆಂಟರ, ಹೊಸ ದೆಹಲಿಯಲ್ಲಿ ಪರಶುರಾಮಪ್ಪ ಚಿತ್ರಗಾರ ಇವರ ಕರಕುಶಲ ಕಲೆಗಳು ಪ್ರದರ್ಶನಗೊಂಡಿವೆ.

ಪರಶುರಾಮಪ್ಪ ನವರ ಕಲಾಕೇಂದ್ರಕ್ಕೆ ಭೇಟನೀಡಿರುವ ಪ್ರಮುಖ ಸಂಶೋಧಕರು ಮತ್ತು ಗಣ್ಯಮಾನ್ಯರು.

೧. ೨೦೦೦ರಲ್ಲಿ ಶ್ರೀಮತಿ ಡಾ. ಎಸ್.ಎನ್. ಸಾವಿತ್ರಿಯವರು "ಕಂಪ್ಲಿ ಜಾನಪದ ಒಂದು ಅಧ್ಯಯನ" ಎಂಬ ಶೀರ್ಷಿಕೆಯಲ್ಲಿ ಕಂಪ್ಲಿಯ ಜಾನಪದ ಕಲೆಗಾರರಾದ ಪರಶುರಾಮಪ್ಪ ಚಿತ್ರಗಾರ ಇವರನ್ನು ಗುರುತಿಸಿ ಹೆಮ್ಮೆಯಿಂದ ಉಲ್ಲೇಖಿಸಿದ್ದಾರೆ.

೨. ೨೦೧೧ ರಲ್ಲಿ ಶ್ರೀ ಡಾ. ಚಲುವರಾಜ, ಸಹ ಪ್ರಾಧ್ಯಾಪಕರು ಬುಡಕಟ್ಟು ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ಪರಶುರಾಮಪ್ಪನವರ ಕಲೆಯ ಅಧ್ಯಯನ ಕುರಿತು ಭೇಟಿ ನೀಡಿದ್ದರು.

೩. ಜೂನ್ ೧೭ರಂದು ೨೦೧೮ ರಲ್ಲಿ ಅಮೇರಿಕಾದ ಕ್ಯಾಲಿಫೋರ್ನಿಯಾದ ಯಾಲೆ ವಿವಿಯ ಇತಿಹಾಸ ಮತ್ತು ಸಂಸ್ಕೃತಿ ವಿಭಾಗದ ಉಪನ್ಯಾಸಕರು, ಪ್ರೊ ಡಾ ಕರೆನ್

ಫೇಸ್, ಅನಿಮೇಶನ್ ಮತ್ತು ಡಿಸೈನ ವಿಭಾಗದ ಉಪನ್ಯಾಸಕಿ ಮೆಘನಾ ಮತ್ತು ವಿಧ್ಯಾರ್ಥಿಗಳು ಬೇಟಿ ನೀಡಿ, ಇವರ ಜೊತೆಯಲ್ಲಿ ಬೆಂಗಳೂರು ಜನಸ್ತೋಮ ಸಂಘಟನೆಯ ಟ.ಬಿ.ದಿನೇಶ, ಹಂಪಿ ಕನ್ನಡ ಪಿಶ್ವಪಿದ್ಯಾಲಯದ ಪ್ರೊ. ಚಲುವರಾಜು, ಉಪನ್ಯಾಸಕಿ ನಾಗಪುಷ್ಪ, ಲತಾ ವಿಜಯನಗರ ಜನಪದ ಚಿತ್ರಕಲಾವಿದ ಪರಶುರಾಮಪ್ಪ ಚಿತ್ರಗಾರ ಇವರ ನಿವಾಸಕ್ಕೆ ಕ್ಷೇತ್ರ ಅಧ್ಯಯನ ನಿಮಿತ್ತ ಆಗಮಿಸಿದ್ದರು.

೪. ದಿ. ೦೮.೦೭.೨೦೧೮ರಂದು ಪ್ರೊಪೆಸರ್ ಕರಣ್‌ಸಿಂಗ್, ಯು ತೊರ್ರ್ಯಾಂಟೊ– ಕೆನಡಾ ಮತ್ತು ಗೀತಿಕಾ ಶರ್ಮಾ, ಚೇಫ್ ಟೆಕ್ನಿಕಲ್ ಆಫಿಸರ್, ವಿಜಾರಾ ಕಂಪನಿ, ದೆಹಲಿ. ಇವರು ಕಲಾವಿದರ ಕಲಾಕೇಂದ್ರವನ್ನು ವೀಕ್ಷಿಸಿ, ಚರ್ಚಿಸಿದರು.

೫. "ದಯಾನಂದ ಸಾಗರ ಕಾಲೇಜ್ ಆಫ್ ಆರ್ಕಿಟೆಕ್ಚರ್, ಬೆಂಗಳೂರು". ಪ್ರೊಫೆಸರ್ ಅಪರ್ಣ ಶಾಸ್ತ್ರಿ, ಸಂಧ್ಯಾರಾವ್, ಲಕ್ಷ್ಮೀ ಕ್ರಿಷ್ಣಸ್ವಾಮಿ ಮತ್ತು ವಿದ್ಯಾರ್ಥಿಗಳು ಈ ಸಾಂಪ್ರದಾಯಿಕ ಕಲೆಯ ಅಧ್ಯಯನ ಕುರಿತು ಚಿತ್ರಕಲಾವಿದ ಪರಶುರಾಮಪ್ಪ ಚಿತ್ರಗಾರ ಇವರ ನಿವಾಸಕ್ಕೆ ದಿ॥ ೨೬–೦೭–೨೦೧೮ರಂದು ಮಧ್ಯಾಹ್ನ ೩ ಗಂಟೆಗೆ ಭೇಟಿ ನೀಡಿದರು.

ದೂರದರ್ಶನದಲ್ಲಿ ಸಂದರ್ಶನ

೧. ದಿನಾಂಕ ೧೦–೦೯–೨೦೧೨ ರಂದು ಬೆಳಗ್ಗೆ ೭ ಗಂಟೆಗೆ ಟಿ.ವಿ. ೯ ದೂರದರ್ಶನ ಮಾಧ್ಯಮದಲ್ಲಿ ಕಲೆಯ ಸಾಧನೆ ಕುರಿತು ಕಲಾವಿದರ ಸಂದರ್ಶನವು ಸುಪ್ರಭಾತ ಸುಪರ್‌ಫಾಸ್ಟ ಕಾರ್ಯಕ್ರಮದಲ್ಲಿ ಪ್ರಸಾರ ಮಾಡಲಾಯಿತು.

೨. "ಚಂದನ" ದೂರದರ್ಶನದಲ್ಲಿ ದಿನಾಂಕ ೧೧–೦೨–೨೦೧೩ ರಂದು ಬೆಳಗ್ಗೆ ೭ ಗಂಟೆಗೆ ಬೆಳಗು ಕಾರ್ಯಕ್ರಮದಲ್ಲಿ ಕಲಾ ಸಾಧನೆ ಕುರಿತು ನೇರ ಸಂದರ್ಶನ ಮತ್ತು ಪ್ರಸಾರವನ್ನು ಸಹ ಮಾಡಲಾಯಿತು.

೩. "ಹೊಸಪೇಟೆ ಆಕಾಶವಾಣಿ" ಯಲ್ಲಿ ದಿನಾಂಕ ೨೫–೦೫–೨೦೧೭ ರಂದು ಬೆಳಗ್ಗೆ ೧೧ ಗಂಟೆಗೆ ಕಂಪ್ಲಿಯ ಜನಪದ ಚಿತ್ರಕಲಾವಿದ ಹಾಗೂ ಗೊಂಬೆ ತಯಾರಿಕೆಯ ಚಿತ್ರಗಾರ ಪರಶುರಾಮಪ್ಪ ದಂಪತಿಯನ್ನು ಸಂದರ್ಶನ ನಡೆಸಲಾಯಿತು ಮತ್ತು ಪ್ರಸಾರವನ್ನು ಸಹ ಮಾಡಲಾಯಿತು.

ಪ್ರಶಂಸನೀಯ ಪತ್ರ ನೀಡಿ ಗೌರವಿಸಿದ ಸಂಘ ಸಂಸ್ಥೆಗಳು

೧. ಪುರಸಭೆ ಕಾರ್ಯಾಲಯ ಕಂಪ್ಲಿ–ಹೊಸಪೇಟೆ ತಾ॥ ಸ್ಥಳೀಯ ಕಲಾವಿದ ಎಂದು ದೃಢೀಕರಣ ಪತ್ರ ನೀಡಿದೆ. ೨೦–೦೮–೨೦೦೫

೨. ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಘಟಕ ಕಂಪ್ಲಿ "ಬಹುಮುಖ ಪ್ರತಿಭೆಯ ಕಲಾವಿದ" ಎಂದು ಅಭಿನಂದಿಸಿದ್ದಾರೆ.

೩. ಕನ್ನಡ ಹಿತರಕ್ಷಕ ಸಂಘ ಕಂಪ್ಲಿ ಹೊಸಪೇಟೆ ತಾ॥ ಬಳ್ಳಾರಿ ಜಿ॥ ನಮ್ಮೂರಿನ ಸ್ಥಳಿಯ ಕಲಾವಿದರನ್ನು ರಾಜ್ಯ ಸರ್ಕಾರ ಗುರುತಿಸುವಂತಾಗಲಿ ಎಂದು ಅಭಿನಂದನಾ ಪತ್ರ.

೪. ಶ್ರೀ ಆರ್ಯ ವೇಶ್ಯ ಸಂಘ ಕಂಪ್ಲಿ ಹೊಸಪೇಟೆ ತಾ॥ ಕಲಾ ನೈಪುಣ್ಯತೆಯ ಕಲಾವಿದ ಪರಶುರಾಮಪ್ಪ ಚಿತ್ರಗಾರ ನಮ್ಮೂರಿಗೆ ದೊರೆತಿರುವುದು ಭಾಗ್ಯ.

೫. ದೇವಾಂಗ ಸಮಾಜದ ಕಂಪ್ಲಿ ಹೊಸಪೇಟೆ ತಾ॥ ನಮ್ಮ ಜಿಲ್ಲೆಯ ಹೆಸರಾಂತ ಬಹುಮುಖ ಕಲಾಪ್ರತಿಭೆಯ ಕಲಾವಿದ

೬. ಶ್ರೀ ತುರುಮಂದಿ ಬಸವೇಶ್ವರ ದೇವಸ್ಥಾನದ ವ್ಯವಸ್ಥಾಪದ ಸಮಿತಿ ರಾಮಸಾಗರ ಹೊಸಪೇಟೆ ತಾ॥ ಇವರ ಕಲೆಯನ್ನು ಗುರುತಿಸಿ ಅಭಿನಂದಿಸಿದ್ದಾರೆ.

೭. ಗ್ರಾಮ ಪಂಚಾಯತಿ ಕಾರ್ಯಾಲಯ ರಾಮಸಾಗರ ಹೊಸಪೇಟೆ ತಾ ॥ ಇವರು ನಡೆಸಿಕೊಂಡು ಬರುತ್ತಿರುವ ಕಲಾ ರೂಪಗಳನ್ನು ನೋಡಿ ಉತ್ತಮ ಕಲಾವಿದರೆಂದು ಶುಭಹಾರೈಸಿದ್ದಾರೆ.

೮. ಶ್ರೀ ಪೇಟೆ ಬಸವೇಶ್ವರ ದೇವಸ್ಥಾನ ಕಂಪ್ಲಿ ಹೊಸಪೇಟೆ ತಾ॥ ಕಲಾ ನೈಪುಣ್ಯತೆಯ ಕಲಾವಿದ ಪರಶುರಾಮಪ್ಪ ಚಿತ್ರಗಾರ ನಮ್ಮುರಿಗೆ ದೊರೆತಿರುವುದು ಭಾಗ್ಯ.

ಕರ್ನಾಟಕ ಸರ್ಕಾರದಿಂದ ಮಾಸಾಶನ ಮಂಜೂರಿ

'ಕಲಾ' ನಿದರ್ಶನಗಳನ್ನು ಪರೀಶಿಲಿಸಿ ನಮ್ಮ ಘನ ಸರ್ಕಾರವು ಸೆಪ್ಟಂಬರ್ ೨೦೦೭ ರಲ್ಲಿ ಪ್ರತಿ ತಿಂಗಳಿಗೆ ೫೦೦ ರೂ. ೧೦೦೦ ರೂ. ಮತ್ತು ೧೫೦೦ ರೂ ಗಳ ಮಾಸಾಶನ ಮಂಜೂರಿಯಾಗಿದೆ.

ಹ್ಯಾಂಡಿ ಕ್ರ್ಯಾಫ್ಟ್ ಸಂಸ್ಥೆ ಮಂಗಳೂರು

೨೦೧೦ ರಲ್ಲಿ ಗವರ್ನಮೆಂಟ್ ಆಫ್ ಇಂಡಿಯಾ ಮಿನಿಸ್ಟರ್ ಆಫ್ ಟೆಕ್ಸ್‌ಟೈಲ್ಸ್. ಹ್ಯಾಂಡಿಕ್ರ್ಯಾಫ್ಟ ಮಾರ್ಕೆಟಿಂಗ್ ಮತ್ತು ಸರ್ವಿಸ್ ಎಕ್ಸ್‌ಟೆನ್ಸ್ಯಿನ್ ಸೆಂಟರ್ ಮಂಗಳೂರು–೫೭೫೦೦೧ ಇವರು ಭೇಟಿ ನೀಡಿ ಕರಕುಶಲ ಕ್ಯಾಂಪ್ ಸಂಡೂರುನಲ್ಲಿ ಭಾಗವಹಿಸಲು ಸೂಚಿಸಲಾಯಿತು.

ದಿನಪತ್ರಿಕೆಗಳಲ್ಲಿ ಪ್ರಕಟಿತ ಲೇಖನಗಳು

೧. **"ವಿಜಯ ಕರ್ನಾಟಕ"** :೨೭-೧೨-೨೦೦೧ ಪೇಟೆಬಸವೇಶ್ವರ ಜೋಡು ರಥೋತ್ಸವ ಎಂಬ ವರದಿಯಲ್ಲಿ ಸ್ಥಳೀಯ ಕಲಾವಿದ ಚಿತ್ರಗಾರ ಪರಶುರಾಮಪ್ಪ. ಪತ್ರಕರ್ತರು : ಕರಿ ವಿರುಪಾಕ್ಷಿ ಕಂಪ್ಲಿ.

೨. **"ಪ್ರಜಾವಾಣಿ"** : ೧೭-೧೦-೨೦೦೪ ಕಂಪ್ಲಿ: ದಸರಾ ಉತ್ಸವ ಆರಂಭ ಎಂಬ ವರದಿಯಲ್ಲಿ ೩೫ ವರ್ಷಗಳಿಂದ ಸ್ಥಳೀಯ ಹೆಸರಾಂತ ಕಲಾವಿದ ಚಿತ್ರಗಾರ ಪರಶುರಾಮಪ್ಪ. ಪತ್ರಕರ್ತರು: ಪಂಡಿತಾರಾಧ್ಯ. ಕಂಪ್ಲಿ

೩. **"ಉಷಾಕಿರಣ"**: ೨೩-೦೮-೨೦೦೬ ಎಲ್ಲ ದೇವರನ್ನು ಸೃಷ್ಟಿಸುವ ಪರಶುರಾಮಪ್ಪ ಬಹುಮುಖಿ ಪ್ರತಿಭೆ. ಪತ್ರಕರ್ತ: ಬಿ. ಮಂಜುನಾಥ

೪. **"ಪ್ರಜಾವಾಣಿ" ೨೪-೦೯-೨೦೦೬**

ನವರಾತ್ರಿ ಉತ್ಸವ ಆರಂಭ ವರದಿಯಲ್ಲಿ ಇವರ ಬಗ್ಗೆ ಪ್ರಕಟ ಪತ್ರಕರ್ತರು : ಪಂಡಿತಾರಾಧ್ಯ. ಕಂಪ್ಲಿ

೫. **"ಸಂಯುಕ್ತ ಕರ್ನಾಟಕ": ೨೮-೦೯-೨೦೦೬**

ವೈಭವದ ನವರಾತ್ರಿ ಉತ್ಸವಕ್ಕೆ ಚಾಲನೆ ಎಂಬ ವರದಿಯಲ್ಲಿ ವೈವಿಧ್ಯಮಯ ದೇವತೆಗಳ ಮೂರ್ತಿಗಳನ್ನು ಕಂಪ್ಲಿಯ ಪ್ರಸಿದ್ಧ ಕಲಾವಿದ ಪರಶುರಾಮಪ್ಪ ಚಿತ್ರಗಾರ ಕುಟುಂಬದವರು ಅಲಂಕಾರ ಮಾಡುತ್ತಿರುವುದು.

೬. **"ಪ್ರಜಾವಾಣಿ": ೦೬-೧೨-೨೦೦೬**

"ಪುಣ್ಯದ ಫಲ ಸುಖಕ್ಕೆ ನಾಂದಿ" ವರದಿಯಲ್ಲಿ ಪರಶುರಾಮಪ್ಪನವರಿಗೆ ಶ್ರೀಗಳಿಂದ ಸನ್ಮಾನ. ಪತ್ರಕರ್ತರು: ಪಂಡಿತಾರಾಧ್ಯ. ಕಂಪ್ಲಿ

೭. **"ಕನ್ನಡ ಪ್ರಭ": ೦೬-೧೨-೨೦೦೬**

ಕಂಪ್ಲಿ-೩ ದಿಂಗಳಲ್ಲಿ ನಡೆದ ಸಿದ್ಧತೆ, ಉತ್ಸವಕ್ಕೆ ಗಣೇಶಮೂರ್ತಿ ನಿರ್ಮಾಣ ವರದಿಯಲ್ಲಿ ಸಿದ್ಧ ಹಸ್ತರೆನಿಸಿಕೊಂಡಿರುವ ಕಲಾವಿದ ಪರಶರಾಮಪ್ಪ ಚಿತ್ರಗಾರ.

೮. **"ಸಂಜೆ ವಾಣಿ": ೦೨-೦೯-೨೦೦೮**

ವೈವಿಧ್ಯಮಯ ಗಣೇಶ ವಿಗ್ರಹಗಳಿಗೆ ಅಂತಿಮ ರೂಪ ನೀಡುತ್ತಿರುವ ಕಲಾವಿದ ಪರಶುರಾಮಪ್ಪ ಚಿತ್ರಗಾರ.

೯. **"ವಿಜಯ ಕರ್ನಾಟಕ": ೨೩-೦೯-೨೦೦೮**

ಲವ ಲವಿಕೆ ಅಂಕಣದಲ್ಲಿ ಜಾನಪದ ಸಂವೇಧನೆಯ ಕಲಾವಿದ ಪತ್ರಕರ್ತರು: ಡಬ್ಲೂ ಬಸವರಾಜ ಕಂಪ್ಲಿ.

೧೦. **"ಸಂಯುಕ್ತ ಕರ್ನಾಟಕ": ೦೮-೧೦-೨೦೧೧**

ಚಿತ್ರಗಾರ ಪರಶುರಾಮಪ್ಪಗೆ ಕಲಾಕೇಸರಿ ಪ್ರಶಸ್ತಿ ಪ್ರಧಾನ, ಪತ್ರಕರ್ತರು: ಬಿ ಮಂಜುನಾಥ.

೧೧. **"ಪ್ರಜಾವಾಣಿ: ೧೦-೧೦-೨೦೧೧**

ಚಿತ್ರಗಾರ ಪರಶುರಾಮಪ್ಪ ಈಗ "ಕಲಾಕೇಸರಿ" ಪತ್ರಕರ್ತರು : ಪಂಡಿತಾರಾಧ್ಯ ಕಂಪ್ಲಿ

೧೨. **"ಸಾಕ್ಷಿ" (ತೆಲಗು ಪತ್ರಿಕೆ): ೦೬-೧೦-೨೦೧೧**

ಅದ್ಭುತ "ಚಿತ್ರಗಾರ" ಪರಶುರಾಮಪ್ಪ ಕುಂಚ ನುಂಚಿ ಜಾಲುವಾರಿನ ಎನ್ನೋ ಚಿತ್ರಾಲು. ಪತ್ರಕರ್ತರು: ಜಾನಿ ಕಂಪ್ಲಿ

೧೩. **"ಲೋಕದರ್ಶನ" ೨೬-೦೨-೨೦೧೨** "ಕಟ್ಟಿಗೆ ಕುಸುರಿನ ಕಾಯಕಯೋಗಿ ಚಿತ್ರಗಾರ ಪರಶುರಾಮಪ್ಪ" ಪತ್ರಕರ್ತರು : ಕಿನ್ನೂರೇಶ್ವರ ಕಂಪ್ಲಿ.

೧೪. **"ಸಯುಂಕ್ತ ಕರ್ನಾಟಕ": ೨೮-೦೨-೨೦೧೨** ಪರಶುರಾಮಪ್ಪಗೆ "ಚಿತ್ರಕಲಾ ಸೇವಾಭಾರ್ಗವ" ಪ್ರಶಸ್ತಿ ಪ್ರಧಾನ. ಪತ್ರಕರ್ತರು: ಬಿ. ಮಂಜುನಾಥ ಕಂಪ್ಲಿ.

೧೫. **ಉದಯವಾಣಿ: ೦೧-೦೪-೨೦೧೨** ಹಳ್ಳಿಹಳ್ಳಿಯಲ್ಲೂ ಜನಪದ ಕಲಾ ಸೇವೆ ಪರಶುರಾಮಪ್ಪನ ಕಲಾಸೇವೆ ಗುರುತಿಸಿದ ಸಂಘ-ಸಂಸ್ಥೆಗಳು "ನಾಡಿನುದ್ದಕ್ಕು ಕಲೆ ಪಸರಿಸಿದ ಕಲಾವಿದ" ಸರ್ಕಾರಕ್ಕೆ ಕಾಣಲಿಲ್ಲವೆ?

೧೬. **"ವಿಜಯವಾಣಿ": ೧೬-೦೨-೨೦೧೪** ಚಿತ್ರಕಲಾ ಮಳಿಗೆ ಉದ್ಘಾಟನೆ : ಕಂಪ್ಲಿಯಲ್ಲಿ ನಡೆದ ಕನ್ನಡ ಸಾಹಿತ್ಯ ಜಿಲ್ಲಾ ಸಮ್ಮೇಳನದಲ್ಲಿ ಮಾಜಿ ಸಂಸದ ಕೆ.ಸಿ.ಕೊಂಡಯ್ಯ ಚಿತ್ರಕಲಾ ಪ್ರದರ್ಶನ ಮಳಿಗೆ ಉದ್ಘಾಟಿಸಿದರು.

೧೭. **"ಲೋಕದರ್ಶನ": ೧೯-೦೫-೨೦೧೪** ಬೆಂಗಳೂರಿನಲ್ಲಿ ಶ್ರೀ ನಿಮಿಷಾಂಬಾ ದೇವಿ ಜಯಂತೋತ್ಸವ ಪ್ರತಿಮೆಯನ್ನು ಪ್ರದರ್ಶಿಸಿದ್ದಕ್ಕಾಗಿ ಚಿತ್ರಗಾರ ಪರಶುರಾಮಪ್ಪನವರಿಗೆ ಸನ್ಮಾನ. ಪತ್ರಕರ್ತರು: ಯಮನಪ್ಪ ಕಂಪ್ಲಿ

೧೮. **"ಪ್ರಜಾವಾಣಿ": ೨೭-೦೯-೨೦೧೪**

ವಿಜಯದಶಮಿ ಗೊಂಬೆ ಅಲಂಕಾರ ಆರಂಭ ಪತ್ರಕರ್ತರು: ಪಂಡಿತಾರಾಧ್ಯ ಕಂಪ್ಲಿ

೧೯. **"ಉದಯವಾಣಿ"**: ೧೮-೧೧-೨೦೧೪ ದೆಹಲಿ ಚಿತ್ರಕಲಾ ಪ್ರದರ್ಶನಕ್ಕೆ ಆಯ್ಕೆ : ಹಂಪಿ ಕುರಿತು ರಾಷ್ಟ್ರೀಯ ಚಿತ್ರಕಲಾ ಪ್ರದರ್ಶನ ಮತ್ತು ಕಾರ್ಯಗಾರಕ್ಕೆ ಚಿತ್ರಗಾರ ಪರಶುರಾಮಪ್ಪ ಆಯ್ಕೆಯಾಗಿದ್ದಾರೆ. ಪತ್ರಕರ್ತರು: ಎಸ್. ಎಮ್. ವಿರೂಪಾಕ್ಷಯ್ಯ, ಕಂಪ್ಲಿ

೨೦. **"ಲೋಕದರ್ಶನ"**: ೨೦-೧೨-೨೦೧೫ ಶ್ರೀ ಚಿತ್ರಗಾರ ಪರಶುರಾಮಪ್ಪ ಇವರಿಗೆ "ಪೇಟೆ ಬಸವಶ್ರೀ" ಪ್ರಶಸ್ತಿ ಪ್ರಧಾನ ಕಂಪ್ಲಿ ಪೇಟೆ ಬಸವೇಶ್ವರ ಕಾರ್ಯದರ್ಶಿ ಮಂಡಳಿಯವರು ಚಿತ್ರಗಾರ ಪರಶುರಾಮಪ್ಪ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು.

೨೧. **"ಈನಾಡು ಕರ್ನಾಟಕ"(ತೆಲಗು ಪತ್ರಿಕೆ)**: ೨೩-೦೬-೨೦೧೬ ವಿವಿಧ ರಂಗಲ್ಲೊ ಸೇವೆಂದಿನಚಿನವಾರಿಕಿ ಸನ್ಮಾನಂ ಚಿತ್ರಕಳಾರುಡು ಪರಶುರಾಮಪ್ಪ ದಂಪತುಲನು ಸನ್ಮಾನಿಂಚಾರು.

೨೨. **"ಸಂಯುಕ್ತ ಕರ್ನಾಟಕ"**: ೧೯-೦೨-೨೦೧೬ "ಅನರ್ಘ್ಯ ರತ್ನ ಪ್ರಶಸ್ತಿ ಪ್ರಧಾನ" ಶ್ರೀ ಗುರು ದೊಡ್ಡ ಬಸವೇಶ್ವರ ಜಾತ್ರಾ ಮಹೋತ್ಸವ ಶ್ರೀ ನಂದಿಪುರ ಕ್ಷೇತ್ರದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

೨೩. **"ಸಂಯುಕ್ತ ಕರ್ನಾಟಕ"**: ೨೫-೦೫-೨೦೧೭ "ಚಿತ್ರಗಾರ ಪರಶುರಾಮಪ್ಪ ದಂಪತಿ ಸಂದರ್ಶನ" ಹೊಸಪೇಟೆಯ ಆಕಾಶವಾಣಿ ತಂಡ ಕಂಪ್ಲಿಯ ವಿಜಯನಗರ ಜನಪದ ಚಿತ್ರಕಲಾವಿದ ಹಾಗೂ ಗೊಂಬೆ ತಯಾರಕ ಚಿತ್ರಗಾರ ಪರಶುರಾಮಪ್ಪ ದಂಪತಿಯನ್ನು ಸಂದರ್ಶನ ನಡೆಸಲಾಯಿತು.

೨೪. **"ಪ್ರಜಾವಾಣಿ"**: ೧೯-೦೬-೨೦೧೮ "ಸಂಸ್ಕೃತಿ ಅಧ್ಯಯನ: ಕ್ಯಾಲಿಪೋರ್ನಿಯ ಯಾಲೆ ವಿ.ವಿ ತಂಡ ಭೇಟಿ" ಕಂಪ್ಲಿ ಜನಪದ ಹಿರಿಯ ಚಿತ್ರ ಕಲಾವಿದ ಪರಶುರಾಮಪ್ಪ ಚಿತ್ರಾಗಾರ ಮನೆಗೆ ಕ್ಯಾಲಿಪೋರ್ನಿಯ ಯಾಲೆ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಸಂಸ್ಕೃತಿ ವಿಭಾಗದ ಉಪನ್ಯಾಸಕರು ವಿದ್ಯಾರ್ಥಿಗಳು ಭಾನುವಾರ ಭೇಟಿ ನೀಡಿದ್ದರು.

೨೫. **"ಸಂಯುಕ್ತ ಕರ್ನಾಟಕ"**: ೧೯-೦೬-೨೦೧೮ "ಚಿತ್ರಗಾರನ ಮನೆಗೆ ಯಾಲೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಭೇಟಿ: ಪ್ರೊ. ಡಾ. ಕರೆನ್ ಫೆಸ್" ಸಮುದಾಯಗಳ ಕಲಾತ್ಮಕ ಸಂಬಂಧದ ಅಧ್ಯಯನ ಅಗತ್ಯ.

೨೬. **"ವಿಜಯ ಕರ್ನಾಟಕ"**: ೧೯-೦೬-೨೦೧೮ "ಕಲಾವಿದನ ಕಲೆಗೆ ಮೆಚ್ಚುಗೆ"

೨೭. "ಆಂಧ್ರಜ್ಯೋತಿ": ೧೯-೦೬-೨೦೧೮ "ಕಳಾರಂಗಂಪೈ ಅಧ್ಯಾಯನಿಕಿ ವಿದೇಶಿ ವಿದ್ಯಾರ್ಥುಲು"

೨೮. "ವಿಶ್ವವಾಣಿ": ೨೦-೦೬-೨೦೧೮ "ಭಾರತೀಯ ಕಲೆ ಸಂಸ್ಕೃತಿ ವಿಶಿಷ್ಟತೆಯಿಂದ ಕೂಡಿದೆ"

೨೯. "ಈನಾಡು ಕರ್ನಾಟಕ" (ತೆಲುಗು ಪತ್ರಿಕೆ) "ಭಾರತೀಯ ಶಿಲ್ಪಕಳ ಅದ್ಭುತಂ"

೩೦. "ಉದಯವಾಣಿ": ೨೦-೦೬-೨೦೧೮ (ಕಂಪ್ಲಿಗೆ ಅಧ್ಯಯನಕ್ಕಾಗಿ ಭೇಟಿ) "ಭಾರತೀಯ ಸಂಸ್ಕೃತಿಗೆ ಯಾಲೆ ವಿವಿ ತಂಡ ಫಿದಾ"



ಕಲಾವಿದರಾದ ಪರಶುರಾಮಪ್ಪ ಚಿತ್ರಗಾರ ಮತ್ತು ಸುಮಿತ್ರಮ್ಮರವರನ್ನು ಚಂದನವಾಹಿ ಸಂದರ್ಶಿಸುತ್ತಿರುವುದು



ಪರಶುರಾಮಪ್ಪರವರನ್ನು ಸಂಶೋಧಕರು ಸಂದರ್ಶಿಸುತ್ತಿರುವ ದೃಶ್ಯ



Manaka Piumya